ಸಂಪುಟ: 05 ಸಂಚಿಕೆ: 359 ಪುಟಗಳು: 08 ಶುಕ್ರವಾರ 13 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5
# ಉದಯ ವಾಹಿನಿ
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸಾಧ್ಯವಾದರೆ ಸಹಾಯ ಮಾಡಿ, ಇಲ್ಲದಿದ್ದರೆ ಕೈ ಕಟ್ಟಿಕೊಂಡು ಸುಮ್ಮನೆ ನಡೆಯುವುದನ್ನು ನೋಡುತ್ತಿರಿ, ನಿಮಗೆ ಸಹಾಯ ಮಾಡಲಾಗದಿದ್ದರೆ ನೋಯಿಸಲು ಪ್ರಯತ್ನಿಸದಿರಿ..

# ಯುದ್ಧಾಂತ್ಯಕ್ಕೆ ಮೂರು ಷರತ್ತು
# ಇರಾನ್ ಅಮೆರಿಕಕ್ಕೆ ವಾರ್ನ್



**ಯುದ್ಧಪೀಡಿತ ರಷ್ಯಾ-ಪಾಕ್ ಜೊತೆ ಮಾತುಕತೆ ಬಳಿಕ ಘೋಷಣೆ!**



**ಟೆಹ್ರಾನ್ :** ಇಸ್ರೇಲ್, ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷ ಆರಂಭವಾಗಿ ಇಂದಿಗೆ 13ನೇ ದಿನ. ಅಮೆರಿಕ ಹೊರತಾಗಿ ಸಂಘರ್ಷದಲ್ಲಿ ಭಾಗಿಯಾದ ಎಲ್ಲಾ ರಾಷ್ಟ್ರಗಳು ಹಾನಿಗೆ ಒಳಗಾಗಿವೆ. ಯುಎಸ್ ಯುದ್ಧ ಸಾಮಗ್ರಿಗಳನ್ನು ಕಳೆದುಕೊಂಡಿದ್ದು ಬಿಟ್ಟರೆ ಅದಕ್ಕೆ ಆದ ನಷ್ಟವೇನಿಲ್ಲ. ಆದರೆ, ಎರಡು ರಾಷ್ಟ್ರಗಳ (ಇಸ್ರೇಲ್-ಯುಎಸ್) ದಾಳಿಗೆ ಸಿಲುಕಿರುವ ಇರಾನ್ ಭಾರೀ ನಷ್ಟಕ್ಕೀಡಾಗಿದೆ. ಇತ್ತ ಕ್ಷಿಪಣಿ, ಡ್ರೋನ್, ನೌಕೆ, ವಿಮಾನಗಳನ್ನು ಕಳೆದುಕೊಳ್ಳುವ ಜೊತೆಗೆ ಆಸ್ತಿ-ಪಾಸ್ತಿ ಹಾನಿ ಅನುಭವಿಸಿದೆ. ಆದರೂ, ಇರಾನ್ ಕದನವಿರಾಮಕ್ಕೆ ಒಪ್ಪಲು ಸಿದ್ಧವಿಲ್ಲ. ಬದಲಿಗೆ ಈ ಯುದ್ಧ ನಿಲ್ಲಬೇಕಾದರೆ, ತಾನು ಹಾಕುವ ಷರತ್ತುಗಳನ್ನು ಅಮೆರಿಕ ಒಪ್ಪಬೇಕು ಎಂದಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಯುದ್ಧ ಕೊನೆಗೊಳಿಸಲು ಇರುವ ಏಕೈಕ ಮಾರ್ಗವೆಂದರೆ ನಮ್ಮ ಷರತ್ತುಗಳನ್ನು ಅಮೆರಿಕ ಒಪ್ಪಬೇಕು. ಷರತ್ತುಬದ್ಧವಾಗಿ ಈ ಯುದ್ಧ ನಿಲ್ಲಲಿದೆ. ಇಲ್ಲವಾದಲ್ಲಿ ಎಷ್ಟು ದಿನಗಳವರೆಗೆ ಬೇಕಾದರೂ ಮುಂದುವರಿಯಲಿದೆ ಎಂದಿದ್ದಾರೆ.

**ಅಮೆರಿಕಕ್ಕೆ ಇರಾನ್ ಹಾಕಿದ ಷರತ್ತುಗಳಿವು:** ಯುದ್ಧ ಸ್ಥಗಿತಕ್ಕೆ ಇರಾನ್ ಅಮೆರಿಕಕ್ಕೆ ಮೂರು ಪ್ರಮುಖ ಷರತ್ತುಗಳನ್ನು ಹಾಕಿದೆ. ಇವುಗಳನ್ನು ಯುಎಸ್ ಕಡ್ಡಾಯವಾಗಿ ಒಪ್ಪಿಕೊಳ್ಳಬೇಕು. ಅಂತಾರಾಷ್ಟ್ರೀಯವಾಗಿ ಇವುಗಳನ್ನು ಘೋಷಿಸಬೇಕು ಎಂದಿದೆ. ಈ ಮೂರು ಖಾತರಿಗಳನ್ನು ಅಮೆರಿಕ ನೀಡಿದಲ್ಲಿ ಯುದ್ಧ ತಕ್ಷಣಕ್ಕೆ ನಿಲ್ಲಲಿದೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಹೇಳಿದ್ದಾರೆ.

**ರಷ್ಯಾ-ಪಾಕ್ ಜೊತೆ ಮಾತುಕತೆ:** ಸಂಘರ್ಷದ ನಡುವೆ ಇರಾನ್ ಅಧ್ಯಕ್ಷರು ರಷ್ಯಾ ಮತ್ತು ಪಾಕಿಸ್ತಾನದ ನಾಯಕರ ಜೊತೆ ಮಾತುಕತೆ ನಡೆಸಿದ್ದಾರೆ.

1 ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ತಾರಕಕ್ಕೇರಿರುವ ನಡುವೆ 3 ಷರತ್ತುಗಳನ್ನು ಪೂರೈಸಿದರೆ ಯುದ್ಧ ನಿಲ್ಲಿಸಲು ಸಿದ್ಧ ಎಂದು ಇರಾನ್ ಅಧ್ಯಕ್ಷ ಘೋಷಣೆ

2 ರಷ್ಯಾ ಹಾಗೂ ಪಾಕಿಸ್ತಾನದೊಂದಿಗೆ ಮಾತುಕತೆಗಳ ಬೆನ್ನಲ್ಲೇ ಶಾಂತಿ ಮಂತ್ರ ಜಪಿಸಲು ಸಿದ್ಧವಾಯ್ತಾ ಇರಾನ್

3 ಯುದ್ಧ ನಿಲ್ಲಿಸಲು ಇರಾನ್ ನೀಡಿರುವ 3 ಷರತ್ತುಗಳೇನು

ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಳ್ಳಲು ಇರಾನ್ ಬದ್ಧವಾಗಿದೆ ಎಂದು ಇದೇ ವೇಳೆ ತಿಳಿಸಿದ್ದಾರೆ. ಇರಾನ್‌ನ ಕಾನೂನುಬದ್ಧ ಹಕ್ಕುಗಳಿಗೆ ಮಾನ್ಯತೆ ನೀಡಬೇಕು. ದಾಳಿಯಿಂದ ಆಗಿರುವ ಹಾನಿಗೆ ಪರಿಹಾರ ಕೊಡಬೇಕು. ಭವಿಷ್ಯದಲ್ಲಿ ನಮ್ಮ ಮೇಲೆ ಅಮೆರಿಕ ಯಾವುದೇ ಕಾರಣಕ್ಕೂ ದಾಳಿ ಮಾಡುವಂತಿಲ್ಲ. ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಮಸೌದ್ ಪೆಜೆಶ್ಕಿಯನ್, ರಷ್ಯಾ ಮತ್ತು ಪಾಕಿಸ್ತಾನದ ಮುಖ್ಯಸ್ಥರ ಜೊತೆ ಮಾತುಕತೆ ನಡೆಸಿದೆ. ಮಧ್ಯ ಪ್ರಾಚ್ಯದಲ್ಲಿ ಶಾಂತಿಗಾಗಿ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಿದ್ದೇನೆ ಎಂದಿದ್ದಾರೆ.

**ಇಸ್ರೇಲ್ ಪ್ರತಿಕ್ರಿಯೆ:** ಯುದ್ಧ ನಿಲ್ಲಲು ಇರಾನ್ ಷರತ್ತು ವಿಧಿಸಿದ್ದಕ್ಕೆ ಇಸ್ರೇಲ್ ಖಡಕ್ ಪ್ರತಿಕ್ರಿಯೆ ನೀಡಿದೆ. ಅಗತ್ಯ ಇರುವವರೆಗೆ ಇರಾನ್‌ನೊಂದಿಗೆ ಯುದ್ಧ ಮುಂದುವರಿಸಲು ನಾವು ಸಿದ್ಧರಿದ್ದೇವೆ ಎಂದು ಇಸ್ರೇಲ್‌ನ ಸೇನಾ ವಕ್ತಾರರು ಹೇಳಿದ್ದಾರೆ. ಇತ್ತೀಚೆಗಷ್ಟೇ ದಾಳಿ ನಡೆಸಿದ್ದ ಇಸ್ರೇಲ್ ಪಡೆಗಳು ಸಮುದ್ರದಲ್ಲಿ ಬಾಂಬ್ ಇಡುತ್ತಿದ್ದ ಇರಾನ್‌ನ 16 ಹಡಗುಗಳನ್ನು ಧ್ವಂಸ ಮಾಡಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಅಮೆರಿಕದ ತೈಲ ಟ್ಯಾಂಕರ್ ಮೇಲೆ ದಾಳಿ ನಡೆಸಿ ತೀವ್ರ ಹಾನಿ ಉಂಟು ಮಾಡಿದೆ. ಈ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಸಾವಿಗೀಡಾಗಿದ್ದಾರೆ.

**ಇರಾನ್ ಯುದ್ಧ ನಿಲ್ಲಿಸೋದು ನಮ್ಮ ಕೈಯಲ್ಲಿದೆ ಎಂದ ಟ್ರಂಪ್:** ಇತ್ತ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹ ಯುದ್ಧ ಶೀಘ್ರವೇ ಕೊನೆಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಆದರೆ, ಇದೇ ವೇಳೆ ಯುದ್ಧವನ್ನು ಯಾವಾಗ ನಿಲ್ಲಿಸಬೇಕು ಎಂಬ ನಿರ್ಧಾರವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ನನ್ನ ಕೈಯಲ್ಲಿದ್ದು, ಜಂಟಿಯಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿಕೊಂಡಿದ್ದಾರೆ.ಇತ್ತ 2 ಯುದ್ಧಪೀಡಿತ ರಾಷ್ಟ್ರಗಳ ಸಲಹೆ ಬೆನ್ನಲ್ಲೇ, ಇರಾನ್ ಸಹ ಯುದ್ಧವನ್ನು ನಿಲ್ಲಿಸುವ ಷರತ್ತುಬದ್ಧ ಮಾತುಕತೆಗಳಿಗೆ ಸಿದ್ಧ ಎಂದು ಹೇಳುತ್ತಿದ್ದು, ಇದು ಮಾತುಕತೆಗಳ ಮೇಜಿನವರೆಗೂ ಹೋಗುತ್ತದೋ ಅಥವಾ ಯುದ್ಧಭೂಮಿಯಲ್ಲೇ ಸೆಣಸಾಡುತ್ತಾ ಕಾಲಹರಣ ಮಾಡುತ್ತಾರೋ ಎಂಬುದನ್ನು ಕಾದುನೋಡಬೇಕಿದೆ.

**ಹೊರ್ಮುಜ್ ಜಲಸಂಧಿಯಲ್ಲಿ 2 ಭಾರತೀಯರ ಸಾವು**

ಇದಕ್ಕೂ ಮುನ್ನ ಹೊರ್ಮುಜ್ ಜಲಸಂಧಿಯ ಮೂಲಕ ಭಾರತದ ಗುಜರಾತ್‌ನಲ್ಲಿರುವ ಕಾಂಡ್ಲಾಬಂದರಿಗೆ ಸಾಗುತ್ತಿದ್ದ ಥಾಯ್ ಹಡಗಿನ ಮೇಲೂ ಇರಾನ್ ಡ್ರೋನ್ ದಾಳಿ ನಡೆಸಿದ್ದು, ಈ ದಾಳಿಯಲ್ಲಿ 2 ಭಾರತೀಯರು ಸಾವನ್ನಪ್ಪಿ, 20 ಮಂದಿ ಕಾಣೆಯಾಗಿದ್ದಾರೆಂದು ಭಾರತದ ವಿದೇಶಾಂಗ ಇಲಾಖೆ ಖಚಿತಪಡಿಸಿತ್ತು. ಸದ್ಯ ಇರಾಕ್ ಕರಾವಳಿಯಲ್ಲಿ ನಡೆದಿರುವ ದಾಳಿಯಲ್ಲಿ ಮತ್ತೊರ್ವ ಭಾರತೀಯ ಸಾವನ್ನಪ್ಪಿದ್ದು, ಈ ಕುರಿತು ಅಧಿಕೃತ ಸ್ಪಷ್ಟನೆ ಬಾಕಿಯಿದೆ. ಆದಾಗ್ಯೂ, ಈ ಘಟನೆಗಳು ಗಲ್ಫ್ ಹಾಗೂ ಹೊರ್ಮುಜ್ ಜಲಸಂಧಿಯ ಮೂಲಕ ಸಾಗುವ ಹಡುಗಿನಲ್ಲಿರುವ ಭಾರತೀಯ ಸುರಕ್ಷತೆಯ ಕುರಿತು ಆತಂಕವನ್ನುಂಟು ಮಾಡುವಂತಿದೆ.

**ಇರಾಕ್ ಬಳಿ US ತೈಲ ಟ್ಯಾಂಕರ್ ಸೇಫ್ ಸಿ ವಿಷ್ಣು ಮೇಲೆ ಇರಾನ್ ಸೂಸೈಡ್ ಬೋಟ್ ದಾಳಿ**

ಈ ದಾಳಿಯ ತೀವ್ರತೆ ಎಷ್ಟಿತೆಂದರೆ ಜಲ ಪ್ರದೇಶದಲ್ಲಿ ನಡೆದ ದಾಳಿಗೆ ಹಡುಗಿನಿಂದ ಬೆಂಕಿಯ ಕೆನ್ನಾಲಿಗೆಗಳು ಆಗಸದೆತ್ತರಕ್ಕೆ ಚಿಮ್ಮುತ್ತಿದ್ದು, ಈ ದೃಶ್ಯಗಳು ಸದ್ಯ ಸಾಮಾಜಿಕ ಮಾಧ್ಯಮದಲ್ಲಿ

**ಇರಾನ್ ಸೂಸೈಡ್ ದೋಣಿ ದಾಳಿಗೆ ಟ್ಯಾಂಕರ್ ಧ್ವಂಸ!**



ವೈರಲ್ ಆಗುತ್ತಿದೆ. ಇನ್ನು, ನೀರಿನಲ್ಲಿ ಈ ಮಟ್ಟದ ಜ್ವಾಲೆ ಹಡಗಿನಿಂದ ತೈಲ ಸೋರಿಕೆಯಾಗಿದೆ ಎಂಬುದನ್ನು ಸೂಚಿಸುತ್ತಿದ್ದು, ಜಾಗತಿಕ ಹಡಗು ಟ್ರ್ಯಾಕಿಂಗ್ ವೆಬ್ ಸೈಟ್ ಪ್ರಕಾರ, ಈ ಟ್ಯಾಂಕರ್‌ಗಳು 400,000 ಬ್ಯಾರೆಲ್‌ಗಳಷ್ಟು ಇರಾಕಿ ಕಚ್ಚಾ ತೈಲವನ್ನು ಸಾಗಿಸುತ್ತಿತ್ತು ಎಂದು ಅಂದಾಜಿಸಲಾಗಿದೆ.



**ಇರಾನ್ ಮುಂದಿಟ್ಟ ಷರತ್ತು**

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಇಸ್ರೇಲ್ ಮತ್ತು ಅಮೆರಿಕವೇ ನೇರ ಕಾರಣ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಆರೋಪ ಮಾಡಿದ್ದು ಯುದ್ಧ ನಿಲ್ಲಬೇಕಾದರೆ 3 ಷರತ್ತು ಈಡೇರಿಸಬೇಕು ಎನ್ನುವ ಬೇಡಿಕೆ ಮುಂದಿಟ್ಟಿದ್ದಾರೆ.

- ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು.
- ಸಂಘರ್ಷದ ಸಮಯದಲ್ಲಿ ಉಂಟಾದ ಹಾನಿಗಳಿಗೆ ಪರಿಹಾರ ನೀಡಬೇಕು.
- ಭವಿಷ್ಯದಲ್ಲಿ ಆಕ್ರಮಣ ಮಾಡುವುದಿಲ್ಲ ಎಂದು ದೃಢವಾದ ಅಂತರರಾಷ್ಟ್ರೀಯ ಖಾತರಿಗಳನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಅಮೆರಿಕದ ನೆಲೆಗಳು ಮತ್ತು ಮಧ್ಯಪ್ರಾಚ್ಯ ದೇಶಗಳ ಮೇಲೆ ನಡೆಯುತ್ತಿರುವ ದಾಳಿ ಕೊನೆಯಾಗಬೇಕಾದರೆ ನಮ್ಮ ಮೂರು ಷರತ್ತನ್ನುಗಳನ್ನು ಒಪ್ಪಿಕೊಳ್ಳಬೇಕೆಂದು ಇರಾನ್ ಹೇಳಿದೆ.


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9448225696

ಉದಯ ವಾಹಿನಿ
#: 1230 'JAYAMAHAL 13th cross, 2nd phase, Girinagar, Bangalore-560085.
(Near to bangalore one park, opposite mandya medical)
udayavahininews@gmail.com


## 9ನೇ ಪರಿಚ್ಛೇದಕ್ಕೆ ಮೀಸಲಾತಿ ಕಾಯ್ದೆ: ಸಂಸದರಿಂದ ಮನವಿ

- ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚುವರಿ ಮೀಸಲಾತಿ ನೀಡುವ 'ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆ- 2022' ಅನ್ನು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ಸೇರಿಸುವಂತೆ ಕರ್ನಾಟಕದ ಕಾಂಗ್ರೆಸ್ ಸಂಸದರು ಒತ್ತಾಯಿಸಿದ್ದಾರೆ. ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಅವರಿಗೆ ಸಂಸದರು ಮನವಿ ಸಲ್ಲಿಸಿದರು.

ಬಳಿಕ, ರಾಯಚೂರು ಸಂಸದ ಜಿ.ಕುಮಾರ ನಾಯಕ ಅವರು ಲೋಕಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಈ ಕಾಯ್ದೆಯನ್ನು ಒಂಬತ್ತನೇ ಪರಿಚ್ಛೇದದಲ್ಲಿ ಸೇರಿಸುವ ಪ್ರಸ್ತಾವ ಇನ್ನೂ ಕೇಂದ್ರ ಸರ್ಕಾರದ ಮಟ್ಟದಲ್ಲಿ ಬಾಕಿಯಿರುವುದರಿಂದ ರಾಜ್ಯದ ಲಕ್ಷಾಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ನ್ಯಾಯ ಹಾಗೂ ಸಮರ್ಪಕ ಪ್ರತಿನಿಧಿತ್ವ ದೊರಕುವಲ್ಲಿ ವಿಳಂಬವಾಗುತ್ತಿದೆ ಎಂದು ಅವರು ಗಮನ ಸೆಳೆದಿದ್ದಾರೆ. ಕಾಯ್ದೆಯನ್ನು ಒಂಬತ್ತನೇ ಪರಿಚ್ಛೇದದಲ್ಲಿ ಸೇರಿಸುವ ಪ್ರಸ್ತಾವವನ್ನು ಕರ್ನಾಟಕ ಸರ್ಕಾರವು ಗೃಹ ಸಚಿವಾಲಯಕ್ಕೆ ಕಳುಹಿಸಿತ್ತು. ಗೃಹ ಸಚಿವಾಲಯವು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಅಭಿಪ್ರಾಯ ಕೇಳಿದೆ. ಮೂರು ವರ್ಷಗಳಿಂದ ಪ್ರಸ್ತಾವ ನನೆಗುದಿಗೆ ಬಿದ್ದಿದೆ. ಸಂಸತ್ತಿನ ಪ್ರಸ್ತುತ ಬಜೆಟ್ ಅಧಿವೇಶನದಲ್ಲಿಯೇ ಪರಿಗಣನೆಗೆ ತೆಗೆದುಕೊಳ್ಳುವಂತೆ ಮನವಿ ಮಾಡಿದ್ದಾರೆ.

## ಬಿಪಿಎಲ್ ಆದಾಯ ಮಿತಿ ಪರಿಷ್ಕರಿಸಲು ಸದನದಲ್ಲಿ ಆಗ್ರಹ

- ಉದಯವಾಹಿನಿ, ಬೆಂಗಳೂರು

'ಆದ್ಯತಾ ಪಡಿತರ ಚೀಟಿದಾರರನ್ನು (ಬಿಪಿಎಲ್) ಗುರುತಿಸಲು ವಾರ್ಷಿಕ 1.20 ಲಕ್ಷ ಆದಾಯವನ್ನು ಮಾನದಂಡವಾಗಿ ಈಗಲೂ ಅನುಸರಿಸುತ್ತಿರುವುದು ಸರಿಯಲ್ಲ. ಇದನ್ನು 3 ಲಕ್ಷಕ್ಕೆ ಹೆಚ್ಚಿಸುವಂತೆ ಆಡಳಿತ ಸುಧಾರಣಾ ಆಯೋಗ ಹೇಳಿದೆ. ಈ ಬಗ್ಗೆ ಆಹಾರ ಇಲಾಖೆ ಪರಿಶೀಲಿಸಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಬಿಜೆಪಿಯ ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಪರವಾಗಿ ಉತ್ತರಿಸಿದ ದಿನೇಶ್ ಗುಂಡೂರಾವ್, '2017ರ ಮಾನದಂಡಗಳನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು. ಅನರ್ಹ ಆದ್ಯತಾ ಪಡಿತರ ಚೀಟಿದಾರರನ್ನು (ಬಿಪಿಎಲ್, ಅಂತ್ಯೋದಯ) ಗುರುತಿಸುವ ನೆಪದಲ್ಲಿ ಅರ್ಹ ಕುಟುಂಬಗಳ ಬಿಪಿಎಲ್ ಕಾರ್ಡುಗಳನ್ನೂ ಎಪಿಎಲ್‌ಗೆ ಪರಿವರ್ತಿಸಿದ ಕಾರಣ ಲಕ್ಷಾಂತರ ಕುಟುಂಬಗಳು ಬೀದಿ ಪಾಲಾಗಿವೆ ಎಂದು ಸದಸ್ಯರು ಪಕ್ಷಭೇದ ಮರೆತು ಅಸಮಾಧಾನ. ಆಕ್ರೋಶ ವ್ಯಕ್ತಪಡಿಸಿದರು. 'ಆದ್ಯತಾ ಪಡಿತರ ಚೀಟಿಗಳನ್ನು ಪಡೆಯಲು ಇರುವ 2017ರ ಮಾನದಂಡಗಳನ್ನು ಎಂಟು ವರ್ಷ ಕಳೆದರೂ ಸರ್ಕಾರ ಪರಿಷ್ಕರಿಸಿಲ್ಲ. ತಿಂಗಳಿಗೆ 10 ಸಾವಿರ ಸಂಬಳ ತೆಗೆದುಕೊಳ್ಳುವವನ ಆದಾಯವೂ ವರ್ಷಕ್ಕೆ 1.20 ಲಕ್ಷ ಆಗುತ್ತದೆ. ಆದರೆ, ಈ ಮಾನದಂಡ ಇಟ್ಟುಕೊಂಡು ಲಕ್ಷಾಂತರ ಕುಟುಂಬಗಳು, ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದಿದ್ದರೂ ಐಟಿ ರಿಟರ್ನ್ ಪಡೆದಿರುವ ಕುಟುಂಬಗಳ ಬಿಪಿಎಲ್ ಕಾರ್ಡ್ ಅನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ.

## ಬಿಜೆಪಿ ಶಾಸಕ ಭೈರತಿ ಬಸವರಾಜುಗೆ ಜಾಮೀನು ಮಂಜೂರು

- ಉದಯವಾಹಿನಿ, ಬೆಂಗಳೂರು

ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ಬಿಜೆಪಿ ಶಾಸಕ ಭೈರತಿ ಬಸವರಾಜುಗೆ ಜಾಮೀನು ನೀಡಲಾಗಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಬೆಂಗಳೂರಿನ ಕೆಆರ್ ಪುರಂ ವಿಧಾನಸಭಾ ಕ್ಷೇತ್ರದ ಶಾಸಕ ಭೈರತಿ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ.



ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು, ಎರಡು ಲಕ್ಷ ರೂಪಾಯಿ ಬಾಂಡ್ ಹಾಗೂ ಇಬ್ಬರು ಶ್ಯೂರಿಟಿ ನೀಡಬೇಕಾಗಿದೆ. ಇದೇ ವೇಳೆ ಸಾಕ್ಷ್ಯಾಧಾರ ನಾಶಪಡಿಸುವಂತಿಲ್ಲ ಮತ್ತು ಸಾಕ್ಷಿಗಳನ್ನು ಬೆದರಿಸುವಂತಿಲ್ಲ. ಕೋರ್ಟ್ ಅನುಮತಿ ಇಲ್ಲದೆ ವ್ಯಾಪ್ತಿ ಬಿಟ್ಟು ತೆರಳುವಂತಿಲ್ಲ ಎಂದು ಷರತ್ತು ವಿಧಿಸಲಾಗಿದೆ.

ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಭೈರತಿ ಬಸವರಾಜು ಅವರು ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡಿದ್ದರು. ಕೊಲೆ ಪ್ರಕರಣದಲ್ಲಿ ಏಳು ತಿಂಗಳುಗಳ ಕಾಲ ಅವರು ಕಾನೂನು ಹೋರಾಟ ನಡೆಸಿದ್ದರು. ಈ ಪ್ರಕರಣದಲ್ಲಿ ಅವರಿಗೆ ಹೈಕೋರ್ಟ್‌ನಲ್ಲಿ ಜಾಮೀನು ನಿರಾಕರಣೆ ಮಾಡಲಾಗಿತ್ತು. ಹೈಕೋರ್ಟ್ ನಿರೀಕ್ಷಣಾ ಜಾಮೀನು ನಿರಾಕರಿಸುತ್ತಿದ್ದಂತೆ ಅವರು ಅಹಮದಾಬಾದ್‌ಗೆ ಪರಾರಿಯಾಗಿದ್ದರು. ಬಳಿಕ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂಕೋರ್ಟ್ ಜಾಮೀನು ಅರ್ಜಿ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಫೆಬ್ರವರಿ 13ರಂದು ಬೆಂಗಳೂರಿಗೆ ವಾಪಸ್ಸಾಗಿದ್ದರು. ಈ ವೇಳೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು.

ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಲಾಗಿತ್ತು. ನ್ಯಾಯಾಲಯ ಅವರಿಗೆ ನ್ಯಾಯಾಂಗ ಬಂಧನ ವಿಧಿಸಿತ್ತು. ಬಳಿಕ ಪರಪ್ಪನ ಅಗ್ರಹಾರ ಜೈಲಿಗೆ ಅವರನ್ನು ಶಿಫ್ಟ್ ಮಾಡಲಾಗಿತ್ತು. ಇದೀಗ ಜನಪ್ರತಿನಿಧಿಗಳು ವಿಶೇಷ ನ್ಯಾಯಾಲಯ ಅವರಿಗೆ ಜಾಮೀನು ನೀಡಿದೆ.

**ಬಿಕ್ಲು ಶಿವ ಕೊಲೆ ಪ್ರಕರಣ**

**ಏನಿದು ಪ್ರಕರಣ:** ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ 2025ರ ಜು.15ರಂದು ರೌಡಿ ಶೀಟರ್ ಬಿಕ್ಲು ಶಿವ ಹತ್ಯೆ ನಡೆದಿತ್ತು. ಭಾರತಿನಗರ ಠಾಣಾ ವ್ಯಾಪ್ತಿಯಲ್ಲಿ ರೌಡಿ ಬಿಕ್ಲುಶಿವ ಕೊಲೆ ಮಾಡಲಾಗಿತ್ತು. ಈ ಕೃತ್ಯದಲ್ಲಿ ರೌಡಿ ಜಗ್ಗ ಅಲಿಯಾಸ್ ಜಗ್ಗ, ವಕೀಲ ಅಜಿತ್ ಸೇರಿದಂತೆ 20 ಮಂದಿ ಆರೋಪಿಗಳು ಭಾಗಿಯಾಗಿದ್ದರು ಎಂಬ ಆರೋಪ ಇದೆ. ಈ ಕೊಲೆ ಪ್ರಕರಣದಲ್ಲಿ ಭೈರತಿ ಬಸವರಾಜು ಅವರು ಐದನೇ ಆರೋಪಿಯಾಗಿದ್ದಾರೆ. ಈ ಪ್ರಕರಣವನ್ನು ಸಿಐಡಿ ತನಿಖೆಗೆ ನೀಡಲಾಗಿತ್ತು. ಕೊಲೆ ಪ್ರಕರಣದಲಿ ಇನ್ನೂ ಹಲವು ಮಂದಿ ಭಾಗಿಯಾಗಿರುವ ಅನುಮಾನವಿದೆ. ಈ ನಿಟ್ಟನಲ್ಲಿ ಸಿಐಡಿ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

## ಹಾಲು ಉತ್ಪಾದಕರಿಗೆ ಗುಡ್‌ನ್ಯೂಸ್: ಬಮೂಲ್‌ನಿಂದ ಪ್ರೋತ್ಸಾಹ ಧನ ಘೋಷಣೆ

**■ ಪ್ರತಿ ಲೀಟರ್‌ಗೆ 1 ರೂ.ನಂತೆ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡುವುದಾಗಿ ಡಿಕೆ ಸುರೇಶ್ ಘೋಷಣೆ**

- ಉದಯವಾಹಿನಿ, ಬೆಂಗಳೂರು

ಹಾಲು ಉತ್ಪಾದಕರಿಗೆ ಬಮೂಲ್ (ಬೆಂಗಳೂರು ಸಹಕಾರಿ ಹಾಲು ಒಕ್ಕೂಟ ನಿಯಮಿತ) ಗುಡ್‌ನ್ಯೂಸ್ ನೀಡಿದೆ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗೆ 1 ರೂ. ಹೆಚ್ಚುವರಿ ಹಣವನ್ನು ನೀಡಲು ತೀರ್ಮಾನಿಸಿದೆ. ಈ ಮೂಲಕ ಸರ್ಕಾರದ 5 ರೂ ಸಹಾಯಧನದ ಜತೆಗೆ 1 ರೂ ಪ್ರೋತ್ಸಾಹ ಧನ ಸಿಗಲಿದೆ.

ಈ ಬಗ್ಗೆ ಡೈರಿ ವೃತ್ತದಲ್ಲಿರುವ ಕಚೇರಿಯಲ್ಲಿ ಬಮೂಲ್ ಅಧ್ಯಕ್ಷರಾದ ಡಿಕೆ ಸುರೇಶ್ ಮಾಹಿತಿ ಹಂಚಿಕೊಂಡಿದ್ದಾರೆ. 2025 - 26ನೇ ಸಾಲಿನಲ್ಲಿ ಬಮೂಲ್ 3400 ಕೋಟಿ ರೂ. ವಹಿವಾಟು ಮಾಡಿದ್ದು, 14.50 ಕೋಟಿ ನಷ್ಟದಲ್ಲಿದ್ದ ಸಂಸ್ಥೆಯು ಈ ವರ್ಷ 60 ಕೋಟಿ ಲಾಭ ಕಂಡಿದೆ. ಈ ಹಿನ್ನೆಲೆಯಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ'' ಎಂದು ಅವರು ತಿಳಿಸಿದರು.

**ಏ.10ರ ಒಳಗೆ ರೈತರ ಖಾತೆಗೆ ಹಣ**

**59 ಕೋಟಿ ಹೆಚ್ಚುವರಿ ಹಣ:** ನಮ್ಮ ಒಕ್ಕೂಟದ ಇತಿಹಾಸದಲ್ಲಿ ಮೊದಲನ ಬಾರಿಗೆ ನಾವು ಅವರಿಗೆ ಪ್ರತಿ ಲೀಟರ್ ಗೆ 1 ರೂ. ನಂತೆ 59,39,78,492 ರೂ. ಅನ್ನು ಹೆಚ್ಚುವರಿಯಾಗಿ ನೀಡಲು ತೀರ್ಮಾನಿಸಿದ್ದೇವೆ. ಯುಗಾದಿ ಹಬ್ಬದ ಕೊಡುಗೆಯಾಗಿ ನಮ್ಮ ಆಡಳಿತ ಮಂಡಳಿ ಈ ನಿರ್ಧಾರ ಮಾಡಿದ್ದು, ಮಾ.31 ಅಥವಾ



ಏ.10ರ ಒಳಗಾಗಿ ಅವರ ಖಾತೆಗೆ ಹಣ ಜಮೆ ಮಾಡಲಾಗುವುದು'' ಎಂದು ತಿಳಿಸಿದರು.

''ಕಳೆದ ಸಾಲಿನಲ್ಲಿ ನಮ್ಮ ಒಕ್ಕೂಟದಿಂದ 2900 ಕೋಟಿ ವಹಿವಾಟು ಮಾಡಿದ್ದು, ಈ ವರ್ಷ ಮಾರ್ಚ್ 31ರ ವೇಳೆಗೆ 3,400 ಕೋಟಿಯಷ್ಟು ವಹಿವಾಟು ನಿರೀಕ್ಷೆ ಇಟ್ಟುಕೊಂಡಿದ್ದೇವೆ. ನಮ್ಮಲ್ಲಿ ಆಡಳಿತಾತ್ಮಕ ವೆಚ್ಚ ಹೆಚ್ಚಾಗಿದೆ. ನಮ್ಮಲ್ಲಿ 880 ಖಾಯಂ ಸಿಬ್ಬಂದಿ, 1800 ಗುತ್ತಿಗೆ ಕಾರ್ಮಿಕರು ಇದ್ದಾರೆ. ತಿಂಗಳಿಗೆ 15-16 ಕೋಟಿ ರೂ. ಸಿಬ್ಬಂದಿ ವೆಚ್ಚಕ್ಕೆ ಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಆಡಳಿತಾತ್ಮಕವಾಗಿ, ಮಾರುಕಟ್ಟೆ ವಿಚಾರದಲ್ಲಿ ಸಾಕಷ್ಟು ಬದಲಾವಣೆ, ಸುಧಾರಣೆ ಮಾಡುವ ಜವಾಬ್ದಾರಿ ನಮ್ಮ ಆಡಳಿತ ಮಂಡಳಿಗೆ ಇದೆ. ನಾನು ಬಮೂಲ್ ಅಧ್ಯಕ್ಷನಾದ ಬಳಿಕ ಬದಲಾವಣೆ ಮಾಡುವ ನಿರೀಕ್ಷೆ ರೈತರು, ಕಾರ್ಮಿಕರಲ್ಲಿದೆ. ನಾನು ಏನು ಮಾಡಿದ್ದೇನೋ ಗೊತ್ತಿಲ್ಲ, ಆದರೆ ನನ್ನ ಮೇಲೆ ನಿರೀಕ್ಷೆಯಂತೂ ಇದೆ. ಅದಕ್ಕೆ ತಕ್ಕಂತೆ ಕೆಲಸ ಮಾಡುವಾಗ ನಿರ್ದೇಶಕರು, ಸಿಬ್ಬಂದಿ ಸಹಕಾರ ಬೇಕಾಗುತ್ತದೆ. ಇವರ ಸಹಕಾರದಿಂದ ಒಂದು ಹಂತಕ್ಕೆ ಬಂದಿದ್ದು, ಈ ವರ್ಷ 500 ಕೋಟಿ ರೂ.ನಷ್ಟು ವಹಿವಾಟು ಹೆಚ್ಚಾಗಿದೆ'' ಎಂದು ತಿಳಿಸಿದರು.

**1800 ಗುತ್ತಿಗೆ ಕಾರ್ಮಿಕರಿಗೆ ತಲಾ 5 ಸಾವಿರ ರೂ. ಬೋನಸ್:** ನಮ್ಮ ಸಂಸ್ಥೆ ಲಾಭ ಕಂಡಿರುವ ಹಿನ್ನೆಲೆಯಲ್ಲಿ, ಕಾರ್ಮಿಕರಿಗೆ ಬಾಕಿ ಇದ್ದ 4.68 ಕೋಟಿ ಡಿಎ ಅನ್ನು ನೀಡಲು ತೀರ್ಮಾನಿಸಿದ್ದೇವೆ. 3 ವರ್ಷದಿಂದ ಖಾಯಂ ಆಗದ ಸಿಬ್ಬಂದಿಗಳನ್ನು ಖಾಯಂ ಮಾಡಿದ್ದೇವೆ. ನಮಗೆ ಶಕ್ತಿ ನೀಡುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ತಲಾ 5 ಸಾವಿರ ಬೋನಸ್ ನೀಡಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

**ಎ2 ಮಿಲ್ಕ್ ತುಪ್ಪ ಶೀಘ್ರವೇ ಉತ್ಪನ್ನ ಮಾರುಕಟ್ಟೆಗೆ:** ಸುಧಾರಾಣಿ ಅವರನ್ನು ರಾಯಭಾರಿಯಾಗಿ ಮಾಡಿಕೊಂಡಿದ್ದು ವಿವಾದವಾಗಿರುವ ಬಗ್ಗೆ ಕೇಳಿದಾಗ, ''ದೇಸಿ ಹಾಲು (ಎ2 ಮಿಲ್ಕ್) ಉತ್ಪನ್ನವನ್ನು ಕೇವಲ ನಮ್ಮ ಒಕ್ಕೂಟದಿಂದ ಮಾತ್ರ ಪರಿಚಯಿಸಲಾಗುತ್ತಿದ್ದು, ಅದಕ್ಕೆ ರಾಯಭಾರಿಯನ್ನಾಗಿ ನಾವು ಸುಧಾರಾಣಿ ಅವರ ಜತೆ ಮಾತನಾಡಿದ್ದೇವೆ. ನಮ್ಮ ಒಕ್ಕೂಟದ ಕೆಳಗೆ ನಮ್ಮ ಆಡಳಿತ ಮಂಡಳಿ ತೀರ್ಮಾನ ಮಾಡಿದೆ. ಎ2 ತುಪ್ಪವನ್ನು ಶೀಘ್ರದಲ್ಲೇ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತೇವೆ'' ಎಂದರು.

**ಪ್ರತಿ ಲೀಟರ್‌ಗೆ ಎಷ್ಟು ಸಿಗುತ್ತೆ**

ಜಿಲ್ಲಾ ಹಾಲು ಒಕ್ಕೂಟಗಳು ಹಾಲಿನ ಗುಣಮಟ್ಟಕ್ಕೆ ಅನುಗುಣವಾಗಿ ಪ್ರತಿ ಲೀಟರ್‌ಗೆ ಸುಮಾರು 32 ರಿಂದ 34 ರೂ. ನೀಡುತ್ತವೆ. ಇದು ಜಿಲ್ಲೆಯಿಂದ ಜಿಲ್ಲೆಗೆ 1-2 ರೂಪಾಯಿ ವ್ಯತ್ಯಾಸವಿರುತ್ತದೆ. ರಾಜ್ಯ ಸರ್ಕಾರವು ಪ್ರತಿ ಲೀಟರ್ ಹಾಲಿಗೆ 5 ರೂಪಾಯಿ ಪ್ರೋತ್ಸಾಹಧನವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ಮೂಲ ಬೆಲೆ ಮತ್ತು ಸರ್ಕಾರದ ಪ್ರೋತ್ಸಾಹಧನ ಎರಡನ್ನೂ ಸೇರಿಸಿದರೆ, ಪ್ರತಿ ಲೀಟರ್‌ಗೆ ಸುಮಾರು 37 ರಿಂದ 39 ರೂಪಾಯಿಗಳವರೆಗೆ ಸಿಗುತ್ತದೆ.



**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹16,222/Gram24ct ₹14,870/Gram22ct ಬೆಳ್ಳಿ: ₹280.00/Gram

## ಗೋಸಮ್ಮಾನ ಕಾರ್ಯಾಗಾರ

• ಉದಯವಾಹಿನಿ, ಬೆಂಗಳೂರು

ದೇಶಾದ್ಯಂತ ನಾಲ್ಕು ಹಂತಗಳಲ್ಲಿ ನಡೆಯುವ ಗೋಸಮ್ಮಾನ ಅಭಿಯಾನಕ್ಕೆ ಪೂರ್ವಭಾವಿಯಾಗಿ ಮಾರ್ಚ್ 15 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಪ್ರಚಾರಕರ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಮಹಾಲಕ್ಷ್ಮೀಪುರಂನ ವೆಸ್ಟ್ ಆಫ್ ಕಾರ್ಡ್ ರಸ್ತೆಗೆ ಹೊಂದಿಕೊಂಡಿರುವ ಹಿಂದು ಸಾದರ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಬೆಳಿಗ್ಗೆ 8 ರಿಂದ ಸಂಜೆ 6 ಘಂಟೆಯವರೆಗೆ ನಡೆಯುವ ಈ ಕಾರ್ಯಾಗಾರದಲ್ಲಿ ರಾಜ್ಯ, ಹೊರರಾಜ್ಯದ ಅನೇಕ ಸಂತರು ರಾಜ್ಯದ ಪ್ರತಿ ತಾಲ್ಲೂಕಿನ ಪ್ರಾತಿನಿಧಿಕ ಗೋ ಭಕ್ತರು ಗೋಸಂರಕ್ಷಕರು ಭಾಗವಹಿಸುವರು. ಗೋವು ರಾಷ್ಟ್ರಮಾತೆ ಎಂದು ಉದ್ಘೋಷಿಸಬೇಕು, ದೇಶಾದ್ಯಂತ ಏಕಕಾನೂನಿನಡಿ ಗೋ ಹತ್ಯೆಯನ್ನು ನಿಷೇಧಿಸಬೇಕು, ಗೋಮಾಳವನ್ನು ಗೋವಿಗಾಗಿಯೇ ಉಳಿಸಬೇಕು, ಪ್ರತಿ ಸರ್ಕಾರ ಬಜೆಟ್ಟಿನಲ್ಲಿ ಪ್ರತಿ ಶತ 1 ರಷ್ಟು ಅನುದಾನವನ್ನು ಗೋವಿಗಾಗಿ ಮೀಸಲಿಡಬೇಕು ಎಂಬ ಮುಖ್ಯ ಬೇಡಿಕೆಗಳನ್ನಿಟ್ಟು ಮೊದಲ ಹಂತದಲ್ಲಿ ಏಪ್ರಿಲ್ 27ರಂದು ದೇಶದ ಎಲ್ಲಾ 5400 ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಲಾಗುವುದು.

ಎರಡನೇ ಹಂತದಲ್ಲಿ ಜುಲೈ 27ರಂದು ದೇಶದ ಎಲ್ಲಾ ಡಿಸಿಗಳಿಗೆ, ಮೂರನೇ ಹಂತದಲ್ಲಿ ಅಕ್ಟೋಬರ್ 27ರಂದು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಾಲ್ಕನೇ ಹಂತದಲ್ಲಿ 2027ರ ಫೆಬ್ರವರಿ 27ರಿಂದ ಆಗಸ್ಟ್ 15ರ ವರೆಗೆ ದೆಹಲಿಯಲ್ಲಿ ಅಪಾರ ಸಂಖ್ಯೆಯ ಸಂತರು ಹಾಗೂ ಗೋ ಭಕ್ತರು ಶಾಂತಿಯುತ ಧರಣಿ ನಡೆಸುವರು. ಆಗಲೂ ಬೇಡಿಕೆ ಈಡೇರದಿದ್ದಲ್ಲಿ ಅಂತಿಮವಾಗಿ 2027ರ ಆಗಸ್ಟ್ 16 ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಈ ಅಭಿಯಾನವು ಯಾವುದೇ ಒಂದು ನಿರ್ದಿಷ್ಟ ವ್ಯಕ್ತಿ, ಸಂಸ್ಥೆಯ ಹೆಸರಿನಲ್ಲಿರದೇ ಗೋಮಾತೆ, ನಂದಿ ಬಾಬಾರವರ ನೇತೃತ್ವದಲ್ಲಿ ಸಾಮೂಹಿಕ ಮುಂದಾಳುತ್ವದಲ್ಲಿ ನಡೆಯುತ್ತಿದ್ದು ಅಭಿಯಾನದ ಹೆಸರಿನಲ್ಲಿ ವಂತಿಗೆ ಎತ್ತುವುದನ್ನು ನಿಷೇಧಿಸಿದೆ. ಅಭಿಯಾನದಲ್ಲಿ ಪಾಲ್ಗೊಳ್ಳಲು 9067777323 ಸಂಖ್ಯೆಗೆ ಮಿಸ್ ಕಾಲ್ ನೀಡಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 9571712140

## ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆಗೆ ಸಮಗ್ರ ಚೌಕಟ್ಟನ್ನು ರೂಪಿಸುವಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ರಾಜ್ಯವಾಗಬಹುದು

# ಕೃತಕ ಬುದ್ಧಿಮತ್ತೆ ಹೊಣೆಗಾರಿಕೆ ಸಮಿತಿ ರಚಿಸಿದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಎಐ ವಲಯ ಎಲ್ಲಾ ಕಡೆಗಳಲ್ಲಿ ವಿಸ್ತರಣೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೃತಕ ಬುದ್ಧಿಮತ್ತೆ ಹೊಣೆಗಾರಿಕೆ ಸಮಿತಿಯನ್ನು ರಾಜ್ಯ ಸರ್ಕಾರದ ರಚನೆ ಮಾಡಿದೆ. ಇನ್ಫೋಸಿಸ್‌ನ ಸಹ-ಸಂಸ್ಥಾಪಕ ಹಾಗೂ ಆಕ್ಸಿಲರ್ ವೆಂಚರ್ಸ್‌ನ ಚೇರ್ಮನ್ ಕ್ರಿಸ್ ಗೋಪಾಲಕೃಷ್ಣನ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಆಗಿದ್ದು, 60 ದಿನಗಳಲ್ಲಿ ಮಧ್ಯಂತರ ವರದಿ ಸಲ್ಲಿಕೆ ಮಾಡಲಿದೆ, 90 ದಿನಗಳಲ್ಲಿ ಅಂತಿಮ ವರದಿ, ಶಿಫಾರಸುಗಳನ್ನು ಸಮಿತಿ ಸರ್ಕಾರದ ಮುಂದೆ ಸಲ್ಲಿಸಲಿದೆ. ಸರ್ಕಾರದ ಎಲ್ಲಾ ಹಂತದ ಆಡಳಿತ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಸುರಕ್ಷಿತ, ನೈತಿಕ ಮತ್ತು ಪಾರದರ್ಶಕ ರೀತಿಯಲ್ಲಿ ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡುವುದಕ್ಕೆ ಕರ್ನಾಟಕ ಸರ್ಕಾರವು ಕೃತಕ ಬುದ್ಧಿಮತ್ತೆಯ (ಎಐ) ಹೊಣೆಗಾರಿಕೆ ಸಮಿತಿ ರಚಿಸಿದೆ. ಸಮಿತಿಯಲ್ಲಿ ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಐಟಿ, ಜೈವಿಕ ತಂತ್ರಜ್ಞಾನ, ವಿಜ್ಞಾನ, ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ ಸಹ-ಅಧ್ಯಕ್ಷರಾಗಿದ್ದು, ಉದ್ಯಮ, ಶೈಕ್ಷಣಿಕ, ನೀತಿ - ನಿರೂಪಣೆ, ಪ್ರಮುಖ ಕಾನೂನು ತಜ್ಞರನ್ನು ಒಳಗೊಂಡ 13 ಸದಸ್ಯರು ಈ ಸಮಿತಿಯಲ್ಲಿ ಇದ್ದಾರೆ.

**90 ದಿನಗಳಲ್ಲಿ ಅಂತಿಮ ವರದಿ**

**ಬೆಂಗಳೂರಿನಲ್ಲಿ ಮೊದಲ ಸಭೆ:** ಸಮಿತಿಯ ಮೊದಲ ಸಭೆ ಗುರುವಾರ ಬೆಂಗಳೂರಿನಲ್ಲಿ ನಡೆಯಿತು. ತ್ವರಿತವಾಗಿ ಬದಲಾಗುತ್ತಿರುವ ಎಐ ವಲಯ ಮತ್ತು ಎಐ ತಂತ್ರಜ್ಞಾನಗಳ ಜವಾಬ್ದಾರಿಯುತ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸಮರ್ಥ ಆಡಳಿತ ಚೌಕಟ್ಟುಗಳನ್ನು ರೂಪಿಸುವುದರ ಅಗತ್ಯವನ್ನು ಹಾಗೂ ಅದರಲ್ಲೂ ವಿಶೇಷವಾಗಿ ನಾಗರಿಕರ ಮೇಲೆ ಪರಿಣಾಮ ಬೀರುವ ವ್ಯವಸ್ಥೆಗಳಲ್ಲಿನ ಎಐ ಪ್ರಭಾವದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸರ್ಕಾರದ ಆಡಳಿತ ಯಂತ್ರದಾದ್ಯಂತ ನಿಯೋಜಿಸಲಾಗುವ ಎಐ ಸೌಲಭ್ಯಗಳು ಸುರಕ್ಷಿತ, ನ್ಯಾಯಯುತ, ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಮೂಲಕ ನಾವೀನ್ಯತೆ ಜಾರಿಗೊಳಿಸುವ ಗುರಿ ಹೊಂದಿರುವ ಕರ್ನಾಟಕಕ್ಕಾಗಿ ಜವಾಬ್ದಾರಿಯುತ ಎಐ ನೀತಿ ಮತ್ತು ಅನುಷ್ಠಾನ ಮಾರ್ಗಸೂಚಿಯನ್ನು ಸಮಿತಿಯು ಅಭಿವೃದ್ಧಿಪಡಿಸಲಿದೆ.


ಸಮಿತಿಯ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಅವರು ಪ್ರತಿಕ್ರಿಯಿಸಿ, ಕೃತಕ ಬುದ್ಧಿಮತ್ತೆ ಕುರಿತು ಈ ಸಮಿತಿಯನ್ನು ರಚಿಸಿರುವುದಕ್ಕಾಗಿ ಕರ್ನಾಟಕ ಸರ್ಕಾರವನ್ನು ಅಭಿನಂದಿಸುತ್ತೇನೆ. ಕೃತಕ ಬುದ್ಧಿಮತ್ತೆ ಅತ್ಯಂತ ಪರಿಣಾಮಕಾರಿ ಹಾಗೂ ವ್ಯಾಪಕ ಬದಲಾವಣೆಗಳನ್ನು ತರಬಲ್ಲ ತಂತ್ರಜ್ಞಾನವಾಗಿದ್ದು, ಇದು ಕರ್ನಾಟಕದ ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವ ಮಹತ್ತರ ಸಾಮರ್ಥ್ಯವನ್ನು ಈಗಾಗಲೇ ತೋರಿಸುತ್ತಿದೆ. ಈ ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ನಮಗೆ ಸಾಧ್ಯವಾದರೆ, ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆಗೆ ಸಮಗ್ರ ಚೌಕಟ್ಟನ್ನು ರೂಪಿಸುವಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ರಾಜ್ಯವಾಗಬಹುದು ಎಂದರು.



ಉದಯವಾಹಿನಿ ಚಿತ್ರ

### ಎಐ ಹೊಣೆಗಾರಿಕೆ ಸಭೆ

**ಪಕ್ಷಪಾತ, ಪ್ರತಿಕೂಲ ದಾಳಿಗಳು, ಕೃತಕ ಬುದ್ಧಿಮತ್ತೆ ವ್ಯವಸ್ಥೆಗಳನ್ನು ತಪ್ಪು ದಾರಿಗೆ ಒಯ್ಯಲು ಉದ್ದೇಶಪೂರ್ವಕವಾಗಿ ತಪ್ಪು, ಹಾನಿಕಾರಕ ಮಾಹಿತಿಯನ್ನು ಡೇಟಾದಲ್ಲಿ ಸೇರಿಸುವ ಪ್ರಕ್ರಿಯೆಗಳು ನಡೆಯುವ ಸಾಧ್ಯತೆ ಇದೆ. ಅಲ್ಲದೆ, ಡೀಪ್‌ಫೇಕ್‌ಗಳ ದುರುಪಯೋಗದಂತಹ ಅಪಾಯಗಳನ್ನು ಪರಿಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸ್ವತಂತ್ರ ಲೆಕ್ಕಪರಿಶೋಧನೆಗಳು, ಸೈಬರ್ ಸುರಕ್ಷತಾ ಕ್ರಮಗಳು ಮತ್ತು ತುರ್ತು ಘಟನೆಗೆ ಪ್ರತಿಕ್ರಿಯಿಸುವ ನಿಯಮಾವಳಿಗಳನ್ನು ಶಿಫಾರಸು ಮಾಡುವ ಬಗ್ಗೆ ಎಐ ಹೊಣೆಗಾರಿಕೆ ಸಭೆಯಲ್ಲಿ ಚರ್ಚೆ ನಡೆದಿದೆ.**




### ಸಭೆಯಲ್ಲಿ ಏನೆಲ್ಲಾ ಚರ್ಚೆ?

- ಹೊಣೆಗಾರಿಕೆಯ ಎಐ ತತ್ವಗಳು ಮತ್ತು ರಾಜ್ಯ ಸರ್ಕಾರಕ್ಕೆ ನೀತಿ ನಿರೂಪಣೆಯ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು.
- ದೇಶದ ಎಐ ಆಡಳಿತ ಮಾರ್ಗಸೂಚಿಗಳಿಗೆ ಅನುಗುಣವಾಗಿರುವ ಮತ್ತು ಕಾನೂನುಬದ್ಧತೆ, ನ್ಯಾಯಸಮ್ಮತತೆ, ತಾರತಮ್ಯ ಮಾಡದಿರುವುದು, ಗೌಪ್ಯತೆ, ಸುರಕ್ಷತೆ, ಭದ್ರತೆ, ಪಾರದರ್ಶಕತೆ, ಉತ್ತರದಾಯಿತ್ವ, ರಾಷ್ಟ್ರೀಯ ಹಿತಾಸಕ್ತಿ ಸೇರಿದಂತೆ ಜಾಗತಿಕ ಅತ್ಯುತ್ತಮ ರೂಢಿಗಳ ಜೊತೆಗೆ ಹೊಂದಿಕೆಯಾಗುವ ನೀತಿ ನಿಯಮಗಳನ್ನು ರೂಪಿಸುವುದು.
- ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಕಾಯ್ದೆ, ಮತ್ತು ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಗಳ ಜೊತೆಗಿನ ಹೊಂದಾಣಿಕೆಯಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಅಳವಡಿಸಿಕೊಳ್ಳಲು ಜವಾಬ್ದಾರಿಯುತ ಎಐ ನೀತಿ ಚೌಕಟ್ಟನ್ನು ಶಿಫಾರಸು ಮಾಡುವುದು.
- ನಾಗರಿಕರ ವರ್ತನೆ, ಚಟುವಟಿಕೆಗಳು ಮತ್ತು ಸಮಾಜದಲ್ಲಿ ಅವರ ನಡೆನುಡಿಗಳನ್ನು ಆಧರಿಸಿ ಮೌಲ್ಯಮಾಪನ ಮಾಡುವುದರ ನಿಷೇಧ ಸೇರಿದಂತೆ ಕಾನೂನುಬಾಹಿರ ಅಥವಾ ಅಸಮಾನ ಕಣ್ಗಾವಲು, ನಿಷೇಧಿಸಬೇಕಾದ ಅಥವಾ ನಿರ್ಬಂಧಿಸಬೇಕಾದ ಎಐ ನಡವಳಿಕೆಗಳನ್ನು ಗುರುತಿಸುವುದು.

## ವಾಣಿಜ್ಯ ಸಿಲಿಂಡರ್‌ಗಳ ಕೊರತೆ : ಹಲವೆಡೆ ಹೋಟೆಲ್‌ಗಳು ಬಂದ್

• ಉದಯವಾಹಿನಿ, ಬೆಂಗಳೂರು

ವಾಣಿಜ್ಯ ಸಿಲಿಂಡರ್‌ಗಳ ಅಭಾವ ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹಲವು ಹೋಟೆಲ್‌ಗಳನ್ನು ಬಂದ್ ಮಾಡಲಾಗಿದೆ. ಪ್ರತಿ ದಿನ 5ರಿಂದ 6 ಸಿಲಿಂಡರ್ ಬೇಕಾಗುತ್ತಿದ್ದು, ಈಗ ಕೇವಲ ಒಂದು ಸಿಲಿಂಡರ್ ನೀಡುತ್ತಿದ್ದು, ಇದರಿಂದ ಆಹಾರ ತಯಾರಿಸುವುದು ಸಾಧ್ಯವಾಗುವುದಿಲ್ಲ. ಇದರಿಂದ ಗ್ರಾಹಕರು ಕೂಡ ಕೋಪಗೊಳ್ಳುತ್ತಾರೆ. ಆದರಿಂದ ಸಮಸ್ಯೆ ಬಗೆಹರಿಯುವವರೆಗೂ ಹೋಟೆಲ್‌ಗೆ ಬೀಗ ಹಾಕುವುದೇ ಲೇಸು ಎಂದು ಮಾಲೀಕರು ಕಿಡಿಕಾರಿದ್ದಾರೆ.

ಬೆಂಗಳೂರಿನ ಪ್ರಮುಖ ಪ್ರದೇಶಗಳಾದ ಬಸವನಗುಡಿ, ಮಲ್ಲೇಶ್ವರ, ಬಾಣಸವಾಡಿ, ಕೆ.ಆರ್.ಪುರ, ಸರ್ಜಾಪುರ, ಎಚ್‌ಎಸ್‌ಆರ್ ಲೇಔಟ್ ಇಂದಿರಾನಗರ ಸೇರಿದಂತೆ ಹಲವು ಕಡೆ ಹೋಟೆಲ್‌ಗಳಿಗೆ ಬೀಗ ಜಡಿಯಲಾಗಿದೆ. ಕಾಫಿ-ಟೀ ಮತ್ತು ಉಪಹಾರಗಳನ್ನು ಚಿಕ್ಕಪುಟ್ಟ ಹೋಟೆಲ್‌ಗಳು ಕಾರ್ಯ ನಿರ್ವಹಿಸುತ್ತಿದ್ದರೂ ಯಾವಾಗ ಅನಿಲ ಖಾಲಿಯಾಗುತ್ತದೆಯೋ ಎಂಬ ಆತಂಕ ಶುರುವಾಗಿದೆ.

ಕೆಲವು ಪಂಚತಾರಾ ಹೋಟೆಲ್‌ಗಳು, ಪಬ್, ರೆಸ್ಟೋರೆಂಟ್‌ಗಳು ಸೇರಿದಂತೆ ಹಲವರು ಖಾಸಗಿ ಕಂಪನಿಗಳ ವಾಣಿಜ್ಯ ಸಿಲಿಂಡರ್‌ಗಳನ್ನು ತುರ್ತಾಗಿ ಹೆಚ್ಚಿನ ಬೆಲೆಗೆ ತರಿಸಿಕೊಳ್ಳುತ್ತಿದ್ದಾರೆ.ಇದಲ್ಲದೆ ಕೆಲವೆಡೆ ಪಿಜಿ , ಲಾಡ್ಜ್‌ಗಳಲ್ಲೂ ಕೂಡ ನಿಗದಿತ ಸಮಯಕ್ಕೆ ಮಾತ್ರ ಊಟದ ವ್ಯವಸ್ಥೆ ಎಂಬ ಬೋರ್ಡ್‌ಗಳನ್ನು ಹಾಕಲಾಗುತ್ತಿದೆ. ಪರಿಸ್ಥಿತಿ ಗಂಭೀರಗೊಳ್ಳುತ್ತಿದ್ದು, ಕೂಡಲೇ ಆತಿಥ್ಯ ವಲಯಕ್ಕೆ ಎದುರಾಗುತ್ತಿರುವ ತುರ್ತು ಪರಿಸ್ಥಿತಿಯನ್ನು ಕೂಡಲೇ ಬಗೆಹರಿಸಬೇಕು ಎಂದು ಒತ್ತಡ ಕೇಳಿಬಂದಿದೆ. ಆದರೆ ಕೊಲ್ಲಿ ರಾಷ್ಟ್ರಗಳಲ್ಲಿ ಎದುರಾಗಿರುವ ಸಂಘರ್ಷದಿಂದ ಅನಿಲ ಆಮದು ಕಷ್ಟವಾಗುತ್ತಿದ್ದು, ಸದ್ಯ ಗೃಹಬಳಕೆ ಮತ್ತು ಕೆಲವು ಕೈಗಾರಿಕಾ ಬಳಕೆಗಾಗಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಆದ್ಯತೆ ಮೇಲೆ ನೀಡಲಾಗುತ್ತಿದೆ. ಸದ್ಯ ಬೆಂಗಳೂರು ಅಲ್ಲದೆ ಚಿಕ್ಕಮಗಳೂರು, ಬೀದರ್, ಹುಬ್ಬಳ್ಳಿ, ಚಿಕ್ಕಬಳ್ಳಾಪುರ, ಕೊಪ್ಪಳ, ಮೈಸೂರು ಸೇರಿದಂತೆ ರಾಜ್ಯದ ಹಲವೆಡೆ ಗ್ಯಾಸ್ ಎಮರ್ಜೆನ್ಸಿ ಶುರುವಾಗಿದೆ.

## ಕಂಪೆನಿಯ ಉನ್ನತಾಧಿಕಾರಿಗೆ ಡಿಜಿಟಲ್ ಅರೆಸ್ಟ್ ಮಾಡಿ 32 ಕೋಟಿ ಸುಲಿಗೆ

• ಉದಯವಾಹಿನಿ, ಬೆಂಗಳೂರು

ಪ್ರತಿಷ್ಠಿತ ಕಂಪನಿಯ ಸಿಇಒ ಹುದ್ದೆಗೆ ಸರಿಸಮಾನವಾಗಿದ್ದ ಹಾಗೂ ತಾಂತ್ರಿಕವಾಗಿ ಪರಿಣಿತವಾಗಿದ್ದ ವ್ಯಕ್ತಿಯೊಬ್ಬರು ಡಿಜಿಟಲ್ ಅರೆಸ್ಟ್ ಜಾಲದಲ್ಲಿ ಸಿಲುಕಿ 32 ಕೋಟಿ ರೂ. ಕಳೆದುಕೊಂಡಿದ್ದಾರೆ ಎಂಬ ಆತಂಕಕಾರಿ ಸಂಗತಿಯನ್ನು ಡಾ.ಜಿ.ಪರಮೇಶ್ವರ್ ಅವರು ವಿಧಾನಪರಿಷತ್‌ಗೆ ತಿಳಿಸಿದರು.

ಜೆಡಿಎಸ್ ಶಾಸಕ ಗೋವಿಂದಾಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಡಿಜಿಟಲ್ ಅರೆಸ್ಟ್ ಹಾಗೂ ಸೈಬರ್ ಅಪರಾಧಗಳಿಂದ ದೊಡ್ಡ ಮಟ್ಟದಲ್ಲಿ ವಂಚನೆಯಾಗುತ್ತದೆ ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದರು.

ಸೈಬರ್ ಅಪರಾಧವನ್ನು ತಡೆಯಲು ನಮ ರಾಜ್ಯದಲ್ಲಿ ಆಗಿರುವಷ್ಟು ಕೆಲಸ ಬೇರೆ ರಾಜ್ಯಗಳಲ್ಲಿ ಆಗಿಲ್ಲ. ಸೈಬರ್ ಅಪರಾಧವನ್ನು ತಡೆಯಲು 33 ಠಾಣೆಗಳನ್ನು ಪ್ರಾರಂಭಿಸಲಾಗಿದೆ. ಕಾನ್ಸ್‌ಟೇಬಲ್‌ನಿಂದ ಇನ್ಸ್‌ಪೆಕ್ಟರ್‌ವರೆಗೂ ತರಬೇತಿ ನೀಡಿ ಆ ಠಾಣೆಗಳಿಗೆ ನಿಯೋಜಿಸಲಾಗುತ್ತಿದೆ ಎಂದು ಹೇಳಿದರು. ಬೆಂಗಳೂರಿನಲ್ಲಿ ಕುಳಿತ ವ್ಯಕ್ತಿಯೊಬ್ಬರು ಅಮೆರಿಕಾದಲ್ಲಿ ವಂಚನೆ ಮಾಡಿದ್ದಾರೆ. ಈ ರೀತಿಯ ವಂಚನೆಗೆ ಯಾವುದೇ ಗಡಿಯ ಮಿತಿ ಇಲ್ಲ. ತಂತ್ರಜ್ಞಾನದಲ್ಲಿ ದೊಡ್ಡ ಮಟ್ಟದಲ್ಲಿ ನೆಗೆಟಿವ್ ಬದಲಾವಣೆಯಾಗುತ್ತಿದ್ದು, ಯಾವುದೇ ರೀತಿಯ ಹಣಕಾಸಿನ ವ್ಯವಹಾರ ಮಾಡುವುದು ಕಷ್ಟಕರ ಪರಿಸ್ಥಿತಿ ಎದುರಾಗುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು. ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ



42 ಸಾವಿರ ಖಾತೆಗಳನ್ನು ಸೀಜ್ ಮಾಡಲಾಗಿದೆ. 500 ಜನರನ್ನು ಬಂಧಿಲಾಗಿದೆ. ಬ್ಯಾಂಕ್‌ನಲ್ಲಿರುವ ನಮದೇ ಹಣ ಸುರಕ್ಷಿತವಾಗಿದೆಯೋ ಇಲ್ಲವೋ ಎಂಬ ಆತಂಕ ಕಾಡುವಂತಾಗಿದೆ. ಪ್ರಸಕ್ತ ವರ್ಷ 345 ಡಿಜಿಟಲ್ ಅರೆಸ್ಟ್ ಪ್ರಕರಣಗಳು ದಾಖಲಾಗಿದ್ದು, 115 ಕೋಟಿ ರೂ. ವಂಚನೆಯಾಗಿದೆ ಎಂದು ಹೇಳಿದರು.

2022 ರಿಂದ 2024ರವರೆಗೆ ಸೈಬರ್ ಅಪರಾಧಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿತ್ತು. ರಾಜ್ಯಸರ್ಕಾರ ಇಂತಹ ಅಪರಾಧಗಳನ್ನು ನಿಯಂತ್ರಿಸಲು ಕೈಗೊಂಡ ದಿಟ್ಟ ಕ್ರಮದಿಂದಾಗಿ ನಿಯಂತ್ರಣವಾಗುತ್ತಿದ್ದು, ಅಪರಾಧಗಳ ಸಂಖ್ಯೆ ಇಳಿಮುಖವಾಗಿದೆ. 2025 ರಲ್ಲಿ 14899 ಸೈಬರ್ ಅಪರಾಧಗಳು ದಾಖಲಾಗಿದ್ದು, 10 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. 9 ಪ್ರಕರಣಗಳು ಖುಲಾಸೆಯಾಗಿವೆ. 2020ರ ಫೆಬ್ರವರಿಯಲ್ಲಿ 2007 ಪ್ರಕರಣಗಳು ದಾಖಲಾಗಿವೆ ಎಂದು ಅವರು ಮಾಹಿತಿ ನೀಡಿದರು. ಸೈಬರ್ ಅಪರಾಧಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಅವುಗಳನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ರಾಜ್ಯದಲ್ಲಿ ಡಿಜಿಪಿ ಸೈಬರ್ ಕಮಾಂಡ್ ಹುದ್ದೆಯನ್ನು ಸೃಜಿಸಲಾಗಿದೆ. ಅಲ್ಲದೆ ಸಾರ್ವಜನಿಕರನ್ನು ಸಾಕಷ್ಟು ಜಾಗೃತಿಗೊಳಿಸುವ ಕಾರ್ಯವನ್ನೂ ಮಾಡಲಾಗುತ್ತಿದೆ. ಶಾಲಾ-ಕಾಲೇಜುಗಳಲ್ಲೂ ಕೂಡ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧ, ಡಿಜಿಟಲ್ ಅರೆಸ್ಟ್ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

2021-22ರಲ್ಲಿ 446 ಕೋಟಿ ರೂ. ವಂಚನೆಯಾಗಿದ್ದರೆ, ವಸೂಲಾಗಿದ್ದು 96 ಕೋಟಿ ರೂ. ಮಾತ್ರ. 2024ರಲ್ಲಿ 2399 ಕೋಟಿ ರೂ. ವಂಚನೆಯಾಗಿದ್ದರೆ, ವಸೂಲಾಗಿದ್ದು 395 ಕೋಟಿ ರೂ. ಮಾತ್ರ. 2025ರಲ್ಲಿ 2200 ಕೋಟಿ ರೂ. ವಂಚನೆಯಾಗಿದ್ದರೆ 231 ಕೋಟಿ ರೂ. ಮಾತ್ರ ವಸೂಲಾಗಿದೆ ಎಂದು ಮಾಹಿತಿ ನೀಡಿದರು. ಸುದೀರ್ಘ ಉತ್ತರ ನೀಡಿದ ಅವರು, 2024-25ನೇ ಸಾಲಿಗೆ ಹೋಲಿಸಿದರೆ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಇಳಿಮುಖವಾಗುತ್ತಿವೆ ಎಂದು ಹೇಳಿದರು.ಸಂತ್ರಸ್ತರ ದೂರುಗಳನ್ನು ಆಲಿಸಲು ಪ್ರತೀ ತಿಂಗಳ ಮೂರನೇ ಭಾನುವಾರವನ್ನು ಠಾಣಾ ವ್ಯಾಪ್ತಿಯಲ್ಲಿ ನೊಂದವರ ದಿನ ಎಂಬ ಕಾರ್ಯಕ್ರಮವನ್ನು ಆಯೋಜಿಲಾಗುತ್ತಿದೆ ಎಂದು ಅವರು ತಿಳಿಸಿದರು.

## ಮೇ ಅಂತ್ಯದೊಳಗೆ ತುಂಗಭದ್ರಾ ಜಲಾಶಯದ 6 ಗೇಟ್ ಬದಲಾವಣೆ : ಡಿಕೆಶಿ

• ಉದಯವಾಹಿನಿ, ಬೆಂಗಳೂರು

ತುಂಗಭದ್ರಾ ಜಲಾಶಯದ ಆರು ಗೇಟುಗಳನ್ನು ಮೇ ಅಂತ್ಯದೊಳಗೆ ಬದಲಾವಣೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಪರಿಷತ್‌ಗೆ ಗುರುವಾರ ತಿಳಿಸಿದರು.

ಶೂನ್ಯವೇಳೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಟಿ.ಎ.ಶರವಣ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಡಿಸಿಎಂ, ಜಲಾಶಯದ ಗೇಟುಗಳು 50 ವರ್ಷಗಳಷ್ಟು ಹಳೆಯದಾಗಿದ್ದು ಅವುಗಳನ್ನು ತೆಗೆದುಹಾಕಿ ಹೊಸ ಗೇಟುಗಳನ್ನು ಅಳವಡಿಸಲಾಗುವುದು ಎಂದರು. ಈ ಜಲಾಶಯ ತೆಲಂಗಾಣ, ಆಂಧ್ರಪ್ರದೇಶ ಹಾಗೂ ಕರ್ನಾಟಕ ಸೇರಿದಂತೆ ಮೂರು ರಾಜ್ಯಗಳಿಗೆ ಸಂಬಂಧಿಸಿದಾಗಿದ್ದು, ನೆರೆಯ ರಾಜ್ಯಗಳ ಸಹಕಾರವೂ ಬೇಕಾಗಿದೆ. ಗೇಟು ಅಳವಡಿಕೆ ಮಾಡುವುದನ್ನು ಅಹಮದಾಬಾದ್ ಕಂಪನಿಗೆ ನೀಡಲಾಗಿದ್ದು, ಈಗಾಗಲೇ ಸಾಮಗ್ರಿಗಳು ಬಂದಿದ್ದು ಗೇಟು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಶರವಣ, ತುಂಗಾಭದ್ರ ಜಲಾಶಯದ ಗೇಟುಗಳ ದುರಸ್ತಿ ಕಾರ್ಯವಾಗದೆ ಅಚ್ಚುಕಟ್ಟು ಪ್ರದೇಶದ ರೈತರ ಬದುಕು ಮೂರಾಬಟ್ಟೆಯಾಗಿದೆ ಮುಂಗಾರು ಮಳೆ ಆರಂಭವಾಗುವ ಮುನ್ನ ಎಲ್ಲಾ ಗೇಟುಗಳನ್ನು ಅಳವಡಿಸಬೇಕು ಇಲ್ಲಿಯವರೆಗೆ ಕೇವಲ 12 ಗೇಟುಗಳನ್ನು ಮಾತ್ರ ಮುಗಿದಿದೆ. ಇಲ್ಲದಿದ್ದರೆ, ಕಾಲುವೆ ಮೂಲಕ ನೀರು ಹರಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಜಲಾಶಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ನೀರು ಸಂಗ್ರಹಿಸಲಾಗದೆ ನೆರೆಯ ರಾಜ್ಯಗಳ ಪಾಲಾಗುತ್ತಿದೆ. ಸಮನಾಂತರ ಜಲಾಶಯ ನಿರ್ಮಾಣ ಮಾಡುವ ವಿಚಾರವೂ ನೆನೆಗುದಿಗೆ ಬಿದ್ದಿದೆ.

ರಾಯಚೂರು, ಕೊಪ್ಪಳ, ಬಳ್ಳಾರಿಯಲ್ಲಿ ಭತ್ತ ಬೆಳೆಯುವ ರೈತರಿಗೂ ತೊಂದರೆಯಾಗುತ್ತಿದೆ. ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಸರ್ಕಾರ ಶೀಘ್ರವೇ ಜಲಾಶಯದ 33 ಗೇಟುಗಳನ್ನು ಅಳವಡಿಸಿ ರೈತರಿಗೆ ನೆರವಾಗಬೇಕು ಎಂದು ಆಗ್ರಹಿಸಿದರು.



## ಅರ್ಹತೆ ಮೇರೆಗೆ ಎಸ್‌ಪಿ ಮುಂಬಡ್ತಿಗೆ ಕ್ರಮ : ಗೃಹಚಿವ ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ಡಿವೈಎಸ್ಪಿ ವೃಂದದ ಜೇಷ್ಠತಾ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹತೆ ಮೇರೆಗೆ ಪೊಲೀಸ್ ಅಧೀಕ್ಷಕರ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹಚಿವ ಡಾ.ಜಿ.ಪರಮೇಶ್ವರ್ ವಿಧಾನಪರಿಷತ್‌ನಲ್ಲಿ ಗುರುವಾರ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಪುಟ್ಟಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಜೇಷ್ಠತಾ ಪಟ್ಟಿ ಪರಿಷ್ಕರಿಸುವ ವಿಷಯದಲ್ಲಿ ಪರಿಣತಿ ಹೊಂದಿರುವ ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ಬಿ.ಕೆ.ಚಿನ್ನಮಾರಯ್ಯ ಅವರನ್ನು ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಅವರ ಸಲಹೆಯಂತೆ ಜೇಷ್ಠತಾ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ ಎಂದರು. 2015 ರಲ್ಲಿ ತಾವು ಗೃಹಸಚಿವರಾಗಿದ್ದಾಗ ಹತ್ತು ವರ್ಷಗಳಿಂದ ಡಿವೈಎಸ್ಪಿಗಳಿಗೆ ಬಡ್ತಿ ಕೊಟ್ಟಿರಲಿಲ್ಲ. ಆಗ 27 ಡಿವೈಎಸ್ಪಿಗಳಿಗೆ ಐಪಿಎಸ್‌ಗೆ ಬಡ್ತಿ ಸಿಕ್ಕಿತ್ತು. ನೇರ ನೇಮಕಾತಿಯವರಿಗೆ ಹೆಚ್ಚು ಅವಕಾಶ ಸಿಗಲಿ ಎಂಬ ಉದ್ದೇಶದಿಂದ ಮುಂಬಡ್ತಿ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ. ನೇರ ನೇಮಕಾತಿಯಲ್ಲಿ ಕನ್ನಡಿಗರಿಗೆ ಹೆಚ್ಚು ಅವಕಾಶ ಸಿಗುತ್ತದೆ. ಹೀಗಾಗಿ ಕನ್ನಡಿಗರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು. ಹೊರ ರಾಜ್ಯ ಬಡ್ತಿ ನೀಡುತ್ತಿರುವ ಮಾದರಿಯನ್ನು ಅಧ್ಯಯನ ಮಾಡಿ ಅದು ಒಳ್ಳೆಯದಾಗಿದ್ದರೆ ರಾಜ್ಯದಲ್ಲೂ ಪರಿಗಣಿಸಲಾಗುವುದು ಎಂದು ಹೇಳಿದರು. ಡಿವೈಎಸ್ಪಿಗಳಿಗೆ ಮುಂಬಡ್ತಿ ನೀಡುವ ಪ್ರಮಾಣ ಕಡಿಮೆ ಮಾಡಿರುವುದರಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂದು ಪುಟ್ಟಣ್ಣ ಆರೋಪಿಸಿದರು.

## ಸಚಿವ ಗುಂಡೂರಾವ್ ಅವರನ್ನು ಸಂಪುಟದಿಂದ ವಜಾ ಮಾಡುವವರೆಗೂ ಆರೋಗ್ಯ ಇಲಾಖೆ ಸುಧಾರಿಸುವುದಿಲ್ಲ : ಆರ್.ಅಶೋಕ್


• ಉದಯವಾಹಿನಿ, ಬೆಂಗಳೂರು

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಸಂಪುಟದಿಂದ ವಜಾ ಮಾಡುವವರೆಗೂ ಆರೋಗ್ಯ ಇಲಾಖೆ ಸುಧಾರಿಸುವುದಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ದಿನೇಶ್ ಗುಂಡೂರಾವ್ ಅವರನ್ನು ಅನಾರೋಗ್ಯ ಸಚಿವ ಎಂದು ಜರಿದಿದ್ದಾರೆ. ದಿನಬೆಳಗಾದರೆ ಒಂದೊಂದು ಹೊಸ ಎಡವಟ್ಟುಗಳೊಂದಿಗೆ ಸುದ್ದಿ ಆಗುತ್ತಿರುವ ಆರೋಗ್ಯ ಇಲಾಖೆ, ಇವತ್ತು 230 ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೆಳದರ್ಜೆಗಿಳಿಸುವ ಆಘಾತಕಾರಿ ನಡೆಗೆ ಸುದ್ದಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಸಿಎಚ್‌ಸಿಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಏಕಾಏಕಿ ತಜ್ಞ ವೈದ್ಯರನ್ನು ತಾಲ್ಲೂಕು ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಿದರೆ, ಆರೋಗ್ಯ ಸೇವೆ ಆರಿಸಿ ಸಿಎಚ್ ಸಿಗಳಿಗೆ ದಿನನಿತ್ಯ ಭೇಟಿ ನೀಡುವ ನೂರಾರು ಹೊರರೋಗಿಗಳ ಗತಿ ಏನು ಸ್ವಾಮಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ ಮಾಡಲು ಯೋಗ್ಯತೆ ಇಲ್ಲದ ಸರ್ಕಾರ ಈ ರೀತಿ ಏಕಾಏಕಿ ವೈದ್ಯರನ್ನು ಸಿಎಚ್‌ಸಿಗಳಿಂದ ತಾಲ್ಲೂಕು ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಲು ಮುಂದಾಗಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ಎಷ್ಟು ದಿವಾಳಿ ಆಗಿದೆ ಎನ್ನುವುದಕ್ಕೆ ಮತ್ತೊಂದು ತಾಜಾ ಉದಾಹರಣೆಯಾಗಿದೆ ಎಂದು ಅವರು ಆಪಾದಿಸಿದ್ದಾರೆ.

ಕೈಗೂ ಸಿಗದ, ಫೋನಿಗೂ ಸಿಗದ ಸಚಿವರ ಮೇಲೆ ಶಾಸಕರಿಗೆ ಅಸಮಾಧಾನವಿದೆ. ಮೂರು ವರ್ಷಗಳಿಂದ ನಯಾ ಪೈಸೆ ಅಭಿವೃದ್ಧಿ ಕೆಲಸ ಮಾಡದ ಶಾಸಕರು, ಸರ್ಕಾರದ ಮೇಲೆ ಕನ್ನಡಿಗರಿಗೆ ಬೇಸರವಿದೆ ಎಂದು ಅವರು ಆರೋಪಿಸಿದ್ದಾರೆ.

### ಅಭಿವೃದ್ಧಿ ಸಾಧ್ಯವಿಲ್ಲ

**ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ, ಕನ್ನಡಿಗರಿಗೆ ನೆಮದಿ ಇಲ್ಲ ಎಂದು ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ತಾನು ಕುರ್ಚಿಯಲ್ಲಿ ಇರುತ್ತೇನೋ ಇಲ್ಲವೋ ಎಂದು ಸ್ಪಷ್ಟನೆ ಕೊಡದೆ ತಮನ್ನ ಲೇಮ್‌ಡೆಕ್ ಸಿಎಂ ಮಾಡಿರುವ ಹೈಕಮಾಂಡ್ ಮೇಲೆ ಮುಖ್ಯಮಂತ್ರಿಗಳಿಗೆ ಅಸಮಾಧಾನವಿದೆ. ಕೊಟ್ಟ ಮಾತಿಗೆ ತಪ್ಪಿ, ಕುರ್ಚಿ ಬಿಟ್ಟುಕೊಡದೆ ಸತಾಯಿಸುತ್ತಿರುವ ಮುಖ್ಯಮಂತ್ರಿಗಳ ಮೇಲೆ ಉಪಮುಖ್ಯಮಂತ್ರಿಗಳಿಗೆ ಅಸಮಾಧಾನವಿದೆ ಎಂದು ವ್ಯಂಗ್ಯವಾಡಿದ್ದಾರೆ.**



## ಆಟೋ, ಟ್ಯಾಕ್ಸಿದರ ದುಪ್ಪಟ್ಟು : ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಮಧ್ಯಪ್ರಾಚ್ಯದ ದೇಶಗಳಲ್ಲಿ ಆರಂಭವಾಗಿರುವ ಯುದ್ಧದ ಪರಿಣಾಮ ದೇಶದ ಹಲವು ಕ್ಷೇತ್ರಗಳ ಮೇಲೆ ಕಾಣಿಸಿಕೊಳ್ಳುತ್ತಿರುವ ಬೆನ್ನಲ್ಲೇ, ಕೆಲ ಆಟೋ, ಟ್ಯಾಕ್ಸಿ ಚಾಲಕರು ಸಾರ್ವಜನಿಕರಿಂದ ದುಪ್ಪಟ್ಟು ದರ ವಸೂಲಿ ಮಾಡುತ್ತಿರುವ ಆರೋಪ ಕೇಳಿ ಬರುತ್ತಿದೆ. ಆಟೋ ಗ್ಯಾಸ್ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಕೆಲ ಚಾಲಕರು ಮೀಟರ್‌ಗಿಂತ ಹೆಚ್ಚಿನ ಹಣವನ್ನು ಗ್ರಾಹಕರ ಬಳಿ ವಸೂಲಿ ಮಾಡುತ್ತಿದ್ದಾರೆ ಎಂದು ಪ್ರಯಾಣಿಕರು ಆರೋಪಿಸುತ್ತಿದ್ದಾರೆ.

ಹಲವು ಪ್ರದೇಶಗಳಲ್ಲಿ ಗ್ಯಾಸ್ ಬಂಕ್‌ಗಳು ಮುಚ್ಚಿರುವುದರಿಂದ, ಸರಿಯಾದ ಪ್ರಮಾಣದಲ್ಲಿ ಗ್ಯಾಸ್ ಪೂರೈಕೆ ಆಗದ ಕಾರಣ ಈ ಪರಿಸ್ಥಿತಿಯನ್ನು ಕೆಲ ಚಾಲಕರು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿದೆ. ಗ್ಯಾಸ್ ಕೊರತೆಯನ್ನೇ ನೆಪ ಮಾಡಿಕೊಂಡು ಕೆಲವು ಆಟೋ ಹಾಗೂ ಟ್ಯಾಕ್ಸಿ



ಚಾಲಕರು ನೇರವಾಗಿ ಹೆಚ್ಚುವರಿ ದರ ಕೇಳುತ್ತಿದ್ದು, ಇದರಿಂದ ದಿನನಿತ್ಯ ಪ್ರಯಾಣ ಮಾಡುವ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮೀಟರ್ ಪ್ರಕಾರ ಹೋಗಲು ಚಾಲಕರು ನಿರಾಕರಿಸುವ ಘಟನೆಗಳು ಕೂಡ ನಗರದಲ್ಲಿ ಹೆಚ್ಚುತ್ತಿರುವುದಾಗಿ ಸಾರ್ವಜನಿಕರು ದೂರಿದ್ದಾರೆ. ಇದರ ಜೊತೆಗೆ ಮುಂದಿನ ವಾರ ಸಾಲು ಸಾಲು ರಜೆಗಳು ಹಾಗೂ ಯುಗಾದಿ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಬಸ್ ಮಾಲೀಕರು ಕೂಡ ದರ ಏರಿಕೆ ಮಾಡಿರುವುದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ. ಹಬ್ಬದ ಸಂದರ್ಭದಲ್ಲಿ ಊರಿಗೆ ತೆರಳಲು ಯೋಚಿಸುತ್ತಿರುವ ಪ್ರಯಾಣಿಕರಿಂದ ಖಾಸಗಿ ಬಸ್ ಮಾಲೀಕರು ಎರಡು ರಿಂದ ಮೂರು ಪಟ್ಟು ಹೆಚ್ಚುವರಿ ದರ ವಸೂಲಿ ಮಾಡುತ್ತಿರುವ ಆರೋಪ ಕೇಳಿಬಂದಿದೆ. ಪ್ರತಿ ಬಾರಿ ಹಬ್ಬಗಳ ಸೀಸನ್ ಬಂದಾಗ ಖಾಸಗಿ ಬಸ್ ಮಾಲೀಕರು ಇದೇ ರೀತಿಯಲ್ಲಿ ದರ ಹೆಚ್ಚಿಸುವುದು ಸಾಮಾನ್ಯವಾಗಿದ್ದು, ಸಿಕ್ಕ ಅವಕಾಶವನ್ನು ಬಳಸಿಕೊಂಡು ಜನರಿಂದ ಹೆಚ್ಚುವರಿ ಹಣ ವಸೂಲಿ ಮಾಡುವ ಪ್ರವೃತ್ತಿ ಮುಂದುವರಿದಿದೆ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರಿಂದ ದುಪ್ಪಟ್ಟು ದರ ವಸೂಲಿ ಮಾಡುವ ಆಟೋ, ಟ್ಯಾಕ್ಸಿ ಹಾಗೂ ಖಾಸಗಿ ಬಸ್ ಮಾಲೀಕರ ವಿರುದ್ಧ ಸಂಬಂಧಿಸಿದ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹವೂ ಕೇಳಿಬರುತ್ತಿದೆ. ಹಬ್ಬದ ಸಂದರ್ಭದಲ್ಲಿ ಜನರಿಗೆ ತೊಂದರೆ ಆಗದಂತೆ ಸಾರಿಗೆ ಇಲಾಖೆ, ನಗರ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ನಿಗಾವಹಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇವೆ 1,88,037 ಹುದ್ದೆಗಳು

• ಉದಯವಾಹಿನಿ, ಬೆಂಗಳೂರು

ರಾಜ್ಯಸರ್ಕಾರದ ವಿವಿಧ ಇಲಾಖೆಗಳಲ್ಲಿ 1,88,037 ಹುದ್ದೆಗಳು ಖಾಲಿ ಇವೆ ಎಂದು ಸಭಾನಾಯಕ ಎನ್.ಎಸ್.ಬೋಸರಾಜು ವಿಧಾನಪರಿಷತ್‌ಗೆ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಶಶಿಲ್ ಜಿ ನಮೋಶಿ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ಉತ್ತರಿಸಿದ ಸಚಿವರು, ರಾಜ್ಯಸರ್ಕಾರದ ವಿವಿಧ ಇಲಾಖೆಗಳಲ್ಲಿ 7,76,414 ಹುದ್ದೆಗಳು ಮಂಜೂರಾಗಿದ್ದು 4,91,533 ಹುದ್ದೆಗಳನ್ನು ತುಂಬಲಾಗಿದೆ ಎಂದರು. ಗ್ರೂಪ್ ಸಿ, ಗ್ರೂಪ್ ಡಿ ವೃಂದದ ಹುದ್ದೆಗಳಾದ ದತ್ತಾಂಶ ನಮೂದು ಸಹಾಯಕರು, ವಾಹನ ಚಾಲಕರ 96,844 ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ. ಎಲ್ಲಾ ಸೇರಿ ಒಟ್ಟು 5,88,377 ಹುದ್ದೆಗಳನ್ನು ತುಂಬಲಾಗಿದೆ ಎಂದು ಹೇಳಿದರು. ನಿರುದ್ಯೋಗಿಗಳ ಹಿತದೃಷ್ಟಿಯಿಂದ ಫೆ.27 ರಂದು ಸರ್ಕಾರ ಆದೇಶ ಹೊರಡಿಸಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಸೂಚಿಸಿದೆ. ಉಚ್ಚನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಮುಂದಿನ ನೇಮಕಾತಿ ಮಾಡುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ 2, ಪರಿಶಿಷ್ಟ ಪಂಗಡಕ್ಕೆ 4 ಹುದ್ದೆಗಳನ್ನು ಕಾಯ್ದಿರಿಸಬೇಕೆಂದು ತಿಳಿಸಲಾಗಿದೆ ಎಂದರು.

## ಅಸಮರ್ಥ, ಸೋಮಾರಿ ಸಚಿವರ ತಲೆದಂಡಕ್ಕೆ ಸಿಎಂ ಚಿಂತನೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಸಚಿವರ ವರ್ತನೆಗಳ ಬಗ್ಗೆ ತೀವ್ರ ಆಕ್ರೋಶಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಲವರ ತಲೆದಂಡಕ್ಕೆ ಮುಂದಾಗಿದ್ದಾರೆ ಸಚಿವರು, ಶಾಸಕರುಗಳಿಗೆ ಸ್ಪಂದಿಸುತ್ತಿಲ್ಲ. ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಭೇಟಿಯಾಗಲೂ ಲಭ್ಯವಾಗುತ್ತಿಲ್ಲ ಎಲ್ಲವೂ ಸೇರಿದಂತೆ ಆಕ್ಷೇಪಗಳನ್ನು ಆಡಳಿತ ಶಾಸಕರು ವ್ಯಕ್ತಪಡಿಸಿದ್ದಾರೆ. ಪೊಲೀಸ್ ಸೇರಿದಂತೆ ಅಧಿಕಾರಿಗಳ ವರ್ಗಾವಣೆಯಲ್ಲೂ ಸಚಿವರು ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದ್ದಾರೆ. ಶಾಸಕರ ಮಾತಿಗೆ ಮನ್ನಣೆ ನೀಡುತ್ತಿಲ್ಲ ಎಂಬ ಆರೋಪಗಳು ಕೇಳಿ ಬಂದಿವೆ.

ಸಭೆಯಲ್ಲೇ ಕೆಲವು ಶಾಸಕರ ನಡುವೆಯೇ ಸಂಘರ್ಷ ಮಾತುಕತೆಗಳು ನಡೆದಿವೆ. ಸಿಎಂ ಸಿದ್ದರಾಮಯ್ಯ ಕೂಡ ಸಚಿವರ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿರುವುದರಿಂದಾಗಿ ಅಸಮರ್ಥ ಸಚಿವರ ತಲೆದಂಡದ ಮುನ್ಸೂಚನೆ ದೊರೆತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ನಾಯಕತ್ವದ ಬದಲಾವಣೆ ಲಕ್ಷಣಗಳು ಕಂಡು ಬರುತ್ತಿಲ್ಲ. ಹಿರಿಯ ಶಾಸಕರು ಇಂದು ಪ್ರತ್ಯೇಕ ಸಭೆ ನಡೆಸುವ ಮುನ್ನ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರ ಜೊತೆಯಲ್ಲೂ ಚರ್ಚೆ ನಡೆಸಿದ್ದಾರೆ. ಸಿದ್ದರಾಮಯ್ಯ ಅವರು, ಹಿರಿಯ ಶಾಸಕರಿಗೆ ಅವಕಾಶ ಕಲ್ಪಿಸಬೇಕಾದರೆ, ಸಂಪುಟದಲ್ಲಿರುವ ಕೆಲ ಸಚಿವರನ್ನು ಕೈಬಿಡಬೇಕು. ಆ ರೀತಿಯ ಪುನರ್‌ರಚನೆಗೆ ಹೈಕಮಾಂಡ್ ಒಪ್ಪಿಗೆ ಸೂಚಿಸಬೇಕು. ಈ ನಿಟ್ಟಿನಲ್ಲಿ ದೆಹಲಿಗೆ ಹೋದಾಗ ವರಿಷ್ಠರ ಮೇಲೆ ಒತ್ತಡ ಹೇರುವಂತೆ ಸಿದ್ದರಾಮಯ್ಯ ಹಿರಿಯ ಶಾಸಕರ ನಿಯೋಗಕ್ಕೆ ಸಲಹೆ ನೀಡಿದ್ದಾರೆ.

# ಯಡಿಯೂರಪ್ಪ ಶಿಫಾರಸು ಒಂದು, ಬಿಜೆಪಿ ವರಿಷ್ಠರ ಬಳಿ ಇದೆ ಆಪ್ಷನ್ ಎರಡು

## ರಾಜ್ಯಸಭೆ ಟಿಕೆಟ್ ಹಂಚಿಕೆ : ಹೈಕಮಾಂಡ್ ನಿರ್ಧಾರದಿಂದ ಅಚ್ಚರಿಗೊಳಗಾದ ಮಾಜಿ ಸಿಎಂ ಯಡಿಯೂರಪ್ಪ

• ಉದಯವಾಹಿನಿ, ಬೆಂಗಳೂರು

ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಾಲ್ವರ ಸದಸ್ಯತ್ವದ ಅವಧಿ ಇದೇ ಜೂನ್ ತಿಂಗಳಲ್ಲಿ ಮುಕ್ತಾಯಗೊಳ್ಳಲಿದೆ. ನಾಲ್ಕು ಸ್ಥಾನಗಳ ಪೈಕಿ, ಈಗಿನ ಪಾರ್ಟಿಗಳ ಬಲಾಬಲದ ಪ್ರಕಾರ, ಕಾಂಗ್ರೆಸ್ ಪಾರ್ಟಿಯು ಮೂರು ಸ್ಥಾನವನ್ನು ಮತ್ತು ಬಿಜೆಪಿ ಒಂದು ಸ್ಥಾನವನ್ನು ಗೆಲ್ಲಬಹುದು. ಜೆಡಿಎಸ್, ಒಂದು ಪಾರ್ಟಿಯಾಗಿ ಯಾವುದೇ ಸೀಟ್'ಅನ್ನು ಗೆಲ್ಲುವಷ್ಟು ಸಂಖ್ಯಾಬಲವಿಲ್ಲ. ಜೂನ್ 25, 2026ಕ್ಕೆ ನಾಲ್ಕು ಜನರ ಸದಸ್ಯತ್ವದ ಅವಧಿ ಮುಗಿಯುತ್ತಿರುವ ಹಿನ್ನಲೆಯಲ್ಲಿ, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡು ಜಂಟಿಯಾಗಿ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತದೋ ಅಥವಾ ಬಿಜೆಪಿ ತನ್ನದೇ ನಿರ್ಧಾರವನ್ನು ತೆಗೆದುಕೊಳ್ಳುತ್ತದೋ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ. ಈ ವಿಚಾರದಲ್ಲಿ, ಕರ್ನಾಟಕ ಬಿಜೆಪಿ ಘಟಕದ ಶಿಫಾರಸನ್ನು ಬಿಜೆಪಿಯ ವರಿಷ್ಠರು ಆಲಿಸುತ್ತಾರೋ, ಇಲ್ಲವೋ ಎನ್ನುವುದು ಮುಖ್ಯವಾಗಿದೆ.

ಯಾಕೆಂದರೆ, ಕಳೆದ ಬಾರಿ ಅಂದರೆ (2020ರಲ್ಲಿ) ಕರ್ನಾಟಕ ಬಿಜೆಪಿ ಘಟಕ ಮಾಡಿದ ಶಿಫಾರಸು ಒಂದಾಗಿತ್ತು, ಬಿಜೆಪಿ ಹೈಕಮಾಂಡ್ ಆಯ್ಕೆ ಇನ್ನೊಂದಾಗಿತ್ತು. ಬಿಜೆಪಿ ವರಿಷ್ಠರು, ಈರಣ್ಣ ಬಿ ಕಡಾಡಿ ಮತ್ತು ಕೆ.ನಾರಾಯಣ್ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿತ್ತು. ಇದು, ಬಿಜೆಪಿ ನಾಯಕರ ಆಶ್ಚರ್ಯಕ್ಕೆ ಕಾರಣವಾಗಿತ್ತು. ಈ ಬಾರಿಯೂ, ಅಂತದ್ದೇ ನಿರ್ಧಾರವನ್ನು ಬಿಜೆಪಿಯ ವರಿಷ್ಠರು ತೆಗೆದುಕೊಳ್ಳುತ್ತಾರೆ ಎನ್ನುವುದು ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿರುವ ಮಾತು.


ಉದಯವಾಹಿನಿ ಚಿತ್ರ

**ರಾಜ್ಯ ಬಿಜೆಪಿ ನಾಯಕರಲ್ಲಿ ಕಾಡುತ್ತಿರುವ ಹೊಂದಾಣಿಕೆಯ ಸಮಸ್ಯೆ:** ರಾಜ್ಯ ಬಿಜೆಪಿ ನಾಯಕರಲ್ಲಿ ಹೊಂದಾಣಿಕೆಯ ಸಮಸ್ಯೆ ತೀವ್ರವಾಗಿ ಕಾಡುತ್ತಿರುವ ಹಿನ್ನಲೆಯಲ್ಲಿ, ತಮ್ಮದೇ ಮೂಲಗಳಿಂದ ರಿಪೋರ್ಟ್ ಅನ್ನು ತರಿಸಿಕೊಂಡು ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಾಧ್ಯತೆಯೇ ಜಾಸ್ತಿ ಎಂದು ಹೇಳಲಾಗುತ್ತಿದೆ. ಬಿಜೆಪಿಯಿಂದ ಈರಣ್ಣ ಕಡಾಡಿ, ಕೆ.ನಾರಾಯಣ, ಕಾಂಗ್ರೆಸ್ಸಿನಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್‌ನಿಂದ ಎಚ್.ಡಿ.ದೇವೇಗೌಡರ ಸದಸ್ಯತ್ವದ ಅವಧಿ ಜೂನನಲ್ಲಿ ಮುಕ್ತಾಯಗೊಳ್ಳಲಿದೆ. ಹಾಗಾಗಿ, ಇಲ್ಲಿ, ಬಿಜೆಪಿಗೆ ಗೆಲ್ಲಬಹುದಾದ ಒಂದು ಸ್ಥಾನಕ್ಕೆ ಅಭ್ಯರ್ಥಿಯನ್ನು ಅಂತಿಮಗೊಳಿಸಬೇಕಿದೆ. ಹಾಗಾಗಿ, ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ಧಾರ ಕುತೂಹಲಕ್ಕೆ ಕಾರಣವಾಗಿದೆ.

**ಯಡಿಯೂರಪ್ಪ ಶಿಫಾರಸಿಗೆ ಹೈಕಮಾಂಡ್ ತಕರಾರು ಇಲ್ಲ, ಆದರೆ?:** ಡಿವಿ ಸದಾನಂದ ಗೌಡ್ರನ್ನು, ಯಡಿಯೂರಪ್ಪ ಶಿಫಾರಸು ಮಾಡುತ್ತಿರುವುದಕ್ಕೆ, ಬಿಜೆಪಿ ವರಿಷ್ಠರಿಗೆ ಏನೂ ತಕರಾರು ಇಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿಯವರ ಆಯ್ಕೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ್ರನ್ನು ಮತ್ತೆ ಮುಂದುವರಿಸುವುದು ಎಂದು ಹೇಳಲಾಗುತ್ತಿದೆ. ಇದಕ್ಕೆ, ಬಿಜೆಪಿಗೆ ಪಾರ್ಟಿಯದ್ದೇ ಆದ ಕೆಲವು ಕಾರಣಗಳಿವೆ. ದೇವೇಗೌಡ್ರ ಸದಸ್ಯತ್ವದ ಅವಧಿ, ಇದೇ ಜೂನ್ ತಿಂಗಳಿಗೆ ಮುಕ್ತಾಯಗೊಳ್ಳಲಿದೆ.

### ಯಡಿಯೂರಪ್ಪ ಶಿಫಾರಸು ಮಾಡುತ್ತಿರುವುದು ಯಾರನ್ನು?

**ಮಾಜಿ ಸಿಎಂ ಡಿವಿ ಸದಾನಂದ ಗೌಡ ಮತ್ತು ಯಡಿಯೂರಪ್ಪನವರ ಕುಟುಂಬದ ನಡುವೆ ಉತ್ತಮ ಸಂಬಂಧವಿದೆ. ಇದಕ್ಕೆ ಹಲವು ಕಾರಣಗಳಿವೆ. ಅದರಲ್ಲಿ ಪ್ರಮುಖವಾಗಿ, ಪುತ್ರ ಬಿವೈ ವಿಜಯೇಂದ್ರ ವಿರುದ್ದ ಭಿನ್ನಮತೀಯ ಗುಂಪಿನ ಚಟುವಟಿಕೆ ತೀವ್ರಗೊಂಡಿದ್ದ ಹೊತ್ತಿನಲ್ಲಿ, ಸದಾನಂದ ಗೌಡ್ರು, ವಿಜಯೇಂದ್ರ ಪರವಾಗಿ ನಿಂತಿದ್ದರು. ಇವರು ಭಿನ್ನ ಗುಂಪಿನಲ್ಲಿ ಗುರುತಿಸಿಕೊಂಡವರ ಬಳಿ ಮಾತುಕತೆಯನ್ನೂ ನಡೆಸಿದ್ದರು. ಈಗಲೂ, ಕಾಲಕಾಲಕ್ಕೆ ತಕ್ಕಂತೆ, ವಿಜಯೇಂದ್ರಗೆ ರಾಜಕೀಯ ಪಾಠವನ್ನು ಸದಾನಂದ ಗೌಡ್ರು ಮಾಡುತ್ತಿದ್ದಾರೆ. ಇದು, ಯಡಿಯೂರಪ್ಪನವರ ಖುಷಿಗೆ ಕಾರಣವಾಗಿದೆ. ಹಾಗಾಗಿ, ಅವರನ್ನೇ ರಾಜ್ಯಸಭೆಗೆ ಆಯ್ಕೆ ಮಾಡಬೇಕು ಎಂದು ಬಿಜೆಪಿ ನಾಯಕರಿಗೆ ಶಿಫಾರಸು ಮಾಡಿದ್ದಾರೆ ಎನ್ನುವ ಸುದ್ದಿಗಳು ಹರಿದಾಡುತ್ತಿದೆ.**

### ಸದಾನಂದ ಗೌಡ್ರ ಆಯ್ಕೆಗೆ ಯಡಿಯೂರಪ್ಪ ಒತ್ತಾಯ?

**ಸಂಸದ್ ಸದಸ್ಯರಾಗಿದ್ದ ಡಿವಿ ಸದಾನಂದ ಗೌಡ್ರನ್ನು, ಹಿಂದೆ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೇ ಯಡಿಯೂರಪ್ಪ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸದಾನಂದ ಗೌಡ್ರು, ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧಿಸುವುದು ಬಹುತೇಕ ನಿಕ್ಕಿಯಾಗಿತ್ತು. ಆದರೆ, ಉಡುಪಿ - ಚಿಕ್ಕಮಗಳೂರಿನಲ್ಲಿ ಶೋಭಾ ಕರಂದ್ಲಾಜೆಗೆ ಟಿಕೆಟ್ ಸಿಗದ ಹಿನ್ನಲೆಯಲ್ಲಿ, ಅವರಿಗೆ ಉತ್ತರದ ಸೀಟ್ ಕೊಡಲಾಗಿತ್ತು. ಇದು, ಸದಾನಂದ ಗೌಡ್ರ ಸಿಟ್ಟಿಗೆ ಕಾರಣವಾಗಿತ್ತು.**

ಅಂತರಾಳದಿಂದ.. EDITORIAL

## ಜನಜೀವನದ ಮೇಲೆ ಯುದ್ಧದ ಬಿಸಿ

# ಇಂಧನ ಮಿತವ್ಯಯ ವಿವೇಕದ ನಡೆ




ಇರಾನ್ ಮೇಲೆ ಅಮೆರಿಕ ಇಸ್ರೇಲ್ ಹೇರಿರುವ ಯುದ್ಧವು ನಿರೀಕ್ಷೆಯಂತೆ ಭಾರತೀಯರ ಮೇಲೆ ಪರಿಣಾಮ ಬೀರಲು ಆರಂಭಿಸಿದೆ. ಇಂಧನ ಪೂರೈಕೆಯಲ್ಲಿ ಅಡಚಣೆಯುಂಟಾಗಿದೆ ಹಾಗೂ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ.

**ಎಲ್‌ಪಿಜಿ, ಸಿಎನ್‌ಜಿ ಮತ್ತು ಪಿಎನ್‌ಜಿ ಉತ್ಪಾದಕರಿಗೆ ಅಗತ್ಯವಿರುವ ನೈಸರ್ಗಿಕ ಅನಿಲವನ್ನು ಒದಗಿಸಿದ ನಂತರ ಇತರ ವಲಯಗಳಿಗೆ ಪೂರೈಕೆ ಮಾಡಲು ನಿರ್ಧರಿಸುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ಪ್ರಯತ್ನಿಸುತ್ತಿದೆ.**

ಷೇರುಪೇಟೆಯಲ್ಲೂ ನಿರಂತರ ಕುಸಿತ ಕಾಣಿಸುತ್ತಿದೆ. ಬ್ರೆಂಟ್ ಕಚ್ಚಾತೈಲದ ಬೆಲೆ ಬ್ಯಾರೆಲ್‌ಗೆ 119.50 ಡಾಲರ್‌ಗೆ ಜಿಗಿದು, ನಂತರ ಇಳಿಕೆಯಾಗಿದ್ದರೂ, ಅದು ಯಾವುದೇ ಸಮಯದಲ್ಲಿ ತೀವ್ರ ಏರಿಕೆಯನ್ನು ದಾಖಲಿಸಬಹುದಾಗಿದೆ. ಇರಾನ್ ಮೇಲೆ ನಡೆಯುತ್ತಿರುವ ನಿರಂತರ ದಾಳಿಗಳು, ಟೆಹರಾನ್ ನಡೆಸುತ್ತಿರುವ ಪ್ರತೀಕಾರದ ದಾಳಿಗಳು, ಹೊರ್ಮುಜ್ ಜಲಸಂಧಿಯಲ್ಲಿನ ಉಸಿರುಗಟ್ಟಿಸುವ ಪರಿಸ್ಥಿತಿ, ಇವೆಲ್ಲದರ ಜೊತೆಜೊತೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಪರಿಸ್ಥಿತಿಯನ್ನು ಹೆಚ್ಚು ಸಂಕೀರ್ಣಗೊಳಿಸುತ್ತಿವೆ ತೈಲ ಮತ್ತು ಅಡುಗೆ ಅನಿಲದ ಸರಬರಾಜು ವಿಶ್ವದಾದ್ಯಂತ ಅಸ್ತವ್ಯಸ್ತವಾಗಿದೆ. ಜಾಗತಿಕವಾಗಿ ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಸುಮಾರು ಐದನೇ ಒಂದರಷ್ಟು ಪ್ರಮಾಣದ ಸರಬರಾಜು ಹೊರ್ಮುಜ್ ಜಲಸಂಧಿಯ ಮೂಲಕವೇ ಆಗಬೇಕಾಗಿದೆ.

ಬದಲಾದ ಸಂದರ್ಭದಲ್ಲಿ ಸರಬರಾಜಿನಲ್ಲಿ ಉಂಟಾಗಿರುವ ವ್ಯತ್ಯಯ ತೈಲ ಮತ್ತು ಅಡುಗೆ ಅನಿಲದ ಬೆಲೆ ಏರಿಕೆಗೆ ಕಾರಣವಾಗಿದೆ. ಭಾರತವು ತನಗೆ ಅಗತ್ಯವಾದ ಇಂಧನದಲ್ಲಿ ಶೇ 80ರಷ್ಟನ್ನು ವಿಶ್ವ ಮಾರುಕಟ್ಟೆಯಿಂದ ಪಡೆಯುತ್ತದೆ. ನೈಸರ್ಗಿಕ ಅನಿಲದ ಅರ್ಧದಷ್ಟು ಭಾಗ ಹಾಗೂ ಶೇ 60ರಷ್ಟು ಎಲ್‌ಪಿಜಿಯನ್ನು ಗಲ್ಫ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ.

ಅಡುಗೆ ಅನಿಲದ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಮೊದಲು ಹೇಳಿಕೊಂಡಿದ್ದರೂ, ಬಿಕ್ಕಟ್ಟು ಮನೆ ಮನೆಗೆ ತಲಪಿದೆ. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ತೀವ್ರ ವ್ಯತ್ಯಯ ಉಂಟಾಗಿದೆ.


ಹೋಟೆಲುಗಳು, ರೆಸ್ಟೋರೆಂಟ್‌ಗಳು ಮಾತ್ರವಲ್ಲದೆ ರಸ್ತೆ ಬದಿಯಲ್ಲಿ ಆಹಾರ ಪದಾರ್ಥಗಳ ವಹಿವಾಟು ನಡೆಸುವವರು ಕೂಡ ತಮ್ಮ ಕಾರ್ಯಾಚರಣೆಯನ್ನು ಸದ್ಯದಲ್ಲೇ ಸ್ಥಗಿತಗೊಳಿಸುವುದಾಗಿ ಇಲ್ಲವೇ ಮಿತಗೊಳಿಸುವುದಾಗಿ ಹೇಳುತ್ತಿದ್ದಾರೆ. ಅಡುಗೆ ಉದ್ಯಮದವರು, ಕಾರ್ಮಿಕರು, ಮಾರಾಟಗಾರರು ಮತ್ತು ವಿತರಣಾ ಸಿಬ್ಬಂದಿ ಸೇರಿದಂತೆ ಹೆಚ್ಚಿನ ಸಂಖ್ಯೆಯ ಜನರ ಜೀವನೋಪಾಯವು ತೊಂದರೆಗೆ ಸಿಲುಕಿದೆ ಹಾಗೂ ದೊಡ್ಡ ಸಂಖ್ಯೆಯ ಗ್ರಾಹಕರು ಅನನುಕೂಲಕ್ಕೆ ಒಳಗಾಗಿದ್ದಾರೆ. ಬಿಕ್ಕಟ್ಟು ಇದೇ ರೀತಿ ಮುಂದುವರಿದರೆ ಆತಿಥ್ಯ ಉದ್ಯಮದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಮಾರುಕಟ್ಟೆಯಲ್ಲಿ ಇರುವ ಆತಂಕದ ಪರಿಸ್ಥಿತಿಯು ಹೆಚ್ಚಿನ ಬೇಡಿಕೆಗಳಿಗೆ ಹಾಗೂ ವಿತರಣೆಯಲ್ಲಿನ ವಿಳಂಬಕ್ಕೆ ಕಾರಣವಾಗಿದೆ.

ಇಂತಹ ಬಿಕ್ಕಟ್ಟುಗಳು ಯಾವಾಗಲೂ ತಮ್ಮನ್ನು ತಾವು ಪೋಷಿಸಿಕೊಳ್ಳುವುದರಿಂದ, ಆತಂಕದ ಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ. ಕೆಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪದಲ್ಲಿ ಇರುವುದರಿಂದ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಸದ್ಯಕ್ಕೆ ಹೆಚ್ಚಾಗದೆ ಇರುವ ಸಾಧ್ಯತೆಯೂ ಇದೆ. ಆದರೆ, ಈ ಬಿಕ್ಕಟ್ಟು ಆಮದು ಹಾಗೂ ಹಣದುಬ್ಬರದ ಏರಿಕೆಯ ಮೇಲೆ ಪರಿಣಾಮ ಬೀರುತ್ತದೆ.

ಎಲ್‌ಪಿಜಿ, ಸಿಎನ್‌ಜಿ ಮತ್ತು ಪಿಎನ್‌ಜಿ ಉತ್ಪಾದಕರಿಗೆ ಅಗತ್ಯವಿರುವ ನೈಸರ್ಗಿಕ ಅನಿಲವನ್ನು ಒದಗಿಸಿದ ನಂತರ ಇತರ ವಲಯಗಳಿಗೆ ಪೂರೈಕೆ ಮಾಡಲು ನಿರ್ಧರಿಸುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ನಂತರದ ಆದ್ಯತೆ ರಸಗೊಬ್ಬರ ತಯಾರಿಕಾ ವಲಯಕ್ಕೆ ನೀಡಲಾಗಿದ್ದು, ಆ ವಲಯದ ಶೇ 70ರಷ್ಟು ಬೇಡಿಕೆ ಪೂರೈಸಲು ಅವಕಾಶ ಕಲ್ಪಿಸಲಾಗಿದೆ. ನಂತರದ ಆದ್ಯತೆಯಲ್ಲಿ ಚಹಾ ಕೈಗಾರಿಕೆಗಳು, ತಯಾರಿಕಾ ವಲಯ ಮತ್ತು ಕೈಗಾರಿಕಾ ಗ್ರಾಹಕರನ್ನು ಗುರ್ತಿಸಲಾಗಿದೆ. ಅನಿಲದ ಉತ್ಪಾದನೆಯನ್ನು ಹೆಚ್ಚಿಸುವಂತೆ ಸಂಸ್ಕರಣಾಗಾರಗಳಿಗೆ ಸರ್ಕಾರ ಸೂಚಿಸಿದ್ದು, ಪರಿಸ್ಥಿತಿಯನ್ನು ನಿರ್ವಹಿಸಲು ಮೇಲ್ವಿಚಾರಣಾ ಸಮಿತಿ ರಚಿಸಿದೆ. ಗೃಹಬಳಕೆ ಇಂಧನದ ಅಗತ್ಯಗಳನ್ನು ಪೂರೈಸುವುದಕ್ಕೆ ಮೊದಲ ಆದ್ಯತೆ ಎನ್ನುವುದನ್ನು ಸ್ಪಷ್ಟಪಡಿಸುವ ಮೂಲಕ, ಸದ್ಯದ ಮಟ್ಟಿಗಾದರೂ ನಾಗರಿಕರು ಬಿಕ್ಕಟ್ಟಿನಿಂದ ತಳಮಳಗೊಳ್ಳದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಸರ್ಕಾರ ನಡೆಸಿದೆ.

ಹೆಚ್ಚಿನ ಮನೆಗಳಲ್ಲಿ ಎಲ್‌ಪಿಜಿ ಆಗತ್ಯ ವಸ್ತುವಾಗಿದ್ದು, ಅದರ ಸರಬರಾಜಿನಲ್ಲಿ ಉಂಟಾಗುವ ಕೊರತೆಯು ರಾಜಕೀಯ ಪರಿಣಾಮ ಬೀರುವ ಸಾಧ್ಯತೆಯಿದೆ. ಹಾಗಾಗಿಯೇ ಅಗತ್ಯ ವಸ್ತುಗಳ ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಯುದ್ಧ ಜಾರಿಯಲ್ಲಿ ಇರುವವರೆಗೂ ಕೊರತೆ ಪರಿಸ್ಥಿತಿ ಮುಂದುವರಿಯುವುದರಿಂದ, ಅಡುಗೆ ಅನಿಲ ಮತ್ತು ಇತರ ಇಂಧನಗಳ ಬಳಕೆಯಲ್ಲಿ ನಾಗರಿಕರು ಮಿತವ್ಯಯ ಸಾಧಿಸುವುದು ವಿವೇಕದ ನಡೆಯಾಗಿದೆ.

# ರಾಮಾಯಣ



**ಸುಗ್ರೀವನು ಸೀತಾದೇವಿಯನರಸುವುದಕ್ಕಾಗಿ ಕಪಿಗಳನ್ನು ಬಡಗಣ ದಿಕ್ಕಿಗೆ ಕಳುಹಿಸಿದ್ದು**

- ಹಿಂದಿನ ಸಂಚಿಕೆಯಿಂದ

## 121 ನೆಯ ಅಧ್ಯಾಯ


ಆದಕಾರಣ ನೀವು ಬಡಗಣ ದಿಕ್ಕಿಗೆ ಹೋಗಿ ಆ ದಿಕ್ಕಿನಲ್ಲಿರುವ ವನದುರ್ಗ ಜಲದುರ್ಗ ಗಿರಿದುರ್ಗ ಮೊದಲಾದ ಪ್ರದೇಶಗಳಲ್ಲಿಯೂ ಪಟ್ಟಣಗಳಲ್ಲಿಯೂ ನಿಮ್ಮ ಪರಾಕ್ರಮಕ್ಕೆ ತಕ್ಕಹಾಗೆ ವಿಚಾರಿಸಿ ಸೀತಾದೇವಿಯನ್ನು ಹುಡುಕಿರಿ. ಆ ಬಡಗಣದಿಕ್ಕಿನಲ್ಲಿರುವ ಮೇಚ್ಛ, ಪುಳಿಂದ ಶೂರಸೇನ, ಪ್ರಸ್ಥಲ, ಭರತದೇಶ, ಕುರು, ಮಾದ್ರ, ಕಾಂಭೋಜ, ಯವನ, ಶಕ, ಆರಟ್ಟ, ಬಾಹ್ಲಿಕ ಋಷಿಕ ಪೌರವ ತೆಂಕಣ, ಚೀನ, ಪರಮಚೀನ ಮೊದಲಾದ ದೇಶಗಳಲ್ಲಿ ಹುಡುಕಿನೋಡಿ. ಆಮೇಲೆ ದೇವಗಂಧರ್ವರಿಂದ ಸೇವಿಸಲ್ಪಟ್ಟ ಸೋಮಾಶ್ರಮಕ್ಕೆ ಹೋಗಿ ಅಲ್ಲಿಂದ ಮುಂದೆ ದೊಡ್ಡ ತಪ್ಪಲುಗಳುಳ್ಳ ಕಾಳಗಿರಿಯೆಂಬ ಪರ್ವತಕ್ಕೆ ಹೋಗಿ ಆ ಪರ್ವತದ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ಅರಸಿನೋಡಿ. ಅಲ್ಲಿಂದ ಮುಂದೆ ಹೇಮಗರ್ಭವೆಂಬ ಪರ್ವತಕ್ಕೆ ಹೋಗಿ ಅಲ್ಲಿಂದ ಮುಂದೆ ಸಮಸ್ತ ಪಕ್ಷಿಗಳಿಗೂ ಆಶ್ರಯಸ್ಥಾನವಾದ ದೇವಸಖವೆಂಬ ಹೆಸರುಳ್ಳ ಪರ್ವತಕ್ಕೆ ಹೋಗಿ, ಆ ಪರ್ವತ ದಲ್ಲಿರುವ ವನಸಮೂಹಗಳಲ್ಲಿಯೂ ಗುಹೆಗಳಲ್ಲಿಯೂ ಅರಸಿನೋಡಿ. ಅಲ್ಲಿಂದ ಮುಂದೆ ನೂರು ಗಾವುದಪರ್ಯಂತ ಪರ್ವತಗಳೂ ನದಿಗಳೂ ವನಗಳೂ ಪಟ್ಟಣಗಳೂ ಪ್ರಾಣಿಗಳೂ ಇಲ್ಲದ ಮರಳುಗಾಡನ್ನು ದಾಟಿ ಮುಂದೆ ಹೋದರೆ ಮನೋಹರವೂ ಅತಿಬಿಳುಪೂ ಆದ ಕೈಲಾಸಪರ್ವತವನ್ನು ಕಂಡು ಅತ್ಯಂತ ಸಂತೋಷಪಡುವಿರಿ. ಆ ಪರ್ವತದ ಬಡಗಣ ಶಿಖರದಲ್ಲಿ ವಿಶ್ವಕರ್ಮನಿಂದ ನಿರ್ಮಿತವಾಗಿಯೂ ರತ್ನ ಖಚಿತವಾಗಿಯೂ ಸುವರ್ಣಮಯವಾಗಿಯೂ ಇರುವ ರಮಣೀಯವಾದ ಕುಬೇರನ ಮನೆಯು ಇರುವುದು. ಅಲ್ಲಿ ಸುವರ್ಣಕಮಲಗಳಿಂದ ಪರಿಪೂರ್ಣವೂ ವಿಶಾಲವೂ ಹಂಸಪಕ್ಷಿ ಕೊಳರ್ವಕ್ಕಿಗಳಿಂದ ಪರಿಪೂರ್ಣವೂ ಎನಿಸಿದ ಒಂದು ಕೊಳವಿರುವುದು, ಅದರಲ್ಲಿ ಸಮಸ್ತ ಯಕ್ಷರಿಗೂ ಅಧಿಪತಿಯಾದ ಕುಬೇರನು ಅಪ್ಸರ ಸ್ತ್ರೀಯರೊಡನೆಯೂ ಗುಹ್ಯಕರೆಂಬ ದೇವತೆ ಗಳೊಡನೆಯೂ ಕೂಡಿಕೊಂಡು ಜಲಕ್ರೀಡೆಯಾಡುತ್ತಿರುವನು. ಅಲ್ಲಿ ಯಾರಿಗೂ ಪ್ರದೇಶಮಾಡು ವುದಕ್ಕೆ ಅಸಾಧ್ಯವಾದ ಕ್ರೌಂಚವೆಂಬ ಬಿಲದ್ವಾರವಿರುವುದು. ಆ ಬಿಲದ್ವಾರವನ್ನು ಹೊಕ್ಕು ಹೋಗುವಲ್ಲಿ ಸಾವಧಾನದಿಂದಿರಿ.

ಆ ಬಿಲದಲ್ಲಿ ಸಮಸ್ತ ದೇವತೆಗಳಿಂದಲೂ ಪೂಜಿಸಲು ಯೋಗ್ಯರೂ ಮಹಾತ್ಮರೂ ಮಹಾವೀರರೂ ಸೂರ್ಯಪ್ರಭೆಯಂತೆ ತನುಕಾಂತಿಯುಳ್ಳವರೂ ಆದ ಋಷಿಗಳಿರುವರು. ಅವರನ್ನು ನೋಡಿ ವಿಚಾರಿಸಿ. ಆ ಕ್ರೌಂಚಪರ್ವತದ ತಪ್ಪಲುಗಳಲ್ಲಿ ಅನೇಕ ಕೋಡುಗಲ್ಲುಗಳೂ ದೊಡ್ಡ ಕಲ್ಲರೆಗಳೂ ಇರುವುವು. ಅಲ್ಲಿ ಹುಡುಕಿನೋಡಿ. ಅಲ್ಲಿಂದ ಮುಂದೆ ಮರಗಳಿಲ್ಲದ ಕಾಮಶೈಲವೆಂಬ ಬೆಟ್ಟವಿರುವುದು. ಅಲ್ಲಿ ಸಮಸ್ತ ಪಕ್ಷಿಗಳಿಗೂ ಆಶ್ರಯವಾದ ಮಾನಸಸರೋವರ ವಿರುವುದು, ಆ ಬೆಟ್ಟವು ದೇವದಾನವರೇ ಮೊದಲಾದವರಿಗೂ ಸಂಚರಿಸುವುದಕ್ಕೆ ಅಸಾಧ್ಯವಾದದ್ದು.

ಮುಂದುವರಿಯುವುದು...

# ಸದ್ಗುರು ಕೃಪೆ

**ಈ ಕಥೆಯು ಶ್ರೀ ದತ್ತಗುರುಗಳ ಮೂರನೇ ಅವತಾರ, ಶ್ರೀ ಅಕ್ಕಲಕೋಟೆ ಸ್ವಾಮೀ ಸಮರ್ಥರದ್ದಾಗಿದೆ. ಅವರು ಆಶೀರ್ವಾದಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಓರ್ವ ಬಡಬ್ರಾಹ್ಮಣನ ಕಥೆಯಾಗಿದೆ.**



ವಿಶ್ವಾಸ್.ಡಿ.ಗೌಡ



ಶ್ರೀ ಗುರುಗಳು ಭಿವಂಡಿಯಿಂದ ಕೌರವಪುರಕ್ಕೆ ಹೋಗುತ್ತಿದ್ದರು. ಅಲ್ಲಿ ಕೃಷ್ಣಾ ಮತ್ತು ಪಂಚಗಂಗಾ ನದಿಗಳ ಸಂಗಮವಿದೆ. ಈ ಪವಿತ್ರ ಕ್ಷೇತ್ರಕ್ಕೆ ದಕ್ಷಿಣಕಾಶೀ ಎಂದು ಕರೆಯುತ್ತಾರೆ. ಈ ಕಥೆಯು ಇಲ್ಲಿ ಪ್ರಾರಂಭವಾಗುತ್ತದೆ. ಪ್ರತಿದಿನ ಮಧ್ಯಾಹ್ನ ಶ್ರೀಗುರುಗಳು ಭಿಕ್ಷೆ ಬೇಡಲು ಅಮರಪುರಕ್ಕೆ ಹೋಗುತ್ತಿದ್ದರು, ಮತ್ತು ಭಕ್ತರನ್ನು ಆಶೀರ್ವದಿಸಿ ಹಿಂದಿರುಗುತ್ತಿದ್ದರು.

ಅಮರಾಪುರ ಗ್ರಾಮದಲ್ಲಿ ಒಬ್ಬ ಬಡ ಬ್ರಾಹ್ಮಣ ವಾಸಿಸುತ್ತಿದ್ದನು. ದಿನಾಲೂ ಭಿಕ್ಷೆಯನ್ನು ಪಡೆದುಕೊಂಡು ತನ್ನ ಜೀವನವನ್ನು ಸಾಗಿಸುತ್ತಿದ್ದನು. ಮನೆಗೆ ಬಂದ ಅತಿಥಿಗಳನ್ನು ದೇವರೆಂದು ಪರಿಗಣಿಸಿದ ಬ್ರಾಹ್ಮಣ ದಂಪತಿ ಬಂದವರನ್ನು ಅವರು ಎಂದಿಗೂ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಅವರು ಈ ರೀತಿ ಸಂತೋಷದಿಂದ ದೇವರ ಗುಣಗಾನ ಮಾಡುತ್ತಾ ಜೀವನವನ್ನು ಸಾಗಿಸುತ್ತಿದ್ದರು.

ಒಂದು ದಿನ ಶ್ರೀಗುರುಗಳು ಬ್ರಾಹ್ಮಣನ ಮನೆಗೆ ಬಿಕ್ಷೆ ಬೇಡಲು ಬರುತ್ತಾರೆ. ಅವರು ಬರುವಾಗ ಬ್ರಾಹ್ಮಣನು ಬಿಕ್ಷೆಯನ್ನು ತರಲು ಊರೊಳಗೆ ಹೋಗಿರುತ್ತಾನೆ.

ಬ್ರಾಹ್ಮಣನ ಹೆಂಡತಿಯು ಶ್ರೀಗುರುಗಳನ್ನು ಮನೆಯೊಳಗೇ ಆಹ್ವಾನಿಸುತ್ತಾಳೆ. ಆದರೆ ಮನಸ್ಸಿನಲ್ಲಿ 'ಶ್ರೀ ಗುರುಗಳಿಗೆ ಮನೆಯಲ್ಲಿ ಕೊಡುವಂತಹದು ಏನೂ ಇಲ್ಲವಲ್ಲ' ಎಂದು ಯೋಚಿಸುವಾಗ ಅವರ ಹಿತ್ತಲಿನಲ್ಲಿ ಬೆಳೆದ ಜವರೇಕಾಯಿ ಗಿಡದ ನೆನಪಾಗುತ್ತದೆ. ಅವರು ಅದನ್ನು ತೆಗೆದುಕೊಂಡು ತಿಂಡಿಯನ್ನು ತಯಾರಿಸಿ ಗುರುಗಳಿಗೆ ಅರ್ಪಿಸುತ್ತಾಳೆ.

ಅದನ್ನು ನೋಡಿ ಶ್ರೀಗುರುಗಳಿಗೆ ಬಹಳ ಸಂತೋಷವಾಗುತ್ತದೆ ಮತ್ತು ಅವರು ಬ್ರಾಹ್ಮಣನ ಹೆಂಡತಿಯನ್ನು ಸಂಬೋಧಿಸಿ 'ನಿಮ್ಮ ಮನೆಯು ಇನ್ನು ಮುಂದೆ ಸಮೃದ್ಧವಾಗುತ್ತದೆ, ನಿಮ್ಮ ಬಡತನಕ್ಕೆ ಇಂದೇ ಕೊನೆ!' ಎಂದು ಹೇಳುತ್ತಾರೆ. ಬ್ರಾಹ್ಮಣನ ಮನೆಯಿಂದ ಹೊರಡುವಾಗ ಆ ಜವರೇಕಾಯಿಯ ಗಿಡವನ್ನು ಕಡಿದು ಹಾಕಿ, ಶ್ರೀ ಗುರುಗಳು ಹೋಗುತ್ತಾರೆ.

ಬ್ರಾಹ್ಮಣನ ಹೆಂಡತಿಯು ಬಹಳ ದುಃಖದಿಂದ ಇದನ್ನು ನೋಡುತ್ತಾಳೆ ಮತ್ತು ಗಂಡ ಬಂದಾಗ ನಡೆದದ್ದನ್ನು ಹೇಳುತ್ತಾಳೆ, ಆ ಬ್ರಾಹ್ಮಣನು 'ಶ್ರೀಗುರುಗಳು ನಿನಗೆ ಆಶೀರ್ವಾದವನ್ನು ಮಾಡಿದ್ದಾರೆ ಅಲ್ಲವೇ, ಅವರ ವಚನದಲ್ಲಿ ನಂಬಿಕೆಯನ್ನು ಇಡು' ಎಂದು ಹೆಂಡತಿಗೆ ಬುದ್ಧಿವಾದವನ್ನು ಹೇಳುತ್ತಾನೆ.

ಗುರುಗಳು ಅರ್ಧ ಕಡಿದು ಹೊದ ಜವರೇಕಾಯಿ ಗಿಡವನ್ನು ಬೇರು ಸಹಿತ ಕೀಳಲು ಹೋದಾಗ ಅಲ್ಲಿ ಅವರಿಗೆ ಒಂದು ಅಚ್ಚರಿ ಕಾಣಿಸುತ್ತದೆ. ಒಂದು ಮಡಿಕೆ ತುಂಬ ಬಂಗಾರ ಇರುವುದು ಕಾಣಿಸುತ್ತದೆ. ಬ್ರಾಹ್ಮಣ ದಂಪತಿಯು ಸಂತೋಷದಿಂದ ಗುರುಗಳ ಆಶೀರ್ವಾದವನ್ನು ಪಡೆಯಲು ಗುರುಗಳ ಭೇಟಿ ಮಾಡುತ್ತಾರೆ ಮತ್ತು ಅವರಿಗೆ ವಿಷಯವನ್ನು ತಿಳಿಸುತ್ತಾರೆ.

# ಕಾಂಗ್ರೆಸ್‌ನಲ್ಲಿ ದಾವಣಗೆರೆ ದಕ್ಷಿಣ ಟಿಕೆಟ್ ಫೈಟ್

## ಗೊಂದಲಕ್ಕೆ ತೆರೆ ಎಳೆಯಲು ಪ್ರಮುಖ ಮುಖಂಡರ ಸಭೆ

ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರ ಉಪ ಚುನಾವಣೆಗೆ ಟಿಕೆಟ್ ಗೊಂದಲ ಜೋರಾಗಿದೆ. ಮುಸ್ಲಿಮರಿಗೆ ಟಿಕೆಟ್ ಕೊಡಬೇಕೆಂದು ಮುಸ್ಲಿಂ ಮುಖಂಡರು ಪಟ್ಟು ಹಿಡಿದಿದ್ದಾರೆ. ಮತ್ತೊಂದು ಕಡೆಯಲ್ಲಿ ಶಾಮನೂರು ಅವರ ಮೊಮ್ಮಗನಿಗೆ ಸಮರ್ಥ್‌ಗೆ ಟಿಕೆಟ್ ಕೊಡಬೇಕು ಎಂಬುವುದು ಅವರ ಕುಟುಂಬಸ್ಥರ ಬೇಡಿಕೆಯಾಗಿದೆ. ಈ ನಿಟ್ಟಿನಲ್ಲಿ ಗೊಂದಲಕ್ಕೆ ತೆರೆಎಳೆಯುವ ನಿಟ್ಟಿನಲ್ಲಿ ಅಭಿಪ್ರಾಯ ಸಂಗ್ರಹ ಮಾಡಲಾಗಿದೆ.

ಶಾಮನೂರು ಶಿವಶಂಕರಪ್ಪ ನಿಧನ ಹಿನ್ನಲೆಯಲ್ಲಿ ದಾವಣಗೆರೆ ದಕ್ಷಿಣಕ್ಕೆ ಉಪ ಚುನಾವಣೆ ನಡೆಯಲಿದೆ.

ಈ ಚುನಾವಣೆ ರಾಜ್ಯ ಸರ್ಕಾರದ ಪಾಲಿಗೂ ಮಹತ್ವದ ಚುನಾವಣೆ ಆಗಿದೆ. ಆದರೆ ಎಸ್ ಎಸ್ ಮಲ್ಲಿಕಾರ್ಜುನ ಅವರು ತಮ್ಮ ಪುತ್ರನಿಗೆ ಟಿಕೆಟ್ ಗಾಗಿ ಪಟ್ಟು ಹಿಡಿದಿದ್ದಾರೆ.

> ### ಹೈಕಮಾಂಡ್ ನಿರ್ಧಾರ ಅಂತಿಮ
> **ದಾವಣಗೆರೆ ದಕ್ಷಿಣದಲ್ಲಿ ಯಾರಿಗೆ ಟಿಕೆಟ್ ನೀಡಬೇಕು ಎಂಬ ವಿಚಾರವಾಗಿ ಹೈಕಮಾಂಡ್ ತೀರ್ಮಾನ ಅಂತಿಮವಾಗಿದೆ. ಈ ಕುರಿತಾಗಿ ಸಚಿವರಾದ ಎಸ್ ಎಸ್ಮಲ್ಲಿಕಾರ್ಜುನ ಹಾಗೂ ಜಮೀರ್ ಅವರು ತಮ್ಮ ಅಭಿಪ್ರಾಯ ಸ್ಪಷ್ಟಪಡಿಸಿದ್ದಾರೆ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದಿದ್ದಾರೆ ಎಂದು ಭಂಡಾರಿ ತಿಳಿಸಿದರು.**

ಅದರೆ ಈ ಬಾರಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಆಗ್ರಹಿಸಿದ್ದಾರೆ. ಹೀಗಾಗಿ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಗೊಂದಲ ಮುಂದುವರಿದಿದೆ. ಈ ಎಲ್ಲಾ ವಿಚಾರವಾಗಿ ಚರ್ಚೆ ನಡೆಸಲು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಮುಖಂಡರ ಸಭೆ ನಡೆಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ನೇತೃತ್ವದಲ್ಲಿ ಸಭೆ ನಡೆಲಾಗಿದೆ.



ವಿಧಾನಸೌಧದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಸಭೆ ನಡೆದಿದೆ. ಸಭೆಯಲ್ಲಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ, ಕೆ ಎಚ್ ಮುನಿಯಪ್ಪ, ಶರಣಪ್ರಕಾಶ ಪಾಟೀಲ್, ಜಮೀರ್ ಅಹ್ಮದ್ ಖಾನ್, ಕೃಷ್ಣ ಬೈರೇಗೌಡ, ಶಾಸಕ ಸಲೀಂ ಅಹ್ಮದ್, ಮಾಜಿ ಎಚ್ ಆಂಜನೇಯ, ದಾವಣಗೆರೆ ಜಿಲ್ಲಾ ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದಾರೆ. ಸಭೆ ಬಳಿಕ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಮಾತನಾಡಿ, 'ದಾವಣಗೆರೆ ದಕ್ಷಿಣ ಕ್ಷೇತ್ರದ ಸಮನ್ವಯ ಸಮಿತಿ ಸಭೆ ನಡೆಯಿತು. ಗುರುವಾರ ಮೊದಲ ಸಭೆ ಮಾಡಲಾಗಿದೆ. ಶಾಸಕರು, ಮಂತ್ರಿಗಳು ಸಭೆಗೆ ಬಂದಿದ್ರು. ಚುನಾವಣೆ ಹೇಗೆ ಮಾಡಬೇಕು ಎಂದು ಚರ್ಚೆ ಮಾಡಲಾಗಿದೆ. ಮಾರ್ಚ್ 24 ರಂದು ಮತ್ತೆ ಸಭೆ ಕರೆದಿದ್ದೇವೆ. ಆ ಸಭೆಯಲ್ಲಿ ದಾವಣಗೆರೆ ಮುಖಂಡರು ಭಾಗಿಯಾಗಲಿದ್ದಾರೆ' ಎಂದು ತಿಳಿಸಿದರು.

ಇಂದಿನ ಚುನಾವಣೆ ಗೆಲ್ಲಲು ರಣತಂತ್ರ ಬಗ್ಗೆ ಮಾತ್ರ ಚರ್ಚೆ ಮಾಡಿದ್ದೇವೆ. ದಾವಣಗೆರೆ ದಕ್ಷಿಣಕ್ಕೆ ಸಂಭಾವ್ಯ ಅಭ್ಯರ್ಥಿಗಳ ಹೆಸರು ಹೇಳಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಸೂಚನೆ ನೀಡಿದ್ದಾರೆ. ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ, ಜಮೀರ್ ಅಹ್ಮದ್ ಖಾನ್ ಸೇರಿದಂತೆ ಸಚಿವರು, ಶಾಸಕರು ಹಾಜರಿದ್ದರು. ಎಲ್ಲರೂ ತಮ್ಮ ಅಭಿಪ್ರಾಯ ಹೇಳಿದ್ದಾರೆ. ಈ ಅಭಿಪ್ರಾಯಗಳನ್ನು ಕೆಪಿಸಿಸಿ ಅಧ್ಯಕ್ಷರಿಗೆ ತಿಳಿಸುತ್ತೇನೆ ಎಂದರು.

# ಬಿಸಿಲು, ಹೀಗಿರಲಿ ಮುಂಜಾಗ್ರತೆ

ಹೀಟ್ ಇಲ್‌ನೆಸ್, ಡಿಹೈಡ್ರೇಷನ್, ಫುಡ್ ಪಾಯಿಸನ್, ಏಸ್ಟ್ರೋಕ್, ವಾಂತಿ, ಭೇದಿ ಹೀಗೆ ಸಾಕಷ್ಟು ಕಾಯಿಲೆಗಳು ಬರಬಹುದು. ಇದನ್ನು ತಡೆಯಲು ಹೆಚ್ಚು ತಣ್ಣನೆಯ, ತಂಪಾಗಿರುವ ವಾತಾವರಣದಲ್ಲಿ ಇರಬೇಕು. ಉರಿ ಬಿಸಿಲಿನಲ್ಲಿ, ಮಧ್ಯಾಹ್ನದ ವೇಳೆ ಅನಾವಶ್ಯಕವಾಗಿ ಯಾರೂ ಹೊರಗೆ ಬರಬಾರದು. ನೀರು, ಜ್ಯೂಸ್, ರಾಗಿ ಅಂಬಲಿ, ಹೆಚ್ಚು ಸೇವಿಸುವುದರಿಂದಾಗಿ ಡಿಹೈಡ್ರೇಷನ್ ತಪ್ಪಿಸಬಹುದು. ಮುಖ್ಯವಾಗಿ ಹೀಟ್ ಸ್ಟ್ರೋಕ್, ಚರ್ಮದ ರೋಗ, ಉಷ್ಣತೆ ಏರಿಕೆ ಆಗುವುದನ್ನು ತಪ್ಪಿಸಲು ಹೆಚ್ಚು ನೀರು ಸೇವಿಸುವುದು, ಹಣ್ಣಿನ ರಸ ಸೇವನೆ, ನೀರಿನ ಅಂಶ ಹೆಚ್ಚಿರುವ ಹಣ್ಣಿನ ಪದಾರ್ಥಗಳನ್ನು ಸೇವನೆ ಮಾಡುವುದು ಉತ್ತಮ.

ಮಕ್ಕಳು, ವಯೋವೃದ್ಧರು, ಗರ್ಭಿಣಿಯರು, ಬಾಣಂತಿಯರು ಆದಷ್ಟು ಬಿಸಿಲಿನಿಂದ ದೂರ ಇರಬೇಕು. ಹೊರಗೆ ಹೋಗುವ ಸಂದರ್ಭ ಬಂದರೆ ಛತ್ರಿ ಒಯ್ಯಿರಿ. ಹಣ್ಣಿನ ರಸ, ಲೆಮನ್ ಜ್ಯೂಸ್ ಸೇವಿಸಿರಿ.



**ಮಣ್ಣಿನ ಮಡಕೆಗೆ ಹೆಚ್ಚಿದ ಬೇಡಿಕೆ:** ಕೆಜಿಎಫ್ ಜಿಲ್ಲೆಯಲ್ಲಿ ಬೇಸಿಗೆ ಪ್ರಾರಂಭವಾಗಿದ್ದು ತಾಪಮಾನ 34 ಡಿಗ್ರಿ ತಲುಪ್ಪಿದ್ದು, ಜನರು ತಣ್ಣನೆಯ ನೀರು ಕುಡಿಯಲು ಮಣ್ಣಿನ ಮಡಕೆಗೆ ಮುಗಿಬಿದ್ದಿದ್ದಾರೆ.

ನಗರದ ಮಾರುಕಟ್ಟೆಯಲ್ಲಿ ಮಣ್ಣಿನ ಮಡಕೆ ಸೇರಿ ಇತರೆ ಪರಿಕರಗಳು ಜನರ ಗಮನ ಸೆಳೆಯುತ್ತಿವೆ. ಬೇಸಿಗೆ ಬೇಗೆಯಿಂದ ಕೊಂಚ ತಂಪಾಗಿರಲು ಮಣ್ಣಿನಿಂದ ತಯಾರಿಸಿದ ಪರಿಕರಗಳನ್ನು ಖರೀದಿಸುವತ್ತ ಜನರು ಹೆಚ್ಚು ಒಲವು ತೋರುತ್ತಿದ್ದಾರೆ. ಜಿಲ್ಲೆಯ ನಾನಾ ಕಡೆ ಆಂಧ್ರ ಮತ್ತು ತಮಿಳುನಾಡು ಮೂಲದ ವ್ಯಾಪಾರಿಗಳು ತಯಾರಿಸಿದ ಮಣ್ಣಿನ ಮಡಕೆ ಸೇರಿ ವಿಶೇಷ ಪರಿಕರಗಳು ಗಮನ ಸೆಳೆಯುತ್ತಿವೆ.

> ### ವೈದ್ಯರ ಸಲಹೆ
> **ಶುದ್ಧ ದೇಶಿ ಶೈಲಿಯಲ್ಲಿ ಮಣ್ಣಿನಿಂದ ತಯಾರಿಸಿದ ಪರಿಕರಗಳಲ್ಲಿ ಆಹಾರ ತಯಾರಿಸುವುದು, ನೀರು ಸೇವಿಸುವುದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ. ಮಣ್ಣಿನ ಪರಿಕರಗಳಲ್ಲೇ ಹೆಚ್ಚಾಗಿ ಆಹಾರ ಸೇವಿಸಬೇಕೆಂದು ಎಂದು ವೈದ್ಯರು ಸಲಹೆ ನೀಡುತ್ತಾರೆ.**

**ಬೆಲೆಯ ಚಿತ್ರಣ:** ಮಣ್ಣಿನಿಂದ ದೇಶಿ ಶೈಲಿಯಲ್ಲಿ ತಯಾರಿಸಿದ 10 ರಿಂದ 25 ಲೀಟರ್ ಸಾಮರ್ಥ್ಯದ ಮಣ್ಣಿನ ಮಡಕೆ 250ರಿಂದ 500 ರೂ., ಅಡುಗೆ ಮಾಡುವ ಮಡಕೆ 200ರಿಂದ 400 ರೂ., ಕುಡಿಯುವ ನೀರಿನ ಜಗ್ಗು 200ರಿಂದ 300 ರೂ., ಮಣ್ಣಿನ ಬಾಟಲ್ 200–350 ರೂ., ಚಪಾತಿ ಅಥವಾ ರೊಟ್ಟಿ ಮಾಡುವ ಹೆಂಚು 150ರಿಂದ 250 ರೂ. ಸೇರಿ ನಾನಾ ಬಣ್ಣ ಬಣ್ಣದ ಇತರೆ ಪರಿಕರಗಳು ಮಾರುಕಟ್ಟೆಯಲ್ಲಿ ಕಂಗೊಳಿಸುತ್ತಿವೆ.

**ಮೊಸರು ಬಹುತೇಕ ಎಲ್ಲಾ ಭಾರತೀಯ ರೆಫ್ರಿಜರೇಟರ್‌ಗಳಲ್ಲಿ ಇರುವ ಆಹಾರಗಳಲ್ಲಿ ಒಂದಾಗಿದೆ. ಇದು ಅನ್ನ, ಪರಾಠಾ ಮತ್ತು ಬೇಸಿಗೆಯ ಸರಳ ಊಟಗಳಿಗೂ ಸಹ ಸೂಕ್ತವಾಗಿದೆ. ಆದರೆ ತಾಪಮಾನ ಹೆಚ್ಚಾದ ನಂತರ ಅನೇಕ ಅಡುಗೆಮನೆಗಳಲ್ಲಿ ಕಾಣಿಸಿಕೊಳ್ಳುವ ಸಾಮಾನ್ಯ ಸಮಸ್ಯೆಯೆಂದರೆ ರಾತ್ರಿಯಲ್ಲಿ ಸೌಮ್ಯ ಮತ್ತು ಕೆನೆ ರುಚಿಯನ್ನು ಹೊಂದಿರುವ ಮೊಸರು ಮರುದಿನ ಇದ್ದಕ್ಕಿದ್ದಂತೆ ಸಾಕಷ್ಟು ಹುಳಿಯಾಗುತ್ತದೆ.**

# ಮೊಸರು ಬೇಗನೇ ಹುಳಿಯಾಗದಿರಲು



ಮೊಸರು ಕೇವಲ ಭಕ್ಷ್ಯವಲ್ಲ, ಆದರೆ ಊಟವನ್ನು ಪೂರ್ಣಗೊಳಿಸುವ ದೈನಂದಿನ ಆಹಾರವಾಗಿದೆ. ಇದನ್ನು ನಿಯಮಿತವಾಗಿ ತಯಾರಿಸಿ ಸಂಗ್ರಹಿಸುವುದರಿಂದ, ಸಣ್ಣ ತಾಪಮಾನ ಏರಿಳಿತಗಳು ಸಹ ಅದರ ರುಚಿ ಮತ್ತು ತಾಜಾತನದ ಮೇಲೆ ತ್ವರಿತವಾಗಿ ಪರಿಣಾಮ ಬೀರುತ್ತವೆ.

ಬೇಸಿಗೆಯಲ್ಲಿ ಮೊಸರು ಏಕೆ ಹುಳಿಯಾಗುತ್ತದೆ

ಮೊಸರು ನಿಖರವಾಗಿ ಮುಗಿದ ಆಹಾರ ಪದಾರ್ಥವಲ್ಲ. ಇದು ಇನ್ನೂ ಪ್ರಯೋಜನಕಾರಿ ಬ್ಯಾಕ್ಟೀರಿಯಾದೊಂದಿಗೆ ಜೀವಂತವಾಗಿದೆ. ಮೊಸರು ಮಾಡಿದ ನಂತರ ಪ್ರಯೋಜನಕಾರಿ ಬ್ಯಾಕ್ಟೀರಿಯಾಗಳು ಕೆಲಸ ಮಾಡುವುದನ್ನು ಮುಂದುವರಿಸುತ್ತವೆ. ಕಾಲಾನಂತರದಲ್ಲಿ ಹೆಚ್ಚು ಆಮ್ಲವನ್ನು ತಯಾರಿಸಲು ಅವು ನಿಧಾನವಾಗಿ ಕೆಲಸ ಮಾಡುತ್ತವೆ. ಹೊರಗೆ ಬಿಸಿಯಾಗಿರುವಾಗ, ಅವು ವೇಗವಾಗಿ ಕೆಲಸ ಮಾಡುತ್ತವೆ. ಅದಕ್ಕಾಗಿಯೇ ಬೇಸಿಗೆಯಲ್ಲಿ ಮೊಸರು ಬೇಗನೆ ಹುಳಿಯಾಗಬಹುದು.ಈ ಪ್ರಕ್ರಿಯೆಯನ್ನು ನಿಧಾನಗೊಳಿಸಲು ನಾವು ಮನೆಯಲ್ಲಿಯೇ ಮಾಡಬಹುದಾದ ಕೆಲವು ಉಪಾಯಗಳ ಬಗ್ಗೆ ತಿಳಿಯೋಣ.



ಈ ನೈಸರ್ಗಿಕ ಹುದುಗುವಿಕೆ ಪ್ರಕ್ರಿಯೆಯು ಹಾಲನ್ನು ದಪ್ಪವಾಗಿಸುತ್ತದೆ ಮತ್ತು ಮೊಸರಿಗೆ ವಿಶಿಷ್ಟವಾದ ಕಟುವಾದ ಪರಿಮಳವನ್ನು ನೀಡುತ್ತದೆ.

ಆದಾಗ್ಯೂ, ಹುದುಗುವಿಕೆ ಪ್ರಕ್ರಿಯೆಯು ಹಾಲು ದಪ್ಪವಾಗುವುದರೊಂದಿಗೆ ನಿಲ್ಲುವುದಿಲ್ಲ. ಬ್ಯಾಕ್ಟೀರಿಯಾಗಳು ಕ್ರಮೇಣ ಆಮ್ಲವನ್ನು ಉತ್ಪಾದಿಸುತ್ತಲೇ ಇರುತ್ತವೆ. ಇದು ವಿಶಿಷ್ಟವಾದ ಸುವಾಸನೆಯ ಬೆಳವಣಿಗೆಗೆ ಕಾರಣವಾಗುತ್ತದೆ, ಇದು ಮೊದಲಿಗಿಂತ ತೀಕ್ಷ್ಣವಾಗಿರುತ್ತದೆ.

ಮಿಶ್ರಣವನ್ನು ಬಿಸಿ ಮಾಡಿದರೆ ಹುದುಗುವಿಕೆಯ ಪ್ರಕ್ರಿಯೆಯು ವೇಗವಾಗಿ ಸಂಭವಿಸುತ್ತದೆ. ಏಕೆಂದರೆ ಈ ಬ್ಯಾಕ್ಟೀರಿಯಾಗಳ ಉಳಿವಿಗೆ ಸೂಕ್ತವಾದ ತಾಪಮಾನವು ಬೇಸಿಗೆಯಲ್ಲಿ ಸಂಭವಿಸುತ್ತದೆ. ಇದರರ್ಥ ಸಂಜೆ ಸಮಯದಲ್ಲಿ ತಯಾರಿಸಿದ ಮೊಸರು ಮರುದಿನ ಬೆಳಿಗ್ಗೆ ಹೆಚ್ಚು ಹುಳಿಯಾಗಿರುತ್ತದೆ.

**ಫ್ರಿಡ್ಜ್‌ನಲ್ಲಿಡುವುದು ಪ್ರಕ್ರಿಯೆಯನ್ನು ನಿಧಾನಗೊಳಿಸಲು ಸಹಾಯ ಮಾಡುವ ವಿಧಾನ:** ಹುಳಿಯನ್ನು ನಿಯಂತ್ರಿಸಲು ಸುಲಭವಾದ ಮಾರ್ಗವೆಂದರೆ ಮೊಸರು ಹೆಪ್ಪುಗಟ್ಟಿದ ನಂತರ ಅದನ್ನು ತಂಪಾಗಿ ಇಡುವುದು. ಕಡಿಮೆ ತಾಪಮಾನವು ಬ್ಯಾಕ್ಟೀರಿಯಾದ ಚಟುವಟಿಕೆಯನ್ನು ನಿಧಾನಗೊಳಿಸುತ್ತದೆ ಮತ್ತು ಮತ್ತಷ್ಟು ಹುದುಗುವಿಕೆಯನ್ನು ಕಡಿಮೆ ಮಾಡುತ್ತದೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ ಪ್ರಕಾರ, ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಆರೋಗ್ಯಕರ ರೀತಿಯಲ್ಲಿ ಸಂಗ್ರಹಿಸಬೇಕು ಮತ್ತು ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮತ್ತು ಹಾಳಾಗುವುದನ್ನು ತಡೆಯಲು ಸರಿಯಾಗಿ ಫ್ರಿಡ್ಜ್‌ನಲ್ಲಿ ಇಡಬೇಕು. ನೀವು ರೆಫ್ರಿಜರೇಟರ್ ಒಳಗೆ ಮೊಸರನ್ನು ಎಲ್ಲಿ ಇಡುತ್ತೀರಿ ಎಂಬುದು ಸಹ ಮುಖ್ಯವಾಗಬಹುದು. ಮಧ್ಯದ ಶೆಲ್ಫ್ ಸಾಮಾನ್ಯವಾಗಿ ಬಾಗಿಲಿನ ವಿಭಾಗಕ್ಕಿಂತ ತಂಪಾಗಿರುತ್ತದೆ ಮತ್ತು ಹೆಚ್ಚು ಸ್ಥಿರವಾಗಿರುತ್ತದೆ, ಇದು ಪ್ರತಿ ಬಾರಿ ರೆಫ್ರಿಜರೇಟರ್ ತೆರೆದಾಗ ಬೆಚ್ಚಗಾಗುತ್ತದೆ.

ಮೊಸರನ್ನು ಪದೇ ಪದೇ ಹೊರಗೆ ತೆಗೆಯುವುದನ್ನು ತಪ್ಪಿಸಿ. ಪ್ರತಿ ಬಾರಿ ಅದು ಬಿಸಿಯಾದಾಗ ಮತ್ತು ತಣ್ಣಗಾಗುವಾಗ, ಹುದುಗುವಿಕೆ ವೇಗಗೊಳ್ಳುತ್ತದೆ.

**ನೀವು ಬಳಸುವ ಪಾತ್ರೆಯು ವ್ಯತ್ಯಾಸವನ್ನುಂಟುಮಾಡಬಹುದು**

ಅನೇಕ ಜನರು ಮೊಸರನ್ನು ಹೆಚ್ಚಾಗಿ ಸ್ಟೇನ್‌ಲೆಸ್ ಸ್ಟೀಲ್ ಅಥವಾ ಪ್ಲಾಸ್ಟಿಕ್ ಡಬ್ಬದಲ್ಲಿ ಸಂಗ್ರಹಿಸುತ್ತಾರೆ. ಅದು ಕೆಲಸ ಮಾಡುತ್ತದೆ, ಆದರೆ ಕೆಲವು ಅಡುಗೆ ತಜ್ಞರು ಬದಲಾಗಿ ಗಾಜಿನ ಪಾತ್ರೆಗಳನ್ನು ಬಳಸಲು ಸೂಚಿಸುತ್ತಾರೆ. ಗಾಜು ಆಹಾರದೊಂದಿಗೆ ಪ್ರತಿಕ್ರಿಯಿಸುವುದಿಲ್ಲ. ಇದು ತಂಪಾದ ತಾಪಮಾನವನ್ನು ಚೆನ್ನಾಗಿ ಹಿಡಿದಿಟ್ಟುಕೊಳ್ಳುತ್ತದೆ. ಇದು ಮೊಸರಿನ ನೈಸರ್ಗಿಕ ರುಚಿಯನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ. ಪಾತ್ರೆಯನ್ನು ಬಿಗಿಯಾಗಿ ಮುಚ್ಚುವುದು ಅಷ್ಟೇ ಮುಖ್ಯ. ತೆರೆದ ಪಾತ್ರೆಯು ಗಾಳಿಯನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ ಮತ್ತು ರೆಫ್ರಿಜರೇಟರ್‌ನಲ್ಲಿ ಮೊಸರನ್ನು ಇತರ ವಾಸನೆಗಳಿಗೆ ಒಡ್ಡಬಹುದು.

**ಯಾವಾಗಲೂ ಮೊಸರನ್ನು ಮುಚ್ಚಿಡಿ**

ಫ್ರಿಜ್‌ನಲ್ಲಿ ಮೊಸರನ್ನು ಮುಚ್ಚದೆ ಬಿಡುವುದು ಸಾಮಾನ್ಯ, ಆದರೆ ಇದು ಮೊಸರಿನ ರುಚಿಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಮೊಸರು ಸುತ್ತಮುತ್ತಲಿನ ವಾಸನೆಯನ್ನು ಸುಲಭವಾಗಿ ಹೀರಿಕೊಳ್ಳುತ್ತದೆ.

ಬಲವಾದ ವಾಸನೆಯ ಆಹಾರಗಳ ಬಳಿ ಪಾತ್ರೆಯನ್ನು ತೆರೆದಿಟ್ಟರೆ, ಅದರ ರುಚಿ ಬದಲಾಗ ಬಹುದು. ಅದು ನಿಧಾನವಾಗಿ ತೇವಾಂಶವನ್ನು ಕಳೆದುಕೊಳ್ಳಬಹುದು, ಇದು ವಿನ್ಯಾಸದ ಮೇಲೂ ಪರಿಣಾಮ ಬೀರುತ್ತದೆ. ಸರಳ ಮುಚ್ಚಳ ಅಥವಾ ಗಾಳಿಯಾಡದ ಮುಚ್ಚಳವು ಪಾತ್ರೆಯೊಳಗಿನ ಪರಿಸರವನ್ನು ಸ್ಥಿರವಾಗಿರಿಸುತ್ತದೆ ಮತ್ತು ಮೊಸರನ್ನು ಹೊರಗಿನ ಗಾಳಿಯಿಂದ ರಕ್ಷಿಸುತ್ತದೆ.



> ### ತುಂಬಾ ಹುಳಿ ರುಚಿಯನ್ನು ಹೊಂದಿದ್ದರೆ
> - ಕೆಲವು ಸಂದರ್ಭಗಳಲ್ಲಿ, ಸರಿಯಾದ ಶೇಖರಣೆಯ ನಂತರವೂ ಮೊಸರು ಸ್ವಲ್ಪ ಹುಳಿಯಾಗಿ ಪರಿಣಮಿಸಬಹುದು. ಅಂತಹ ಸಂದರ್ಭಗಳಲ್ಲಿ, ರುಚಿಯನ್ನು ಸರಿಹೊಂದಿಸಬಹುದು.
> - ಹಾಗೆ ಮಾಡಲು, ಸ್ವಲ್ಪ ತಣ್ಣಗಾದ ಕುದಿಸಿದ ಹಾಲನ್ನು ಮೊಸರಿಗೆ ಸೇರಿಸಬಹುದು. ಇದು ರುಚಿಯ ತೀಕ್ಷ್ಣತೆಯನ್ನು ಕಡಿಮೆ ಮಾಡುತ್ತದೆ.
> - ತಾಜಾ ಹಾಲು ಹುಳಿಯನ್ನು ಕಡಿಮೆ ಮಾಡುತ್ತದೆ ಮತ್ತು ರುಚಿಯನ್ನು ಮತ್ತೆ ಸೌಮ್ಯವಾಗಿಸುತ್ತದೆ.
> - ಇದು ಹುದುಗುವಿಕೆ ಪ್ರಕ್ರಿಯೆಯನ್ನು ನಿಲ್ಲಿಸುವುದಿಲ್ಲ, ಆದರೆ ರುಚಿ ಹೆಚ್ಚು ಆಹ್ಲಾದಕರವಾಗಿರುತ್ತದೆ.

ಉದಯ ವಾಹಿನಿ
ಪ್ರಾದೇಶಿಕ
ಶುಕ್ರವಾರ 13 ಮಾರ್ಚ್ 2026


• ಪ್ರತಿ ಕ್ರಸ್ಟ್‌ಗೇಟ್ ತೆರವಿಗೆ 4 ದಿನ, ಅಳವಡಿಕೆಗೆ 7 ದಿನ, 19 ಗೇಟ್ ಅಳವಡಿಕೆ ಇನ್ನೂ ಬಾಕಿ

# ಮುಂಗಾರಿಗೆ ಮುನ್ನ ತುಂಗಭದ್ರಾ ಡ್ಯಾಂಗೆ ಗೇಟ್ ಕಷ್ಟ

• ಉದಯವಾಹಿನಿ ಹೊಸಪೇಟೆ

ತುಂಗಭದ್ರಾ ಜಲಾಶಯಕ್ಕೆ ಹೊಸ ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸುವ ಕಾಮಗಾರಿ ಸದ್ಯ ಯುದ್ಧೋಪಾದಿಯಲ್ಲಿ ನಡೆಯುತ್ತಿದ್ದರೂ ಮೇ ಅಂತ್ಯದ ಗಡುವಿನೊಳಗೆ ಮುಗಿಯುವುದು ಅನುಮಾನ ಎಂಬ ಮಾತು ಕೇಳಿಬಂದಿದೆ.

ಜಲಾಶಯದ ಒಟ್ಟು 33 ಕ್ರಸ್ಟ್‌ಗೇಟ್‌ಗಳ ಪೈಕಿ ಮಾ.10ರವರೆಗೆ 14 ಗೇಟ್‌ಗಳ ಅಳವಡಿಕೆ ಪೂರ್ಣಗೊಂಡಿದೆ. ತಜ್ಞರ ಪ್ರಕಾರ ಒಂದು ಕ್ರಸ್ಟ್‌ಗೇಟ್ ಅಳವಡಿಕೆಗೆ ಸರಾಸರಿ 7 ದಿನ ಬೇಕು. ಆದರೆ, ಏಕಕಾಲದಲ್ಲಿ ಹಲವು ಕ್ರಸ್ಟ್‌ಗೇಟ್‌ಗಳ ಕೆಲಸ ನಡೆದರೆ ಮಾತ್ರ ಗಡುವಿನೊಳಗೆ ಗುರಿ ತಲುಪಲು ಸಾಧ್ಯ. ಬಾಕಿ 19 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲು ಒಟ್ಟು 133 ಮಾನವ ದಿನ ಬೇಕು. ಸದ್ಯದ ಕಾಮಗಾರಿಯನ್ನು ದುಪ್ಪಟ್ಟು ವೇಗದಲ್ಲಿ ಮುಂದುವರಿಸಬೇಕಿದೆ. ಈವರೆಗೆ 25 ಕ್ರಸ್ಟ್‌ಗೇಟ್‌ಗಳನ್ನು ತೆರವುಗೊಳಿಸಲಾಗಿದ್ದು, 8 ಕ್ರಸ್ಟ್‌ಗೇಟ್‌ಗಳ ತೆರವು ಬಾಕಿಯಿದೆ.

4 ದಿನಗಳಲ್ಲಿ ಒಂದು ಗೇಟ್ ತೆರವುಗೊಳಿಸಿದರೂ ಕನಿಷ್ಠ 32 ದಿನ ಬೇಕು. ತಜ್ಞರು ಹೇಳುವಂತೆ ಕೆಲಸದ ವೇಗ ಹೆಚ್ಚಿಸಿ 3-4 ದಿನಗಳಲ್ಲಿ ಒಂದು ಗೇಟ್ ಅಳವಡಿಸಿದರೂ ನಿರಂತರ ಕೆಲಸ ನಡೆಯಬೇಕಿದೆ. ಏಕಕಾಲದಲ್ಲಿ 3 ಅಥವಾ 4 ತಂಡಗಳನ್ನು ಬಳಸಿ ಕೆಲಸ ಮಾಡಿದರೆ ಮಾತ್ರ 19 ಕ್ರಸ್ಟ್‌ಗೇಟ್‌ಗಳ ಅಳವಡಿಕೆಯನ್ನು ಏಪ್ರಿಲ್ ಅಂತ್ಯದೊಳಗೆ ಮುಗಿಸಿ, ಮೇ ಮೊದಲ ವಾರದಲ್ಲಿ ಪ್ರಾಯೋಗಿಕ ಪರೀಕ್ಷೆ ಪೂರ್ಣಗೊಳಿಸಬಹುದು ಎನ್ನುವ


ಉದಯವಾಹಿನಿ ಚಿತ್ರ

- ತುಂಗಭದ್ರಾ ಜಲಾಶಯಕ್ಕೆ ಹೊಸ ಕ್ರಸ್ಟ್‌ಗೇಟ್ ಅಳವಡಿಕೆ ಕಾಮಗಾರಿ
- ಬಾಕಿ 19 ಗೇಟ್ ಅಳವಡಿಕೆಗೆ 133 ಮಾನವ ದಿನ ಬೇಕು
- ಸದ್ಯದ ವೇಗದಲ್ಲಿ ಕಾಮಗಾರಿ ಮುಂದುವರಿದರೆ ಮೇ ಮಧ್ಯಂತರದ ವೇಳೆಗೆ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣಗೊಳ್ಳುವುದು ತುಸು ಕಷ್ಟದಾಯಕ. ತಾಂತ್ರಿಕ ತಂಡಗಳ ಸಂಖ್ಯೆ ಹೆಚ್ಚಿಸಿದರೆ ಅಸಾಧ್ಯವೇನಲ್ಲ.

ಸಲಹೆಯೂ ಕೇಳಿಬಂದಿದೆ.

**ಇವೆಲ್ಲ ಪ್ಲಸ್ ಪಾಯಿಂಟ್:** 33 ಕ್ರಸ್ಟ್‌ಗೇಟ್‌ಗಳ ಪೈಕಿ ಈಗಾಗಲೇ 26 ಕ್ರಸ್ಟ್‌ಗೇಟ್‌ಗಳ ತಯಾರಿ ಮುಗಿದು ಬಳಕೆಗೆ

**ಮೇ ಅಂತ್ಯಕ್ಕೆ ಮಲೆನಾಡಿನಲ್ಲಿ ಮಳೆ ಶುರುವಾಗುತ್ತದೆ. ಅಷ್ಟರಲ್ಲಿ ಟ್ರಯಲ್ ರನ್ ಮುಗಿದು ಗೇಟ್ ಪಕ್ಕಾ ಇರಬೇಕು. ಮಂಡಳಿಯು ಕೇವಲ ಭರವಸೆ ನೀಡುವ ಬದಲು ಪ್ರಾಯೋಗಿಕವಾಗಿ ಕೆಲಸದ ವೇಗ ಹೆಚ್ಚಿಸಬೇಕು. -ಸಿ.ಎ.ಗಾಳೆಪ್ಪ**
**ಜಿಲ್ಲಾಧ್ಯಕ್ಷ, ರೈತಸಂಘ, ವಿಜಯನಗರ**

ಸಿದ್ಧವಾಗಿವೆ. ಇನ್ನುಳಿದ 7 ಕ್ರಸ್ಟ್‌ಗೇಟ್‌ಗಳ ತಯಾರಿ ಭರದಿಂದ ಸಾಗಿದೆ. ಕಚ್ಚಾ ಸಾಮಗ್ರಿಗಳ ಕೊರತೆ ಇಲ್ಲವೆಂಬುದು ಕಾಮಗಾರಿ ನಿರಂತರ ಸಾಗಲು ನೆರವಾಗಲಿದೆ. ಹಳೆಯ ಕ್ರಸ್ಟ್‌ಗೇಟ್‌ಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಸದ್ಯದ ವೇಗದಲ್ಲಿ ಕಾಮಗಾರಿ ಮುಂದುವರಿದರೆ ಮೇ ಮಧ್ಯಂತರದ ವೇಳೆಗೆ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣಗೊಳ್ಳುವುದು ತುಸು ಕಷ್ಟದಾಯಕ. ತಾಂತ್ರಿಕ ತಂಡಗಳ ಸಂಖ್ಯೆ ಹೆಚ್ಚಿಸಿದರೆ ಅಸಾಧ್ಯವೇನಲ್ಲ.

ಜೂನ್ ಮೊದಲ ವಾರದಲ್ಲಿ ಜಲಾಶಯಕ್ಕೆ ಒಳಹರಿವು ಆರಂಭವಾಗುವ ಸಾಧ್ಯತೆಯಿದೆ. ಮೇ 15ರ ಒಳಗಾಗಿ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಮುಗಿಸಿ

**ಜೂನ್ ಆರಂಭದೊಳಗೆ ಒಳಹರಿವು ಬರುವ ಮುನ್ನ ಎಲ್ಲಾ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಪೂರ್ಣಗೊಳಿಸಲಾಗುವುದು ಎಂದಿದ್ದಾರೆ -ಒಆರ್‌ಕೆ ರೆಡ್ಡಿ ಕಾರ್ಯದರ್ಶಿ, ಟಿಬಿ ಮಂಡಳಿ**

ಉಳಿದ ದಿನಗಳಲ್ಲಿ ಪ್ರಾಯೋಗಿಕ ಪರೀಕ್ಷೆ ಕೈಗೊಳ್ಳುವುದೂ ಅನಿವಾರ್ಯ. ಸದ್ಯದ ಸ್ಥಿತಿಯಲ್ಲಿ ಕೆಲಸಗಾರರ ಸಂಖ್ಯೆ ಮತ್ತು ಕೆಲಸದ ಪಾಳಿ ಹೆಚ್ಚಿಸದಿದ್ದರೆ, ಮೇ ಅಂತ್ಯದವರೆಗೂ ಕಾಮಗಾರಿ ಎಳೆಯುವ ಸಾಧ್ಯತೆ ದಟ್ಟವಾಗಿದೆ.

**10 ಲಕ್ಷ ಎಕರೆ ಪ್ರದೇಶಕ್ಕೆ ಆಧಾರ**
**ವಿಜಯನಗರ, ಕೊಪ್ಪಳ, ಬಳ್ಳಾರಿ, ರಾಯಚೂರು ಮತ್ತು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ 10 ಲಕ್ಷ ಎಕರೆ ಕೃಷಿಭೂಮಿಗೆ ತುಂಗಭದ್ರಾ ಜಲಾಶಯ ನೀರುಣಿಸುತ್ತಿದೆ. ದುಸ್ಥಿತಿಯಲ್ಲಿರುವ ಜಲಾಶಯದ ಎಲ್ಲಾ ಕ್ರಸ್ಟ್‌ಗೇಟ್‌ಗಳ ತೆರವು ಹಾಗೂ ಬದಲಾವಣೆ ಕಾಮಗಾರಿ ಕೈಗೊಂಡ ಹಿನ್ನೆಲೆಯಲ್ಲಿ ಪ್ರಸಕ್ತ ಬೇಸಿಗೆ ಬೆಳೆಗೆ ನೀರು ಹರಿಸಿಲ್ಲ. ಕೃಷಿಯ ಜತೆಗೆ ಅವಲಂಬಿತ ಹಲವು ಕ್ಷೇತ್ರಗಳು ಮತ್ತು ಕಾರ್ಮಿಕರಿಗೆ ಬಹುದೊಡ್ಡ ನಷ್ಟ ಬಂದೊದಗಿದೆ. ಆದರೂ ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಅಚ್ಚುಕಟ್ಟು ಪ್ರದೇಶದ ಜನ ಈ ನಷ್ಟ, ಕಷ್ಟವನ್ನು ಸಹಿಸಿಕೊಂಡೇ ಒಳ್ಳೆಯ ದಿನಗಳಿಗಾಗಿ ಕಾಯುತ್ತಿದ್ದಾರೆ.**

## ಬಾಗಿಲು ಮುಚ್ಚುವ ಭೀತಿಯಲ್ಲಿ ಹೋಟೆಲ್‌ಗಳು

• ಉದಯವಾಹಿನಿ ಚಿಕ್ಕಮಗಳೂರು

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ನಗರದ ಹೋಟೆಲ್‌ಗಳು ಬಾಗಿಲು ಮುಚ್ಚುವ ಆತಂಕ ಎದುರಾಗಿದೆ. ಗೃಹ ಬಳಕೆ ಅನಿಲ ಪೂರೈಕೆಯಲ್ಲಿ ಇದುವರೆಗೆ ಯಾವುದೇ ವ್ಯತ್ಯಯ ಕಂಡುಬಂದಿಲ್ಲ. ಆದರೆ, ವಾಣಿಜ್ಯ ಬಳಕೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರು ಚಟಪಡಿಸುತ್ತಿದ್ದಾರೆ.

ನಗರದ ಐ.ಜಿ.ರಸ್ತೆಯಲ್ಲಿರುವ ವಿಷ್ಣು ಡೆಲಿಕೆಸಿ ಮತ್ತು ತಾಜ್ ಹೋಟೆಲ್ ಬಾಗಿಲು ಮುಚ್ಚಲಾಗಿತ್ತು. ಸಿಲಿಂಡರ್ ಖಾಲಿ ಆಗಿರುವುದರಿಂದ ಬೇರೆ ದಾರಿ ಇಲ್ಲದೆ ಮುಚ್ಚಲಾಗಿದೆ ಎಂದು ವಿಷ್ಣು ಡೆಲಿಕೆಸಿ ಮಾಲೀಕರು ಹೇಳಿದರು.

ಜಿಲ್ಲೆಯ ಎಲ್ಲೆಡೆ ಸಿಲಿಂಡರ್ ಕೊರತೆಯ ಬಿಸಿ ನಿಧಾನವಾಗಿ ಆರಂಭವಾಗಿದೆ. ಎರಡು ದಿನ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಆಗದಿದ್ದರೆ ಬಹುತೇಕ ಹೋಟೆಲ್‌ಗಳು ಬಂದ್ ಆಗಲಿವೆ ಎಂದು ಹೋಟೆಲ್


ಉದಯವಾಹಿನಿ ಚಿತ್ರ

ಮಾಲೀಕರು ಹೇಳುತ್ತಾರೆ. ಸತ್ರೆ, ಶಾಲೆ-ಕಾಲೇಜು, ಅಕ್ಷರ ದಾಸೋಹ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಅಲ್ಪಸಂಖ್ಯಾತರ ಇಲಾಖೆ ಸೇರಿದಂತೆ ಅಗತ್ಯ ಸೇವೆಗಳಿಗೆ ಒದಗಿಸಬೇಕಾದ ಸಿಲಿಂಡರ್‌ಗಳು ಲಭ್ಯವಿದ್ದು, ಯಾವುದೇ ರೀತಿ ಸಮಸ್ಯೆ ಸದ್ಯಕ್ಕೆ ಕಾಣಿಸುತ್ತಿಲ್ಲ. ಹೋಂದ್ರೆ ಮತ್ತು ರೆಸಾರ್ಟ್‌ಗಳಲ್ಲಿ ಸದ್ಯ ಪ್ರವಾಸಿಗರು ಕಡಿಮೆ ಇದ್ದಾರೆ. ಆದ್ದರಿಂದ ಸಮಸ್ಯೆ ಅಷ್ಟಾಗಿ ಕಾಣಿಸುತ್ತಿಲ್ಲ. ಇದೇ

**ಬಿಸಿಯೂಟ ತಯಾರಿಕೆಗೂ ಸದ್ಯಕ್ಕೆ ಸಮಸ್ಯೆ ಇಲ್ಲ. ಅಗತ್ಯ ಸಿಲಿಂಡರ್ ದಾಸ್ತಾನು ಮಾಡಲು ಏಜೆನ್ಸಿಗಳಿಗೆ ಸೂಚಿಸಲಾಗಿದೆ ಎಂದು ಡಿಡಿಪಿಐ ತಿಮ್ಮರಾಜು ಮಾಹಿತಿ ನೀಡಿದರು. ಹಿಂದುಳಿದ ವರ್ಗಗಳ ಇಲಾಖೆಯಲ್ಲೂ ಸಿಲಿಂಡರ್ ಕೊರತೆ ಇಲ್ಲ. -ಮಂಜುನಾಥ್**
**ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ**

ರೀತಿ ಮುಂದುವರಿದರೆ ಬರುವ ಅತಿಥಿಗಳಿಗೆ ಆಹಾರ ತಯಾರಿಸಿಕೊಡುವುದು ಕಷ್ಟವಾಗಲಿದೆ ಎಂಬ ಆತಂಕ ಹೋಂದ್ರೆ ಮಾಲೀಕರಲ್ಲಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಸಿಲಿಂಡರ್ ಕೊರತೆ ಸದ್ಯಕ್ಕೆ ಇಲ್ಲ. 15 ದಿನಕ್ಕೆ ಸಾಕಾಗುವಷ್ಟು ಸಿಲಿಂಡರ್ ದಾಸ್ತಾನಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಮಾಲತಿ ತಿಳಿಸಿದರು.

## ಜಿಲ್ಲೆಯಲ್ಲಿ ಅಡುಗೆ ಅನಿಲದ ಕೊರತೆಯಿಲ್ಲ

• ಉದಯವಾಹಿನಿ ದಾವಣಗೆರೆ

ಜಿಲ್ಲೆಯಲ್ಲಿ ಅಡುಗೆ ಅನಿಲದ ದಾಸ್ತಾನು ಹೇರಳವಾಗಿದ್ದು, ಸಾರ್ವಜನಿಕರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಸಾರ್ವಜನಿಕರು ಆತಂಕದಿಂದ ಅತಿಯಾಗಿ ಸಿಲಿಂಡರ್ ಬುಕಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಇದರಿಂದಾಗಿ ವ್ಯವಸ್ಥೆಯ ಮೇಲೆ ಒತ್ತಡ ಉಂಟಾಗಲಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು. ಅಡುಗೆ ಅನಿಲ ಪೂರೈಕೆದಾರರು ಮತ್ತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಗೃಹ ಉಪಯೋಗಿ ಅಡುಗೆ ಅನಿಲ ಸಿಲಿಂಡರ್ ಅನ್ನು ಬುಕ್ ಮಾಡಿದ 25 ದಿನದೊಳಗೆ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು. ಮನೆ ಬಳಕೆಯ ಸಿಲಿಂಡರ್‌ಗಳನ್ನು ಹೋಟೆಲ್, ರೆಸ್ಟೋರೆಂಟ್ ಅಥವಾ ಇತರ ವಾಣಿಜ್ಯ ಉದ್ದೇಶಗಳಿಗೆ ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ರಸ್ತೆ ಬದಿಯ ಗಾಡಿಗಳು ಅಥವಾ ವಾಣಿಜ್ಯ ಮಳಿಗೆಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಕಂಡುಬಂದರೆ ತಕ್ಷಣವೇ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಚ್ಚರಿಸಿದರು. ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟದಲ್ಲಿ ತೊಂದರೆಯಾಗದಂತೆ ನಿರಂತರ ಪೂರೈಕೆ ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ವಸತಿ ನಿಲಯಗಳಲ್ಲಿ ಗ್ಯಾಸ್ ಉಳಿತಾಯ ಮಾಡುವ ನಿಟ್ಟಿನಲ್ಲಿ ಚಪಾತಿ, ಪೂರಿ ದೋಸೆಯಂತಹ ಅಡುಗೆಗಳನ್ನು ತಾತ್ಕಾಲಿಕವಾಗಿ ಮುಂದೂಡಿ, ಬದಲಿಗೆ ಉಪ್ಪಿಟ್ಟು, ಪುಲಾವ್, ತರಕಾರಿ ಬಾತ್, ಅನ್ನ, ತರಕಾ ಸಂಬಾರು ಮಾಡುವಂತೆ ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಎಚ್.ಟಿ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಮಧುಸೂಧನ್, ಆಹಾರ ನಿರೀಕ್ಷಕರು, ಅನಿಲ ಪೂರೈಕೆ ಮಾಡುವ ಎಜೆನ್ಸಿಗಳ ಪ್ರತಿನಿಧಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಮಳಿಗೆಯಿಂದಲೇ ಸಿಲಿಂಡರ್ ಪಡೆಯುತ್ತಿರುವ ಜನ

• ಉದಯವಾಹಿನಿ ಮುಂಡಗೋಡ

ಗೃಹಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆಯಾಗಲಿವೆ ಎಂಬ ಆತಂಕದಲ್ಲಿ ಹಲವರು ಸಿಲಿಂಡರ್ ಪಡೆಯಲು ಪಟ್ಟಣದ ಅಮ್ಮಾಜಿ ಕೆರೆಯ ಸನಿಹದ ದಾಸ್ತಾನು ಮಳಿಗೆಗೆ ಬೆಳಿಗ್ಗೆಯಿಂದಲೇ ಹೋಗಿ, ಒಂದೊಂದು ಸಿಲಿಂಡರ್ ಪಡೆದುಕೊಂಡು ಬರುತ್ತಿರುವ ದೃಶ್ಯ ಕಂಡುಬಂತು.

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದ ಪರಿಣಾಮ ಅಡುಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ಸುದ್ದಿ ಹಬ್ಬಿದ್ದರಿಂದ, ಹಲವರು ಸಿಲಿಂಡರ್ ಪಡೆಯಲು ಬೈಕ್, ಸೈಕಲ್, ಕಾರುಗಳಲ್ಲಿ ಖಾಲಿ ಆಗಿರುವ ಸಿಲಿಂಡರ್ ತೆಗೆದುಕೊಂಡು, ದಾಸ್ತಾನು ಮಳಿಗೆಗೆ ಹೋಗಿ ತುಂಬಿದ ಸಿಲಿಂಡರ್ ಪಡೆದುಕೊಂಡು ಬರುತ್ತಿದ್ದಾರೆ. ಸದ್ಯಕ್ಕೆ ಸಿಲಿಂಡರ್ ಕೊರತೆ ಇಲ್ಲ. ವಾಹನಗಳು ಓಣಿ ಓಣಿಗಳಿಗೆ ಬಂದು, ಬುಕ್ಕಿಂಗ್ ಮಾಡಿದವರಿಗೆ ಸಿಲಿಂಡರ್ ವಿತರಿಸಲಾಗುವುದು ಎಂದು ಹೇಳಿದರೂ, ಜನರು ಕೇಳುತ್ತಿಲ್ಲ. ಖಾಲಿ ಸಿಲಿಂಡರ್ ತೆಗೆದುಕೊಂಡು ಗೊಡೌನ್‌ಗೆ ಬರುತ್ತಿದ್ದಾರೆ. ಬುಕ್ಕಿಂಗ್ ಮಾಡಿ ಒಟಿಪಿ ಬಂದವರು, ಇಲ್ಲಿಯೇ ಸಿಲಿಂಡರ್


ಉದಯವಾಹಿನಿ ಚಿತ್ರ

ಪಡೆದುಕೊಂಡು ಹೋಗುತ್ತಿದ್ದಾರೆ. ವಿತರಣೆಗೆ ವಾಹನಗಳು ಓಣಿಗಳಲ್ಲಿ ಸಂಚರಿಸಿದರೆ, ಜನರನ್ನು ನಿಯಂತ್ರಿಸುವುದು ತುಸು ಕಷ್ಟವಾಗಬಹುದು ಎಂದು ಸಿಲಿಂಡರ್ ಸರಬರಾಜು ವಾಹನದ ಚಾಲಕ ಮಹೇಶ ಹೇಳಿದರು. ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಸ್ಥಗಿತಗೊಂಡಿದೆ. ಗೃಹಬಳಕೆಯ ಸಿಲಿಂಡರ್‌ಗಳನ್ನು ಒಟಿಪಿ ಬಂದವರಿಗೆ ಮಾತ್ರ ವಿತರಿಸಲಾಗುವುದು. 300 ರಿಂದ400 ಜನರು ಬುಕ್ಕಿಂಗ್ ಮಾಡಿ, ಒಟಿಪಿ ಬಂದರೆ, ಕಂಪನಿಯವರು ಒಂದು ಲೋಡ್ ಸಿಲಿಂಡರ್ ಕಳಿಸುತ್ತಾರೆ' ಎಂದು ಓಂ ಗ್ಯಾಸ್ ಸರ್ವಿಸಸ್ ಮಾಲೀಕ ಬಸವರಾಜ ಓಶೀಮಠ ಹೇಳಿದರು.

## ನೆಹರು ಮಾರುಕಟ್ಟೆ ಸ್ಥಳಾಂತರಕ್ಕೆ ವಿರೋಧ

• ಉದಯವಾಹಿನಿ ರಾಣೆಬೆನ್ನೂರು

ಇಲ್ಲಿನ ನೆಹರು ಮಾರುಕಟ್ಟೆ ವ್ಯಾಪಾರಸ್ಥರನ್ನು ಸ್ಥಳಾಂತರಿಸಬಾರದೆಂದು ಆಗ್ರಹಿಸಿ ಮಾರುಕಟ್ಟೆ ವ್ಯಾಪಾರಸ್ಥರು ಎಪಿಎಂಸಿ ಮುಖ್ಯ ಕಾರ್ಯದರ್ಶಿ ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು. ನೆಹರು ಮಾರುಕಟ್ಟೆ ವರ್ತಕರ ಸಂಘದ ಉಪಾಧ್ಯಕ್ಷ ಹಾಲಪ್ಪ ಮುದ್ದಿಯವರ ಮಾತನಾಡಿ, ಮಾರುಕಟ್ಟೆ ಸ್ಥಳಾಂತರದ ಹಿನ್ನೆಲೆಯಲ್ಲಿ ನೋಟಿಸ್ ನೀಡಿದ್ದರಿಂದ ಈ ಕುರಿತು ಧಾರವಾಡ ಹೈಕೋರ್ಟ್‌ಗೆ 13 ವರ್ತಕರು ಅರ್ಜಿ ಸಲ್ಲಿಸಿದ್ದು, ಏಪ್ರಿಲ್ 6ರ ವರೆಗೂ ಮಾರುಕಟ್ಟೆಯನ್ನು ಸ್ಥಳಾಂತರ ಮಾಡಬಾರದೆಂದು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶಕ್ಕೆ ನ್ಯಾಯಾಲಯವು ತಾತ್ಕಾಲಿಕವಾಗಿ ತಡೆಯಾಜ್ಞೆ ನೀಡಿದೆ ಎಂದರು.

ನೆಹರು ಮಾರುಕಟ್ಟೆಯಲ್ಲಿ 113 ವರ್ತಕರು ವ್ಯಾಪಾರ ಮಾಡುತ್ತಿದ್ದು. ಇದೀಗ ಸಮಸ್ಯೆ ಬಿಗಡಾಯಿಸಿ ನ್ಯಾಯಾಲಯದ ಮೊರೆ ಹೋಗಲು ಅನಿವಾರ್ಯವಾಗಿದೆ. ಈ ಭಾಗದಲ್ಲಿ ಜನಸಂದಣಿ, ವಾಹನಗಳ ಓಡಾಟ ಅಧಿಕವಾಗಿದ್ದು, ಸಂಚಾರಕ್ಕೆ ಅಡೆತಡೆ ಉಂಟಾಗುತ್ತಿದೆ ಎಂದು ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತವು ತಿಳಿಸಿದ್ದು, ಈ ಹಿನ್ನೆಲೆಯಲ್ಲಿ ಇನ್ಮುಂದೆ ಪ್ರತಿ ಭಾನುವಾರ ನೆಹರು ಮಾರ್ಕೆಟ್‌ಗೆ ರಜೆ ಘೋಷಿಸಿ ವ್ಯಾಪಾರ ವಹಿವಾಟು


ಉದಯವಾಹಿನಿ ಚಿತ್ರ

**ಎಪಿಎಂಸಿ ಮುಖ್ಯ ಕಾರ್ಯದರ್ಶಿಗೆ ಮನವಿ**

ಸ್ಥಗಿತಗೊಳಿಸಲಾಗುವುದು ಎಂದು ತಿಳಿಸಿದರು. ವರ್ತಕ ಗದಿಗೆಪ್ಪ ಜಿ. ಹೊಟ್ನಗೌಡ್ರ ಮಾತನಾಡಿ, ಮಾರುಕಟ್ಟೆಯಲ್ಲಿ 113 ಅಂಗಡಿಕಾರರು ವ್ಯಾಪಾರ ವಹಿವಾಟು ಮಾಡುತ್ತಿದ್ದು, ಇದರಲ್ಲಿ 13 ಜನರು ಮಾತ್ರ ಮುಂಗಡವಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಉಳಿದ 100 ವರ್ತಕರು ವಾರದೊಳಗೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ, ಇದೇ ಮಾರುಕಟ್ಟೆಯಲ್ಲಿಯೇ ವ್ಯಾಪಾರ ವಹಿವಾಟಿಗೆ ಮನವಿ ಮಾಡಿಕೊಳ್ಳಲಿದ್ದಾರೆ. ಇದರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ, ಬಿಕ್ಕಟ್ಟು, ವರ್ತಕರಲ್ಲಿ ಇಲ್ಲ. ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ ಎಂದರು.

ರೈತರಿಗೆ ಯಾವುದೇ ರೀತಿಯ ಮೋಸ, ವಂಚನೆ ಆಗುವುದಿಲ್ಲ. ತೂಕದಲ್ಲಿ ವ್ಯತ್ಯಾಸ ಕಂಡು ಬರುವುದಿಲ್ಲ. ಸ್ಪರ್ಧಾತ್ಮಕ ದರ ಸಿಗುತ್ತದೆ. ಈಗಿನ ನೆಹರು ಮಾರುಕಟ್ಟೆ ಹಾಗೂ ಎಪಿಎಂಸಿ ಮುಖ್ಯ ಮಾರುಕಟ್ಟೆಯನ್ನು ಹೂಲಿಹಳ್ಳಿ- ಕೂನಬೇವು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಮೇಘಾ ಮಾರುಕಟ್ಟೆಗೆ ಸ್ಥಳಾಂತರಿಸಲು ಅಧಿಕಾರಿಗಳು ಮತ್ತು ರಾಜ್ಯ ರೈತ ಸಂಘಟನೆಗಳು ರಾಣೆಬೆನ್ನೂರು ಬಂದ್‌ಗೆ ಕರೆ ನೀಡಿದರೆ 113 ವ್ಯಾಪಾರಸ್ಥರು ಸಂಪೂರ್ಣ ಬೆಂಬಲ ಸೂಚಿಸಲಾಗುತ್ತದೆ ಎಂದು ತಿಳಿಸಿದರು.

## ಹೊಟ್ಟು-ಮೇವು ದುಬಾರಿ: ರೈತರಿಗೆ ಹೊರೆ

• ಉದಯವಾಹಿನಿ ಗಜೇಂದ್ರಗಡ

ತಾಲ್ಲೂಕಿನಲ್ಲಿ ರೈತರು ಈಗಾಗಲೇ ಹಿಂಗಾರು ಬೆಳೆಗಳ ರಾಶಿ ಕಾರ್ಯ ಮುಗಿಸಿದ್ದು, ಜಾನುವಾರುಗಳಿಗೆ ಬೇಸಿಗೆಯಲ್ಲಿ ಆಹಾರದ ಕೊರತೆ ಉಂಟಾಗದಿರಲಿ ಎಂಬ ಉದ್ದೇಶದಿಂದ ಹೊಟ್ಟು-ಮೇವು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಎರಿ (ಕಪ್ಪು) ಭೂಮಿಯಲ್ಲಿ ಬಿತ್ತನೆಯಾಗಿದ್ದ ಕಡಲೆ, ಬಿಳಿಜೋಳ ಬೆಳೆಗಳ ರಾಶಿ ಕಾರ್ಯ ಮುಗಿದಿದೆ. ಇದರ ಜೊತೆಗೆ ನೀರಾವರಿ ಸೌಲಭ್ಯವಿರುವ ಮಸಾರಿ ಭೂಮಿಯಲ್ಲಿ ಬಿತ್ತನೆಯಾಗಿದ್ದ ಶೇಂಗಾ ಬೆಳೆ ಕಟಾವು ನಡೆಯುತ್ತಿದ್ದು, ರೈತರು ಬಿಳಿ ಜೋಳದ ಮೇವು, ಕಡಲೆ ಮತ್ತು ಶೇಂಗಾ ಹೊಟ್ಟು ಸಂಗ್ರಹಿಸಿ ಹೊಲಗಳಲ್ಲಿ, ಮನೆ ಹತ್ತಿರದ ಹಿತ್ತಲಲ್ಲಿ ಬಣವಿ ಒಟ್ಟುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಜಾನುವಾರುಗಳನ್ನು ಹೊಂದಿರುವ ರೈತರು ತಮ್ಮ ಹೊಲಗಳಲ್ಲಿನ ಹೊಟ್ಟು ಮೇವಿನ ಜೊತೆಗೆ ಜಾನುವಾರು ಇಲ್ಲದವರ ಹೊಲದಲ್ಲಿರುವ ಹೊಟ್ಟು ಮೇವು ಖರೀದಿಸಿ ಟ್ರ್ಯಾಕ್ಟರ್‌ಗಳ ಮೂಲಕ ಸಂಗ್ರಹಿಸುತ್ತಿದ್ದಾರೆ. ಈ ಬಾರಿ

**ಮೇವು ಹೊಂದಿಸುವುದೇ ಕಷ್ಟ**
**ಈಗ ಬಹುತೇಕ ಕೃಷಿ ಕೆಲಸಗಳಿಗೆ ಎತ್ತುಗಳ ಬದಲಾಗಿ ಟ್ರ್ಯಾಕ್ಟರ್ ಬಳಕೆ ಮಾಡುತ್ತಿದ್ದಾರೆ. ಆದರೆ ಎತ್ತಿನಿಂದ ಬಾಳೆ ಮಾಡಿದಂಗ ಟ್ರ್ಯಾಕ್ಟರ್‌ನಿಂದ ಆಗುವುದಿಲ್ಲ. ಹೀಗಾಗಿ ಎತ್ತುಗಳ ಜೊತೆಗೆ ದನ-ಕರುಗಳಿಗೆ ಹೊಟ್ಟು-ಮೇವು ಖರೀದಿಸಿ ಬಣವಿ ಒಟ್ಟುತ್ತಿದ್ದೇವೆ. ಈ ಬಾರಿ ಹೊಟ್ಟು-ಮೇವು ದುಬಾರಿಯಾಗಿದ್ದು ಹೊಟ್ಟು-ಮೇವು ಹೊಂದಿಸುವುದು ಕಷ್ಟವಾಗಿದೆ ಎಂದು ರಾಜೂರ ಗ್ರಾಮದ ರೈತ ಸಿದ್ದಪ್ಪ ನರಗುಂದ ತಿಳಿಸಿದರು.**

ಹಿಂಗಾರಿ ಬಿತ್ತನೆ ಮಾಡಿದ ಬಳಿಕ ಮಳೆಯಾಗಿದ್ದರಿಂದ ಬಿಳಿಜೋಳ, ಕಡಲೆ ಫಸಲು ಸರಿಯಾಗಿ ಬಂದಿಲ್ಲ. ಅಲ್ಲದೇ ನೀರಾವರಿ ಇರುವ ಮಸಾರಿ ಭೂಮಿಯಲ್ಲಿ ಈ ಬಾರಿ ಕಡಿಮೆ ಪ್ರದೇಶದಲ್ಲಿ ಶೇಂಗಾ ಬಿತ್ತನೆಯಾಗಿದೆ.

ಹೀಗಾಗಿ ಈ ಬಾರಿ ಹೊಟ್ಟು-ಮೇವು ತುಸು


ಉದಯವಾಹಿನಿ ಚಿತ್ರ

ದುಬಾರಿಯಾಗಿದ್ದು, ಜಾನುವಾರು ಹೊಂದಿರುವ ರೈತರಿಗೆ ಹೊರೆಯಾಗಿದೆ. ಗಜೇಂದ್ರಗಡ ತಾಲ್ಲೂಕಿನಲ್ಲಿ ಕಳೆದ ವರ್ಷ ಟ್ರ್ಯಾಕ್ಟರ್ ಒಂದಕ್ಕೆ ರೂ.6 ಸಾವಿರದಿಂದ ರೂ.7 ಸಾವಿರವಿದ್ದ ಬಿಳಿಜೋಳದ ಮೇವು ಈ ಬಾರಿ ರೂ.8 ಸಾವಿರದಿಂದ ರೂ.10 ಸಾವಿರವಾಗಿದೆ. ಕಳೆದ ಬಾರಿ ಟ್ರ್ಯಾಕ್ಟರ್ ಒಂದಕ್ಕೆ ರೂ.10 ಸಾವಿರದಿಂದ ರೂ.12 ಸಾವಿರವಿದ್ದ ಶೇಂಗಾ ಹೊಟ್ಟು ಈ ಬಾರಿ ರೂ.12ಸಾವಿರದಿಂದ ರೂ.15 ಸಾವಿರವಾಗಿದೆ. ಕಳೆದ ಬಾರಿ ಟ್ರ್ಯಾಕ್ಟರ್ ಒಂದಕ್ಕೆ ರೂ.3 ಸಾವಿರದಿಂದ ರೂ.4 ಸಾವಿರವಿದ್ದ ಕಡಲೆ ಹೊಟ್ಟು ಈ ಬಾರಿ ರೂ.6 ಸಾವಿರದಿಂದ ರೂ.8 ಸಾವಿರವಾಗಿದೆ ಎಂದು ರೈತರು ಅಲವತ್ತುಕೊಂಡಿದ್ದಾರೆ.

## ಕುಡಿಯುವ ನೀರಿಗಾಗಿ ಗ್ರಾಮಸ್ಥರ ಪರದಾಟ

• ಉದಯವಾಹಿನಿ ರೋಣ

ಬೇಸಿಗೆ ಪ್ರಾರಂಭಗೊಂಡಿದ್ದು, ಜನ-ಜಾನುವಾರು ನೀರಿಗಾಗಿ ಪರಿತಪಿಸುವ ಸ್ಥಿತಿ ಬಂದೊದಗಿದೆ. ಇಂತಹ ಸಂದರ್ಭದಲ್ಲಿ ತಾಲ್ಲೂಕಿನ ಹಿರೇಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಯರೆಕುರುಬನಾಳ ಗ್ರಾಮಕ್ಕೆ ಹಲವು ತಿಂಗಳುಗಳಿಂದಲೇ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಇದರಿಂದಾಗಿ ಗ್ರಾಮಸ್ಥರು ನೀರಿಗಾಗಿ ಪರದಾಡುವಂತ ಸ್ಥಿತಿ ನಿರ್ಮಾಣಗೊಂಡಿದೆ.

ಕೇಂದ್ರ ಸರ್ಕಾರ ಜಲ ಜೀವನ ಮಿಷನ್ ಯೋಜನೆ ಅಡಿಯಲ್ಲಿ ನೀರು ಪೂರೈಕೆ ಮಾಡುವ ಮಹತ್ತರ ಯೋಜನೆ ರೂಪಿಸಿದ್ದರೂ ಈ ಗ್ರಾಮಕ್ಕೆ ಮಾತ್ರ ಸಮರ್ಪಕವಾದ ನೀರು ಇದುವರೆಗೂ ಪೂರೈಕೆಯಾಗುತ್ತಿಲ್ಲ. ಕೆಲಕಡೆಗಳಲ್ಲಿ ನೀರು ಬಂದರೆ ಇನ್ನು ಕೆಲವು ಓಣಿಗಳಲ್ಲಿ ನೀರಿನ ಬವಣೆ ಇದೆ. ನೀರಿಗಾಗಿ ಇಲ್ಲಿನ ಗ್ರಾಮಸ್ಥರು ಕೊಡಗಳನ್ನು ಹಿಡಿದುಕೊಂಡು ಅಲೆದಾಡುವಂತಹ ಸ್ಥಿತಿ ನಿರ್ಮಾಣಗೊಂಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸುವ ಗೋಜಿಗೆ ಹೋಗದಿರುವುದು


ಉದಯವಾಹಿನಿ ಚಿತ್ರ

ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಈಗಾಗಲೇ ಬಹುತೇಕ ಗ್ರಾಮ ಪಂಚಾಯಿತಿಗಳ ಅಧ್ಯಕ್ಷ ಉಪಾಧ್ಯಕ್ಷರು ಹಾಗೂ ಸದಸ್ಯರ ಅಧಿಕಾರಾವಧಿ ಮುಕ್ತಾಯಗೊಂಡಿದ್ದು ಗ್ರಾಮದಲ್ಲಿರುವ ಸಮಸ್ಯೆಗಳಿಗೆ ಪರಿಹಾರವನ್ನು ಗ್ರಾಮಸ್ಥರು ಯಾರ ಬಳಿ ಕೇಳಬೇಕು ಎಂಬ ಗೊಂದಲದಲ್ಲಿದ್ದಾರೆ.

ಸದಸ್ಯರನ್ನು ಕೇಳಿದರೆ ನಮ್ಮ ಅಧಿಕಾರ ಅವಧಿ ಪೂರ್ಣಗೊಂಡಿದೆ ಅಧಿಕಾರಿಗಳನ್ನು ಕೇಳಿ ಎನ್ನುತ್ತಾರೆ. ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದ್ದು, ಪಿಡಿಒ ಆಗಲಿ, ಆಡಳಿತಾಧಿಕಾರಿಗಳಾಗಲಿ ಜನರ ಸಮಸ್ಯೆಗಳನ್ನು ಆಲಿಸುವಲ್ಲಿ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ ಎಂಬುದು ಗ್ರಾಮಸ್ಥರ ದೂರಾಗಿದೆ.

# ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ: ಹೋಟೆಲ್‌ಗಳಲ್ಲಿ ಕಿರಿದಾದ ತಿನಿಸು ಪಟ್ಟಿ

## ಸಾಲು ಸಾಲು ಮದುವೆ, ಶುಭ ಸಮಾರಂಭಗಳಿಗೆ ಊಟ, ಉಪಹಾರ ಸಿದ್ಧಪಡಿಸುವ ಗುತ್ತಿಗೆ ಪಡೆದಿದ್ದೇವೆ: ಸುನೀಲ ರಾಯ್ಕರ್

• ಉದಯವಾಹಿನಿ ಕಾರವಾರ

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಬಿಸಿ ಇಲ್ಲಿನ ಹೋಟೆಲ್ ಉದ್ಯಮಕ್ಕೂ ತಟ್ಟಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಯಲ್ಲಿನ ವ್ಯತ್ಯಯದ ಪರಿಣಾಮ ಉಪಹಾರಗೃಹಗಳಲ್ಲಿನ ತಿನಿಸು ಪಟ್ಟಿ ಕಿರಿದಾಗುತ್ತಿದೆ. ಜಿಲ್ಲಾಕೇಂದ್ರದ ಜೊತೆಗೆ ಪ್ರವಾಸಿ ತಾಣವೂ ಆಗಿರುವುದರಿಂದ ಇಲ್ಲಿಗೆ ಕಚೇರಿ ಕೆಲಸದ ನಿಮಿತ್ತ ಹೊರಗಿನಿಂದ ಜನರು ಬರುವುದು ಹೆಚ್ಚು. ರೆಸ್ಟೋರೆಂಟ್, ಫಾಸ್ಟ್‌ಫುಡ್ ಕೇಂದ್ರಗಳು, ಹೋಟೆಲ್‌ಗಳ ಸಂಖ್ಯೆ ಸಾಕಷ್ಟಿದೆ. ಆದರೆ, ನೂರಾರು ವೈವಿಧ್ಯದ ತಿನಿಸುಗಳು ಲಭ್ಯವಿದ್ದ ಹಲವು ಹೋಟೆಲ್‌ಗಳಲ್ಲಿ ಈಗ ತಿನಿಸು ಪಟ್ಟಿ (ಮೆನು ಕಾರ್ಡ್) ಕಿರಿದಾಗಿದೆ.

ತಯಾರಿಕೆಗೆ ಹೆಚ್ಚು ಗ್ಯಾಸ್ ಖರ್ಚಾಗುವ ಕಾರಣಕ್ಕೆ ಕೆಲ ಹೋಟೆಲ್‌ಗಳಲ್ಲಿ ಚೈನೀಸ್ ತಿನಿಸುಗಳು, ಜೋಳದ ರೊಟ್ಟಿ,

**ಗೃಹಬಳಕೆ ಸಿಲಿಂಡರ್‌ಗಳ ಕೊರತೆ ಉಂಟಾಗುತ್ತಿಲ್ಲ. ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆ ಕಡಿಮೆ ಇದೆ. ಹೋಟೆಲ್ ಇತರ ವಾಣಿಜ್ಯ ಉದ್ದಿಮೆಗಳಿಗೆ ಪೂರೈಕೆಯಲ್ಲಿ ಕಡಿವಾಣ ಹಾಕಲು ಸೂಚನೆ ಬಂದಿದೆ.**
**-ಸುನೀಲ ಸೋನಿ ಗ್ಯಾಸ್ ಏಜೆನ್ಸಿ ಮಾಲೀಕ**


ಉದಯವಾಹಿನಿ ಚಿತ್ರ

ಚಪಾತಿ ಸೇರಿ ಹಲವು ತಿನಿಸುಗಳ ತಯಾರಿಕೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ವಾಣಿಜ್ಯ ಸಿಲಿಂಡರ್‌ಗಳ ದರ 1,800ರಿಂದ 1,950ಕ್ಕೆ ಏರಿಕೆ ಆಯಿತು. ಈಗ ಕೇಳಿದರೂ ಪೂರೈಕೆ ಮಾಡುತ್ತಿಲ್ಲ. ರೂ.2400 ನೀಡಿ ಸಿಲಿಂಡರ್ ಪಡೆಯುವ ಸ್ಥಿತಿಯೂ ಉಂಟಾಗಿದೆ ಎಂದು ರೆಸ್ಟೋರೆಂಟ್‌ವೊಂದರ ಮಾಲೀಕರೊಬ್ಬರು ತಿಳಿಸಿದರು.

ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಈ ಮೊದಲು ಬೇಡಿಕೆ ಇಟ್ಟಷ್ಟು ಪೂರೈಸಲಾಗುತ್ತಿತ್ತು. ಕಳೆದ ಎರಡು ದಿನಗಳಿಂದ ಪೂರೈಕೆಯಲ್ಲಿ ಕೊರತೆ ಉಂಟಾಗಿದೆ. ನಾಲ್ಕೈದು ಸಿಲಿಂಡರ್ ಬೇಡಿಕೆ ಇಟ್ಟರೆ ಕೇವಲ ಒಂದು ಸಿಲಿಂಡರ್ ಮಾತ್ರ ಸಿಗುತ್ತಿದೆ. ಇರುವ ಸಿಲಿಂಡರ್‌ಗಳನ್ನು ಬಳಸಿ ಅಡುಗೆ ಸಿದ್ಧಪಡಿಸುವ ಒತ್ತಡಕ್ಕೆ ಸಿಲುಕಿದ್ದೇವೆ ಎಂದು ಹೋಟೆಲ್ ಮಾಲೀಕ ನಾಗರಾಜ ಶೇಟ್ ಹೇಳಿದರು. ದಿನವೊಂದಕ್ಕೆ ಒಂದು ಸಿಲಿಂಡರ್ ಖರ್ಚಾಗುತ್ತಿದೆ. ಆದರೆ, ನಿತ್ಯ ಸಿಲಿಂಡರ್ ಪೂರೈಸಲು ಆಗದು ಎಂದು ಗ್ಯಾಸ್ ಏಜೆನ್ಸಿಯವರು ಹೇಳುತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಒಂದೆರಡು ದಿನಗಳಲ್ಲಿ ಹೋಟೆಲ್ ಸ್ಥಗಿತಗೊಳಿಸಬೇಕಾಗುತ್ತದೆ ಎಂದು ಹೋಟೆಲ್ ಉದ್ಯಮಿ ಶ್ಯಾಮ್ ಮೇತ್ರಿ ದೂರಿದರು.

ಸಾಲು ಸಾಲು ಮದುವೆ, ಶುಭ ಸಮಾರಂಭಗಳಿಗೆ ಊಟ, ಉಪಹಾರ ಸಿದ್ಧಪಡಿಸುವ ಗುತ್ತಿಗೆ ಪಡೆದಿದ್ದೇವೆ. ವಾಣಿಜ್ಯ ಬಳಕೆ ಸಿಲಿಂಡರ್ ಸಿಗದ್ದರಿಂದ ಪಡೆದ ಗುತ್ತಿಗೆ ರದ್ದುಪಡಿಸುವ ಯೋಚನೆಯಲ್ಲಿದ್ದೇವೆ. ಕಾರ್ಯಕ್ರಮ ಆಯೋಜಿಸುತ್ತಿರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕ್ಯಾಟರಿಂಗ್ ಉದ್ಯಮಿ ಸುನೀಲ ರಾಯ್ಕರ್ ಹೇಳಿದರು.

**ಸಿಲಿಂಡರ್ ಕಾಯ್ದಿರಿಸಲು ತರಾತುರಿ**
**ಗೃಹಬಳಕೆ ಸಿಲಿಂಡರ್ ಕೊರತೆ ಇಲ್ಲ ಎಂದು ಗ್ಯಾಸ್ ಏಜೆನ್ಸಿಗಳು ಹೇಳುತ್ತಿದ್ದರೂ ಸಿಲಿಂಡರ್ ಮುಂಗಡ ಕಾಯ್ದಿರಿಸಲು ಜನರು ಪೈಪೋಟಿಯಲ್ಲಿ ತೊಡಗಿದ್ದಾರೆ. ಆದರೆ ಕಾಯ್ದಿರಿಸಿದ 24 ದಿನಗಳ ಬಳಿಕ ಸಿಲಿಂಡರ್ ಪೂರೈಸಲು ಏಜೆನ್ಸಿಗಳಿಗೆ ಸೂಚನೆ ಬಂದಿದೆ. ಇದು ಜನರನ್ನು ಆತಂಕಕ್ಕೆ ತಳ್ಳಿದೆ. ಗೃಹಬಳಕೆ ಸಿಲಿಂಡರ್‌ಗಳನ್ನು ದುಪ್ಪಟ್ಟು ದರಕ್ಕೆ ಖರೀದಿಸಿ ಬಳಕೆ ಮಾಡಲು ಕೆಲ ಹೋಟೆಲ್‌ಗಳು ಮುಂದಾಗುವ ಸಾಧ್ಯತೆ ಇದೆ. ಹೀಗಾಗಿ ಸಿಲಿಂಡರ್ ಪೂರೈಕೆ ಕಟ್ಟುನಿಟ್ಟುಗೊಳಿಸಲಾಗುತ್ತಿದೆ ಎಂದು ಗ್ಯಾಸ್ ಏಜೆನ್ಸಿ ಮಾಲೀಕರೊಬ್ಬರು ತಿಳಿಸಿದರು.**

**ಸಿಲಿಂಡರ್ ಸಿಗದ್ದರಿಂದ ಪಡೆದ ಗುತ್ತಿಗೆ ರದ್ದು**

## ಮಿನಿ ನ್ಯೂಸ್

### ಕ್ರೀಡೆಯಿಂದ ಆರೋಗ್ಯ ಭವಿಷ್ಯ ನಿರ್ಮಾಣ

• ಉದಯವಾಹಿನಿ ಬಾಗಲಕೋಟೆ

ಕೊಕ್ಕೊ ಕ್ರೀಡೆಯಾಗಿರದೇ ಜೀವನ ಶೈಲಿಯಾಗಿದ್ದು, ಇದರಲ್ಲಿ ತೊಡಗಿಸಿಕೊಳ್ಳುವುದರಿಂದ ಆರೋಗ್ಯದ ಜೊತೆಗೆ ಭವಿಷ್ಯ ರೂಪಿಸಿಕೊಳ್ಳಲು ಸಹಾಯಕ ಎಂದು ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆ ಉಪಾಧ್ಯಕ್ಷ ಜಗದೀಶ ಚಿತ್ತರಗಿ ಹೇಳಿದರು. ಬಾಗಲಕೋಟೆ ವಿಶ್ವವಿದ್ಯಾಲಯ ಹಾಗೂ ಬಿವಿವಿ ಸಂಘದ ಬಸವೇಶ್ವರ ಕಲಾ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡ ಏಕವಲಯ ಮಹಿಳೆಯರ ಕೊಕ್ಕೊ ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ತಂಡದ ಆಯ್ಕೆ ಪ್ರಕ್ರಿಯೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಕ್ರೀಡೆಯಾಗಿದ್ದ ಕೊಕ್ಕೊ ಇದೀಗ ಅಂತರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದರು. ಈ ಆಟದಿಂದ ಏಕಾಗ್ರತೆ, ದೈಹಿಕ ಸಾಮರ್ಥ್ಯ ಮತ್ತು ಸಹಿಷ್ಣುತೆ ಹೆಚ್ಚಿಸಿಕೊಳ್ಳಲು ಸಹಾಯಕವಾಗಿದೆ. ಕ್ರೀಡೆಯಲ್ಲಿ ಹವ್ಯಾಸಕ್ಕಾಗಿ ತೊಡಗಿಕೊಳ್ಳದೇ ವೃತ್ತಿಪರವಾಗಿ ಮೈಗೂಡಿಸಿಕೊಳ್ಳಬೇಕು. ಇದರಿಂದ ಶೈಕ್ಷಣಿಕವಾಗಿಯೂ ಗುರಿ ತಲುಪಲು ಸಾಧ್ಯ. ವ್ಯವಸ್ಥಿತ ಯೋಜನೆ ಮಾಡುವುದರಿಂದ ಕ್ರೀಡೆ ಮತ್ತು ಕಲಿಕೆ ಎರಡನ್ನೂ ನಿಭಾಯಿಸಲು ಸಾಧ್ಯ ಎಂದು ಹೇಳಿದರು.

### ಮೆಕ್ಕೆಜೋಳ ರಾಶಿಗೆ ಬೆಂಕಿ: ಅಪಾರ ನಷ್ಟ

• ಉದಯವಾಹಿನಿ ಸಂಡೂರು

ತಾಲ್ಲೂಕಿನ ದೌಲತ್‌ಪುರ ಗ್ರಾಮದ ಹೊರವಲಯದಲ್ಲಿ ಮೆಕ್ಕೆಜೋಳ ತೆನೆಯ ರಾಶಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಲಕ್ಷಾಂತರ ನಷ್ಟವಾಗಿರುವ ಘಟನೆ ಜರುಗಿದೆ. ದೌಲತ್‌ಪುರ ಗ್ರಾಮದ ರೈತರದ ಜಯಮ್ಮ, ಲಕ್ಷ್ಮೀದೇವಿ, ನೀಲಮ್ಮ, ರಮೀಜಾ ಬೀ, ಬಾಷಾ ಅವರಿಗೆ ಸೇರಿದ ಒಟ್ಟು 27 ಟ್ರ್ಯಾಕ್ಟರ್ ನಷ್ಟು ಮೆಕ್ಕೆಜೋಳ ತೆನೆಯ ರಾಶಿಯಾಗಿದ್ದು, ರೈತರು ಕಟಾವು ಮಾಡಿದ ಮೆಕ್ಕೆಜೋಳ ತೆನೆಯನ್ನು ರಾಶಿ ಮಾಡಿ ಒಣಗಲು ಹಾಕಿದ್ದರು. ಬಿಸಿಲಿಗೆ ಒಣಗಿದ ಮೆಕ್ಕೆಜೋಳ ತೆನೆಯನ್ನು ಜಿನ್ನಿಗೆ ಹಾಕಬೇಕು ಎನ್ನುವಷ್ಟರಲ್ಲಿ ಆಕಸ್ಮಿಕವಾಗಿ ಬೆಂಕಿತಾಗಿ ಈ ಅವಘಡ ಸಂಭವಿಸಿದೆ. ಅಂದಾಜು ರೂ.10 ಲಕ್ಷಕ್ಕೂ ಅಧಿಕ ಮೌಲ್ಯದ 27 ಟ್ರ್ಯಾಕ್ಟರ್ ನಷ್ಟು ಮೆಕ್ಕೆಜೋಳದ ತೆನೆ, 5 ಟ್ರ್ಯಾಕ್ಟರ್‌ನಷ್ಟು ಮೆಕ್ಕೆಜೋಳ ಸೊಪ್ಪೆ ನಷ್ಟವಾಗಿದ್ದು, ಗ್ರಾಮದ ಬಡ ರೈತರು ಹೆಚ್ಚಿನ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಘಟನಾ ಸ್ಥಳಕ್ಕೆ ಸಂಡೂರಿನ ಅಗ್ನಿಶಾಮಕ ಠಾಣೆಯ ಅಧಿಕಾರಿಗಳು ಆಗಮಿಸಿ ಮೆಕ್ಕೆಜೋಳ ತೆನೆಯ ರಾಶಿಗೆ ಬಿದ್ದ ಬೆಂಕಿಯನ್ನು ನಂದಿಸಿದ್ದಾರೆ.

### ಮಹಿಳೆ ಪುರುಷರಷ್ಟೇ ಸರಿಸಮಾನ: ನಿವೃತ್ತ ಪ್ರಾಧ್ಯಾಪಕಿ ಪಿ.ವಿ.ಹಳಕಟ್ಟಿ

• ಉದಯವಾಹಿನಿ ವಿಜಯಪುರ

ಮಹಿಳೆ ಮನೆಯ ದೇವತೆಯಾಗಿ, ತ್ಯಾಗಮಯಿಯಾಗಿ ಕುಟುಂಬದಲ್ಲಿ ಮೈಮರೆಯುತ್ತಾಳೆ. ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆಯ ಪಾತ್ರ ಅನನ್ಯವಾದದ್ದು, ಮಹಿಳೆಯರು ಆಕಾಶದಲ್ಲಿರುವ ತಾರೆಯಾಗಿ ಬೆಳಗುತ್ತಾರೆ. ಮಹಿಳೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪುರುಷರಷ್ಟೇ ಸರಿಸಮಾನವಾಗಿ ಸಾಧನೆಗೈದಿದ್ದಾರೆ ಎಂದು ಬಿ.ಎಲ್.ಡಿ.ಇ ಸಂಸ್ಥೆ ನಿವೃತ್ತ ಪ್ರಾಧ್ಯಾಪಕಿ ಪಿ.ವಿ.ಹಳಕಟ್ಟಿ ಹೇಳಿದರು. ನಗರದ ಚಾಣಕ್ಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಪ್ರಾಚಾರ್ಯರಾದ ಡಾ. ಎಸ್.ಟಿ. ಮೇರವಾಡೆ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಸಮಾಜಕ್ಕೆ ಮಾದರಿಯಾಗಿ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಸಾಧನೆಯನ್ನು ಬೆಳಗುತ್ತಿರುವುದು ಹೆಮ್ಮೆಯ ವಿಚಾರ ಎಂದರು. ಪ್ರೊ. ಪಿ.ಆರ್. ಡೋಣೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಚಿನ ಬಾಬಳೆ, ಲಕ್ಕಪ್ಪ ಚಾಳಕ್ಕನವರ, ಜಕರಾಯ ಪೂಜಾರಿ, ಪ್ರೊ. ಬಿ.ಎ. ಕುಲಕರ್ಣಿ ಇದ್ದರು.

### ಭೂಸ್ವಾಧೀನ ಅಗತ್ಯ ಪರಿಹಾರ ನೀಡಲು ಸೂಚನೆ

• ಉದಯವಾಹಿನಿ ಹಾಸನ

ಇಲ್ಲಿನ ಹಾಸನ ವಿಮಾನ ನಿಲ್ದಾಣಕ್ಕೆ ಭೂಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಪರಿಹಾರ ಬಿಡುಗಡೆಗೆ ಅಗತ್ಯ ಕ್ರಮ ವಹಿಸಲಾಗುವುದು. ಅಗತ್ಯವಿರುವ ಸ್ಥಳಗಳಿಗೆ ಮೊದಲ ಆದ್ಯತೆ ನೀಡಿ, ಪರಿಹಾರ ಬಿಡುಗಡೆ ಮಾಡಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ಹಣಕಾಸು ಇಲಾಖೆಯ ಹಣಕಾಸು ಸುಧಾರಣೆಯ ಕಾರ್ಯದರ್ಶಿ ಡಾ. ವಿಶಾಲ್ ಆರ್. ತಿಳಿಸಿದರು. ಬೂವನಹಳ್ಳಿ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿದ ಅವರು, ನಂತರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ವಿಮಾನ ನಿಲ್ದಾಣ ಕಾಮಗಾರಿಗೆ ಅಡಚಣೆ ಆಗಿರುವ ಸಮಸ್ಯೆಗಳನ್ನು ಆಲಿಸಿ, ಸಲಹೆ ಸೂಚನೆ ನೀಡಿದರು.

ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ ನಿರ್ಮಾಣ, ಸರ್ವಿಸ್ ರಸ್ತೆಗಳ ನಿರ್ಮಾಣ, ರೈತರ ಸಮಸ್ಯೆಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿಮಾನ ನಿಲ್ದಾಣಕ್ಕೆ ನೀರಿನ ಸಂಪರ್ಕ ಕಲ್ಪಿಸುವ ಕುರಿತು ಹಾಗೂ ಇನ್ನಿತರ ವಿಷಯಗಳ ಸಂಬಂಧಿಸಿದಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸರ್ವಿಸ್ ರಸ್ತೆ ನಿರ್ಮಾಣದ ಕುರಿತು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್ ಚೌಧರಿ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್, ಅಧಿಕಾರಿಗಳು ಉಪಸ್ಥಿತರಿದ್ದರು.

### ವಾಂತಿ-ಭೇದಿಯಿಂದ ಮಹಿಳೆ ಸಾವು, ಹಲವರು ಅಸ್ವಸ್ಥ; ಕಾಲರಾ ಶಂಕೆ

• ಉದಯವಾಹಿನಿ ಶಿವಮೊಗ್ಗ

ಸಾಗರ ತಾಲ್ಲೂಕಿನ ಕಾರ್ಗಲ್ ಹಾಗೂ ಸುತ್ತಲಿನ ಹಳ್ಳಿಗಳಲ್ಲಿ 150 ಕ್ಕೂ ಹೆಚ್ಚು ಜನರು ವಾಂತಿ-ಬೇಧಿಯಿಂದ ಬಳಲುತ್ತಿದ್ದು, ಗುರುವಾರ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಆರೋಗ್ಯ ಇಲಾಖೆ ಅಧಿಕಾರಿಗಳು ಕಾಲರಾ ಶಂಕೆ ವ್ಯಕ್ತಪಡಿಸಿದ್ದಾರೆ. ಕಾರ್ಗಲ್, ಜೋಗ, ಲಿಂಗನಮಕ್ಕಿ, ಅರಳಗೋಡು, ಹೆನ್ನಿ, ಇಡುವಾಣಿ ಗ್ರಾಮಗಳಲ್ಲಿ ಕಳೆದ ನಾಲ್ಕೈದು ದಿನಗಳಿಂದ ನಿವಾಸಿಗಳಲ್ಲಿ ಹೊಟ್ಟೆನೋವು, ವಾಂತಿ, ಬೇಧಿ, ತಲೆನೋವು, ಜ್ವರ ಕಾಣಿಸಿಕೊಂಡಿತ್ತು. ವಾಂತಿ-ಬೇಧಿಯಿಂದ ಅಸ್ವಸ್ಥಗೊಂಡಿದ್ದ ಕಾರ್ಗಲ್‌ನ ಸರ್ಕಾರಿ ಶಾಲೆಯ 15ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಚಿಕಿತ್ಸೆಗೆ ಕೆಪಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

**ಮಹಿಳೆ ಸಾವು;** ಕಾರ್ಗಲ್ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ರಾಜು ಅವರ ತಾಯಿ ಜಯಲಕ್ಷ್ಮಿ (55) ಜ್ವರ, ವಾಂತಿ, ಭೇದಿಯಿಂದ ಅಸ್ವಸ್ಥಗೊಂಡಿದ್ದು, ಅವರನ್ನು ಸಾಗರದ ವಿಭಾಗೀಯ ಆಸ್ಪತ್ರೆಗೆ ದಾಖಲಿಸಿದ್ದು, ಹೆಚ್ಚಿನ ಚಿಕಿತ್ಸೆಗೆ ಗುರುವಾರ ಬೆಳಿಗ್ಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆತರಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವಿಗೀಡಾಗಿದ್ದಾರೆ ಎಂದು ತಿಳಿದುಬಂದಿದೆ. ಶರಾವತಿ ಕೊಳ್ಳದ ನಿವಾಸಿಗಳು ಬಿಸಿನೀರನ್ನು ತಣಿಸಿ ಕುಡಿಯಬೇಕು, ಜಾತ್ರೆ ಸೇರಿದಂತೆ ಬೇರೆ ಬೇರೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಣ್ಣು, ಐಸ್ ಕ್ರೀಮ್, ಆಲೂಗಡ್ಡೆ ರೋಲ್, ಪಾನಿಪುರಿ, ಗೋಬಿ ಮಂಚೂರಿ, ಮುಂತಾದ ತಿನಿಸುಗಳನ್ನು ತಿನ್ನಬಾರದು ಎಂದು ಕಾರ್ಗಲ್ ಆಸ್ಪತ್ರೆಗೆ ಭೇಟಿ ನೀಡಿದ್ದ ಆರೋಗ್ಯ ಇಲಾಖೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಎಲ್.ನಾಗರಾಜ ನಾಯ್ಕ ಮನವಿ ಮಾಡಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ. ಇಂದು ಯಾರಾದರೂ ನಿಮ್ಮ ಪ್ರೀತಿಯ ನಡುವೆ ಬರಬಹುದು. ಸಹೋದ್ಯೋಗಿಗಳನ್ನು ನಿರ್ವಹಿಸುವಾಗ ಜಾಣತನದ ಅಗತ್ಯವಿದೆ. ಇಂದು ನಿಮ್ಮ ಬಿಡುವಿನ ವೇಳೆಯಲ್ಲಿ ನೀವು ಆಗಾಗ್ಗೆ ಯೋಚಿಸುವ ಕೆಲಸಗಳನ್ನು ಮಾಡುತ್ತೀರಿ.

**ವೃಷಭ** ಒಬ್ಬ ಹಳೆಯ ಸ್ನೇಹಿತರು ಸಂಜೆ ನಿಮಗೆ ಕರೆ ಮಾಡುತ್ತಾರೆ ಮತ್ತು ಹಳೆಯ ನೆನಪುಗಳನ್ನು ತೆರೆದಿಡುತ್ತಾರೆ. ಇಂದು ಪ್ರೀತಿಯಲ್ಲಿ ನಿಮ್ಮ ವಿವೇಚನಾ ಶಕ್ತಿಯನ್ನು ಬಳಸಿ. ಕೆಲಸದ ಪ್ರದೇಶದಲ್ಲಿ ಉತ್ತಮವಾಗಿ ಅನುಭವಿಸುವ ದಿನಗಳಲ್ಲಿ ಒಂದು ದಿನ ಇದು.

**ಮಿಥುನ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ. ನೀವು ಭಾವಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ.

**ಕರ್ಕಾಟಕ** ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ನಿಮ್ಮ ಮಗುವಿನಂಥ ಮತ್ತು ಮುಗ್ಧವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ.

**ಸಿಂಹ** ಏನಾದರೂ ಆಸಕ್ತಿದಾಯಕವಾದದ್ದನ್ನು ಓದುವ ಮೂಲಕ ಮಾನಸಿಕ ವ್ಯಾಯಾಮ ಮಾಡಿ. ಆಹ್ವಾನಿಸದ ಯಾವುದೇ ಅತಿಥಿ ಇಂದು ಮನೆಗೆ ಬರಬಹುದು ಆದರೆ ಈ ಅತಿಥಿಯ ಅದೃಷ್ಟದ ಕಾರಣದಿಂದ ಇಂದು ನೀವು ಆರ್ಥಿಕ ಲಾಭವನ್ನು ಪಡೆಯಬಹುದು. ನೀವು ಸಂಭ್ರಮಾಚರಣೆಯ ಮನಸ್ಥಿತಿಯಲ್ಲಿರುತ್ತೀರಿ.

**ಕನ್ಯಾ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ತುಲಾ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು , ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ನೀವು ನಿಮ್ಮ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ, ಕಾರಣದಿಂದಾಗಿ ನಿಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಬಹುದು.

**ವೃಶ್ಚಿಕ** ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದರಿಂದ ದೀರ್ಘ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಿಸಿ. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ. ಮಕ್ಕಳು ಅಧ್ಯಯನದಲ್ಲಿ ಅವರ ನಿರಾಸಕ್ತಿಯಿಂದಾಗಿ ಶಾಲೆಯಲ್ಲಿ ನಿರಾಸೆಯುಂಟುಮಾಡಬಹುದು.

**ಧನಸ್ಸು** ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮತ್ತು ರೋಗದ ವಿರುದ್ಧ ಹೋರಾಡಲು ಪ್ರೇರೇಪಿಸುವುದು ಒಳ್ಳೆಯದು. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

**ಮಕರ** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಈ ರಾಶಿಚಕ್ರದ ಕೆಲವು ಜನರಿಗೆ ಇಂದು ಮಕ್ಕಳ ಬದಿಯಿಂದ ಆರ್ಥಿಕ ಲಾಭವನ್ನು ಪಡೆಯುವ ಭರವಸೆ ಇದೆ. ಇಂದು ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ. ನಿಮ್ಮ ನಡೆಯಲ್ಲಿ ಉದಾರ ಮನೋಭಾವ ಹೊಂದಿರಿ.

**ಕುಂಭ** ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ ಹಾಗೂ ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ಹಾಗೂ ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ.

**ಮೀನ** ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲವಾಗಿಸಬಹುದು. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸಂಗಾತಿ ಮತ್ತು ಮಕ್ಕಳು ಹೆಚ್ಚುವರಿ ಪ್ರೀತಿ ಮತ್ತು ಕಾಳಜಿ ತೋರಿಸುತ್ತಾರೆ.

### • ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇವನೆ • ಗುಟ್ಕಾ ಉಗಿದರೆ ರೂ. 1000 ದಂಡ

# ಪ್ಲಾಸ್ಟಿಕ್, ಪತ್ರಿಕೆಯಲ್ಲಿ ಹೋಟೆಲ್ ಬಿಸಿ ಆಹಾರ ಪಾರ್ಸೆಲ್ ನಿಷೇಧಕ್ಕೆ ಸೂಚನೆ

• ಉದಯವಾಹಿನಿ ಮಂಗಳೂರು

ಹೋಟೆಲ್, ಕ್ಯಾಂಟೀನ್, ಕೆಫೆಗಳಲ್ಲಿ ಪ್ಲಾಸ್ಟಿಕ್ ಕವರ್, ಪತ್ರಿಕೆಗಳಲ್ಲಿ ಬಿಸಿ ಆಹಾರ ಪದಾರ್ಥಗಳನ್ನು ಪಾರ್ಸೆಲ್ ಮಾಡುವುದನ್ನು ನಿಷೇಧಿಸಲು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ರಾಜು ಕೆ ಸೂಚಿಸಿದ್ದಾರೆ.



ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ಲಾಸ್ಟಿಕ್ನಲ್ಲಿರುವ ಹಾನಿಕಾರಕ ರಾಸಾಯನಿಕಗಳು ಬಿಸಿ ಆಹಾರಕ್ಕೆ ಸೇರಿ ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತಿದೆ. ಹೋಟೆಲ್, ಕ್ಯಾಂಟೀನ್ಗಳಿಂದ ಹೆಚ್ಚಾಗಿ ಕಾರ್ಮಿಕರು ಅಥವಾ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಬಿಸಿ ಆಹಾರ ಪದಾರ್ಥಗಳನ್ನು ಕೊಂಡೊಯ್ಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಕವರ್, ನ್ಯೂಸ್ ಪೇಪರ್ಗಳಲ್ಲಿ ಬಿಸಿ ಆಹಾರ ಪದಾರ್ಥಕ್ಕೆ ಪ್ಲಾಸ್ಟಿಕ್ ಬಳಕೆ ಕಡ್ಡಾಯವಾಗಿ ನಿಷೇಧಿಸಲು ಸೂಕ್ತ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು.



ಉದಯವಾಹಿನಿ ಚಿತ್ರ

**ಕೋಟ್ಪಾ ಕಾರ್ಯಾಚರಣೆಯಲ್ಲಿ ಒಟ್ಟು 2,587 ಪ್ರಕರಣ ದಾಖಲು**

**ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇವಿಸಿದವರಿಗೆ ಮತ್ತು ಗುಟ್ಕಾ ಜಗಿದು ಉಗಿಯುವವರಿಗೆ 1000 ರೂ. ವರೆಗೆ ದಂಡ ವಿಧಿಸಲಾಗುತ್ತದೆ. ಅಂಗಡಿಗಳಲ್ಲಿ ಚಿಲ್ಲರೆ ಸಿಗರೇಟ್ ಮಾರಾಟ ಮಾಡಲು ಅವಕಾಶವಿಲ್ಲ. ಇದನ್ನು ಉಲ್ಲಂಘಿಸಿದ ಅಂಗಡಿಗಳಿಗೂ ದಂಡ ವಿಧಿಸಲಾಗುವುದು. ಕೋಟ್ಪಾ ಕಾರ್ಯಾಚರಣೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 2,587 ಪ್ರಕರಣ ದಾಖಲಾಗಿದ್ದು, ರೂ 3.89 ಲಕ್ಷ ರೂ. ದಂಡ ಸಂಗ್ರಹಿಸಲಾಗಿದೆ. ತಂಬಾಕಿಗೆ ಸಂಬಂಧಿಸಿದಂತೆ ಸುಮಾರು 52 ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗಿದೆ. ತಂಬಾಕು ಉತ್ಪನ್ನ ಪ್ಯಾಕ್ನಲ್ಲಿ ಆರೋಗ್ಯ ಎಚ್ಚರಿಕೆಯ ಚಿತ್ರಗಳು ಶೇ.85 ಕ್ಕಿಂತ ಕಡಿಮೆ ಅಳತೆಯಲ್ಲಿದ್ದರೆ ಮತ್ತು ಹಳೆಯದಾದ ಎಚ್ಚರಿಕೆಯ ಚಿತ್ರಗಳನ್ನು ಹಾಕಿದರೆ ದಂಡ ವಿಧಿಸಲಾಗುತ್ತದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.**

**ಶಾಲಾ ಕಾಲೇಜುಗಳಲ್ಲಿ 100 ಮೀಟರ್ ಅಂತರದೊಳಗೆ ತಂಬಾಕು ಮಾರಾಟ ನಿಷೇಧ ಬೋರ್ಡ್ ಕಡ್ಡಾಯವಾಗಿ ಹಾಕಬೇಕು ಮತ್ತು ತಂಬಾಕು ಉತ್ಪನ್ನಗಳನ್ನು ಬಳಸದಂತೆ ಸೂಕ್ತ ಕ್ರಮ ವಹಿಸಬೇಕು. ಜಿಲ್ಲೆಯಲ್ಲಿ ತಂಬಾಕಿಗೆ ಸಂಬಂಧಿಸಿದಂತೆ ಜಾಹೀರಾತು ಫಲಕಗಳು ಕಂಡು ಬಂದಿದ್ದು, ತಂಬಾಕು ನಿಯಂತ್ರಣ ಕಾಯ್ದೆ ಪ್ರಕಾರ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು. ತಂಬಾಕಿನ ಅಪಾಯಕ್ಕೆ ಸಿಲುಕುವ ರಿಕ್ಷಾ ಚಾಲಕರು, ಕಟ್ಟಡ ಕಾರ್ಮಿಕರು, ಪೌರ ಕಾರ್ಮಿಕರು ಇರುವ ಸ್ಥಳಕ್ಕೆ ಹೋಗಿ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಬೇಕು -ಅಪರ ಜಿಲ್ಲಾಧಿಕಾರಿ**

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್, ತಂಬಾಕು ಸೇವನೆ ನಿಷೇಧ, ಎಚ್ಚರಿಕೆಯ ಫಲಕ ಇಲ್ಲದೆ ಇರುವುದು, ಅಂಗಡಿ, ಹೋಟೆಲ್ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸಿಗರ್ ಲೈಟರ್, ಬೆಂಕಿ ಪೊಟ್ಟಣಗಳನ್ನು ಇಟ್ಟರೆ ಅವರಿಗೆ ದಂಡ ವಿಧಿಸಬೇಕು. ತಂಬಾಕು ಬ್ರಾಂಡ್ ಹೆಸರಿನೊಂದಿಗೆ ಜಾಹಿರಾತು ಫಲಕಗಳು ಅಥವಾ ಯಾವುದೇ ರೀತಿಯಲ್ಲಿ ತಂಬಾಕು ಉತ್ಪನ್ನಗಳ ಪ್ರಚಾರ, 21 ವರ್ಷದೊಳಗಿನವರಿಗೆ ತಂಬಾಕು ಮಾರಾಟ ಮಾಡಿದರೆ, ಚಿಲ್ಲರೆ ಅಂಗಡಿಗಳಲ್ಲಿ ಸಿಗರೇಟ್, ತಂಬಾಕು ಉತ್ಪನ್ನಗಳ ಪ್ರದರ್ಶನ ಮಾಡಿದರೆ ದಂಡ ವಿಧಿಸಲು ಅಪರ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶಾಲಾ ಕಾಲೇಜುಗಳ 100 ಮೀಟರ್ ಅಂತರದೊಳಗೆ ತಂಬಾಕು ಮಾರಾಟ ಮಾಡುವವರ ಬಗ್ಗೆ ಶಾಲಾ-ಕಾಲೇಜುಗಳ ಮುಖ್ಯಸ್ಥರು ನಿಗಾವಹಿಸಬೇಕು. ಅಂತಹ ಅಂಗಡಿಗಳ ಪಟ್ಟಿಯನ್ನು ತಮ್ಮ ವ್ಯಾಪ್ತಿಯಲ್ಲಿರುವ ಸ್ಥಳಿಯಾಡಳಿತಕ್ಕೆ ಮತ್ತು ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಸಲ್ಲಿಸಬೇಕು. ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆ, ಸ್ಥಳೀಯಾಡಳಿತ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಜಿಲ್ಲೆಯಲ್ಲಿ ತಂಬಾಕು ಮಾರಾಟ ಮತ್ತು ಸೇವನೆಯನ್ನು ನಿಯಂತ್ರಿಸಬಹುದು ಎಂದು ರಾಜು ಕೆ. ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಮ್ಮಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನವೀನ್ಚಂದ್ರ ಕುಲಾಲ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸುಜಯ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಹಿಳೆಗೆ ಅಸಾಧ್ಯ ಯಾವುದೂ ಇಲ್ಲ

• ಉದಯವಾಹಿನಿ ಬೀದರ್

ಮನಸ್ಸು ಮಾಡಿದರೆ ಮಹಿಳೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂದು ಸಾಹಿತಿ ಡಾ. ರೇಣುಕಾ ಎಂ. ಸ್ವಾಮಿ ಅಭಿಪ್ರಾಯಪಟ್ಟರು. ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ನಗರದ ಅಲ್ಲಮಪ್ರಭು ನಗರದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯ ಸಾಮರ್ಥ್ಯಕ್ಕೆ ಸಾಟಿ ಇಲ್ಲ. ಆಕೆ ಉತ್ತುಂಗದ ಸಾಧನೆ ಮಾಡಬಹುದು. ತನ್ನ ಮಕ್ಕಳನ್ನು ದೇಶದ ಅತ್ಯುನ್ನತ ಸ್ಥಾನಕ್ಕೂ ಏರಿಸಬಹುದು ಎಂದು ತಿಳಿಸಿದರು.

ಪ್ರೀತಿ, ವಿಶ್ವಾಸ, ತಾಳ್ಮೆ ಹಾಗೂ ಹೊಂದಾಣಿಕೆ ಸುಖಿ ಕುಟುಂಬದ ಸೂತ್ರಗಳಾಗಿವೆ ಎಂದು ಹೇಳಿದರು. ಡಾ. ಶೈಲಜಾ ಮಾತನಾಡಿ, ಇಡೀ ಕುಟುಂಬದ ಜವಾಬ್ದಾರಿ ಹೊತ್ತುಕೊಳ್ಳುವ ಮಹಿಳೆಯರು ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು ಎಂದು ಸಲಹೆ ಮಾಡಿದರು. ಬೀದರ್ ಅಕ್ಕ ಪಡೆಯ ಮುಖ್ಯಸ್ಥೆ ಸಂಗೀತಾ ಮಾತನಾಡಿ, ಮಹಿಳೆಯರು ಏನೇ ಸಮಸ್ಯೆಗಳಿದ್ದರೂ ಅಕ್ಕ ಪಡೆಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಶಿಕ್ಷಕಿ ಈಶ್ವರಮ್ಮ ಪಾಟೀಲ ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಎಸ್ಎಸ್ಎಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಿ, ಪ್ರೋತ್ಸಾಹಿಸಲಾಯಿತು. ಚಂದ್ರಕಲಾ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಎಚ್.ಆರ್. ಮಲ್ಲಮ್ಮ, ಸಂಘದ ಪದಾಧಿಕಾರಿಗಳು, ಸದಸ್ಯರು ಇದ್ದರು. ಸುಧಾರಾಣಿ ಬಿರಾದಾರ ನಿರೂಪಿಸಿದರು. ವೈಷ್ಣವಿ ಬಿರಾದಾರ ಸ್ವಾಗತಿಸಿದರು. ಆರಾಧ್ಯ ಪಾಟೀಲ ವಂದಿಸಿದರು.

## ಬಾಲ್ಯ ವಿವಾಹ ಸಾಮಾಜಿಕ ಶಾಪ ತಡೆಗಟ್ಟಲು ನೈತಿಕ ಜಾಗೃತಿ ಅಗತ್ಯ

• ಉದಯವಾಹಿನಿ ಯಲಬುರ್ಗಾ

ಮಕ್ಕಳ ಹಕ್ಕುಗಳ ರಕ್ಷಣೆ ಕೇವಲ ಇಲಾಖೆಗಳ ಜವಾಬ್ದಾರಿ ಅಲ್ಲ. ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಹೇಳಿದರು. ಪಟ್ಟಣದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ತಾಲ್ಲೂಕು ಆಡಳಿತ ತಾಪಂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಪೋಕೋ ಕಾಯ್ದೆ ಮಕ್ಕಳ ಸುರಕ್ಷತೆ ಬಗ್ಗೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಾಲ್ಯ ವಿವಾಹವು ಸಮಾಜಕ್ಕೆ ಅಂಟಿದ ದೊಡ್ಡ ಶಾಪವಾಗಿದೆ. ಇದನ್ನು ಕೇವಲ ಕಾನೂನಿನ ಮೂಲಕ ಮಾತ್ರವಲ್ಲದೆ, ಪೋಷಕರು ಮತ್ತು ಶಿಕ್ಷಕರಲ್ಲಿ ನೈತಿಕ ಜಾಗೃತಿ ಮೂಡಿಸುವ ಮೂಲಕ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯ ಎಂದರು. ತಾಲ್ಲೂಕಿನ ಕೆಲ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಗರ್ಭಿಣಿಯರಾದ ಪ್ರಕರಣಗಳನ್ನು ಮಕ್ಕಳ ರಕ್ಷಣೆ ನಮ್ಮೆಲರ ಹೊಣೆಯಾಗಿದ್ದು ಇಂತಹ ಪ್ರಕರಣಗಳು ಮುಂದೆ ನಡೆಯದಂತೆ ಹೆಚ್ಚು ಗಮನಹರಿಸಬೇಕಿದೆ.ಬಾಲ್ಯ ವಿವಾಹ ಮಾಡಿದ ಪ್ರಕರಣಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷನಿಗೆ ಶಿಕ್ಷೆ ಆಗಿದ್ದು ರಾಜ್ಯದಲ್ಲೇ ಯಲಬುರ್ಗಾ ತಾಲ್ಲೂಕು ಪ್ರಥಮ ಆಗಿದೆ ಮಕ್ಕಳ ರಕ್ಷಣಾ ನೀತಿ ಅನುಷ್ಠಾನಕ್ಕೆ ತಾಲೂಕು ಆಡಳಿತದ ಎಲ್ಲಾ ಅಧಿಕಾರಿಗಳು ಆಯೋಗಕ್ಕೆ ಹೆಚ್ಚು ಸಹಕಾರ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

**ಪಿಡಿಒ ಹಾಗೂ ಶಿಕ್ಷಕರಿಗೆ ಕಾರ್ಯಾಗಾರ ಮೂಲಕ ಜಾಗೃತಿ**

ಈಗಾಗಲೇ ಬಾಲ್ಯ ವಿವಾಹ ಹಾಗೂ ಪೋಕ್ಸೋ ಪ್ರಕರಣಗಳ ತಡೆಗೆ ಮಕ್ಕಳ ರಕ್ಷಣೆ ಕಾಯ್ದೆಗಳ ಕುರಿತು ಗ್ರಾಪಂ ಪಿಡಿಒ ಹಾಗೂ ಶಿಕ್ಷಕರಿಗೆ ಕಾರ್ಯಾಗಾರ ಮೂಲಕ ಗ್ರಾಮದಲ್ಲಿ ಜಾಗೃತಿ ಮೂಡಿಸಿದರೂ ಬಾಲ್ಯ ವಿವಾಹ ಕಂಡು ಬರುತ್ತಿದೆ. ತಾಲ್ಲೂಕಿನಲ್ಲಿ ಹಾಗೂ ಬೇರೆ ಬೇರೆ ಜಿಲ್ಲೆಯಲ್ಲಿ ಬಾಲಗರ್ಭಿಣಿಯರ ಪ್ರಕರಣಗಳು ಕಂಡು ಬಂದಿರುವುದು ವಿಷಾದಕರ ಸಂಗತಿಯಾಗಿದೆ. ಎಲ್ಲರೂ ಮಕ್ಕಳ ರಕ್ಷಣೆ ಕಾಯ್ದೆಗಳ ಬಗ್ಗೆ ಪಾಲಕರಿಗೆ ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ಮಕ್ಕಳ ಭಿಕ್ಷಾಟನೆ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಕ್ಕಳ ಸಹಾಯವಾಣಿ (1098) ಸಹಾಯವಾಣಿಗೆ ಕರೆ ಮಾಡಿ ಮಕ್ಕಳ ದೌರ್ಜನ್ಯಕ್ಕೊಳಗಾದಾಗ ನಿಮಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮುಕ್ತವಾಗಿ ಹಂಚಿಕೊಂಡು ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಬಾಲ್ಯ ವಿವಾಹ ನಿಷೇಧ, ಬಿಕ್ಷಾಟನೆ ಹಾಗೂ ಬಾಲಕಾರ್ಮಿಕ ನಿಷೇಧ ಕಾಯ್ದೆಗಳ ಕುರಿತು 1098 ಸಹಾಯವಾಣಿಯ ಜಾಗೃತಿ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧೂ ಅಂಗಡಿ ಹಾಗೂ ತಾಲ್ಲೂಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದೇಶ್ ಮಾಳೆಕೊಪ್ಪ ಬಾಲ್ಯ ವಿವಾಹ ಹಾಗೂ ಮಕ್ಕಳ ಕಾನೂನು ಬಗ್ಗೆ ಈ ತರಬೇತಿ ಶಿಬಿರದಲ್ಲಿ ಹೆಚ್ಚಿನ ಮಾಹಿತಿಯನ್ನು ಅಂಗನವಾಡಿ, ಆಶಾಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ತಾಲ್ಲೂಕ ಆರೋಗ್ಯ ಅಧಿಕಾರಿ ಡಾ. ನೇತ್ರ ಹಿರೇಮಠ, ಉಪ ತಹಶೀಲ್ದಾರ್ ಮುರುಳಿರಾವ್, ಪಪಂ ನಿರೀಕ್ಷಕ ವನರಾಜ ಸೇರಿದಂತೆ ತಾಲ್ಲೂಕಿನ ಎಲ್ಲಾ ವಲಯದ ಅಂಗನವಾಡಿ ಮೇಲ್ವಿಚಾರಕರು. ಮತ್ತು ಅಂಗನವಾಡಿ ಕಾರ್ಯಕರ್ತೆಯರು. ಆಶಾ ಕಾರ್ಯಕರ್ತೆಯರು ಇನ್ನು ಇತರ ಹಲವಾರು ಉಪಸ್ಥಿತರು ಇದ್ದರು.

## ಖಾತಾ ನಕಲು ವಿತರಣೆ ವಿಳಂಬ ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ ವಾಡಿ

ಆಸ್ತಿಗೆ ಸಂಬಂಧ ಪಟ್ಟ ಖಾತ ನಕಲು, ಮುಟೇಶನ ದಾಖಲೆಗಳು ಸಕಾಲದಲ್ಲಿ ನೀಡಲಾಗುತ್ತಿಲ್ಲ,ಹಣ ಪಡೆದು ಪುರಸಭೆ ಅಧಿಕಾರಿಗಳು ದಾಖಲೆಗಳು ನೀಡಲು ವರ್ಷಾನುಗಟ್ಟಲೆ ಅಲೇದಾಡಿಸುತ್ತಿದ್ದಾರೆ ಎಂದು ಆರೋಪಿಸಿ ಸಾರ್ವಜನಿಕರು ತಹಶೀಲ್ದಾರ ಎದಿರು ತಮ್ಮ ಅಳಲು ತೋಡಿಕೊಂಡರು.

ಪುರಸಭೆ ಕಚೇರಿಗೆ ಭೇಟಿನೀಡಿದ್ದ ಚಿತ್ತಾಪುರ ತಹಶೀಲ್ದಾರ ನಾಗಯ್ಯ ಹಿರೇಮಠ ಅವರಿಗೆ ಸಾರ್ವಜನಿಕರು ಮುತ್ತಿಗೆ ಹಾಕಿ ಪುರಸಭೆ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಧಾನ ವ್ಯಕ್ತಪಡಿಸಿದ್ದು. ಖಾತಾ ನಕಲು, ಮುಟೇಶನ್ ಮಾಡಿಕೋಡಲು ವರ್ಷಾನುಗಟ್ಟಲೆ ಅಲೆದಾಡಿಸುತ್ತಾರೆ. ದಾಖಲೆಗಳನ್ನು ನೀಡಲು ಸಾರ್ವಜನಿಕರಿಂದ ಬೇಕಾಬಿಟ್ಟಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ರಾಜು ನಾಯಕ್. ಪರ್ವೀನ್ ಸುಳೆ. ರಮೇಶ್ ಜಾಧವ್. ರಾಜೇಶ್ ಕಾಂಬಳೆ. ಗಣೇಶ್ ಜಾದವ್. ಅಲ್ತಾಫ್. ಹಣಮಂತ ಮೈತ್ರಿ ಆರೋಪಿಸಿದ್ದರು.



ವಾಡಿ ಪುರಸಭೆ ಕಚೇರಿಯಲ್ಲಿ ಖಾತ ನಕಲು ನೀಡುವಲ್ಲಿ ವಿಳಂಬವಾಗುತ್ತಿದೆ ಎಂದು ತಿಳಿದುಬಂದಿದೆ, ಒಂದು ವಾರದಲ್ಲಿ ಸಮಸ್ಯೆ ಬಗೆಹರಿಸುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಆದೇಶಿಸಲಾಗಿದೆ.

## ಮಕ್ಕಳ ಉಜ್ವಲ ಭವಿಷ್ಯಕ್ಕೆ ಎಲ್‌ಕೆಜಿ, ಯುಕೆಜಿ ಶಿಕ್ಷಣವೇ ಅಡಿಪಾಯ



ಉದಯವಾಹಿನಿ ಚಿತ್ರ

• ಉದಯವಾಹಿನಿ ಸೇಡಂ

ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವು ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತದೆ. ಎಲ್‌ಕೆಜಿ ಮತ್ತು ಯುಕೆಜಿ ಹಂತಗಳು ಕೇವಲ ಅಕ್ಷರ ಕಲಿಯುವ ಸಮಯವಲ್ಲ, ಬದಲಿಗೆ ಅವು ಮಗುವಿನ ಉಜ್ವಲ ಭವಿಷ್ಯಕ್ಕೆ ಪ್ರೇರಣೆಯ ತಾಣಗಳಾಗಿವೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಶ್ರೀಮತಿ ಅನುರಾಧ ಪಾಟೀಲ್ ಅವರು ಅಭಿಪ್ರಾಯಪಟ್ಟರು.ಪಟ್ಟಣದಲ್ಲಿರುವ ಆಶ್ರಯ ಕಾಲೋನಿ ಅಂಗನವಾಡಿ ಕೇಂದ್ರ-02ರಲ್ಲಿ ನೂತನ ಎಲ್‌ಕೆಜಿ ಮತ್ತು ಯುಕೆಜಿಗೆ ದೀಪ ಬೆಳಗಿಸುವ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದರು.

ಈ ವೇಳೆಯಲ್ಲಿ ಹಿರಿಯ ಮೇಲ್ವಿಚಾರಕರಾದ ಸರಿತಾ ಕುಲಕರ್ಣಿ ಮೀನಾಕ್ಷಿ ಪಾಟೀಲ್ ಮಹಾನಂದ ಶಾಲೆಯ ಮುಖ್ಯ ಗುರುಗಳಾದ ಕೇಶವ್ ರೆಡ್ಡಿ,ಬಸವರಾಜ್ ನಾಚವಾರ,ಆಫೀಯ ಬೇಗಂ, ಹಾಗೂ ಮಕ್ಕಳ ತಾಯಂದಿರು ಮಕ್ಕಳು ಇದ್ದರು.

## ಹೆಣ್ಣು ಮನುಕುಲದ ಕಣ್ಣಾಗಿ ಗೆಲ್ಲುತಿಹರು: ಪ್ರತಿಮಾ ಹಾಸನ್

• ಉದಯವಾಹಿನಿ ಹಾಸನ

12:03:2026 ಹಾಸನದ ಸತ್ಯಮಂಗಲ ಅರಳಿಕಟ್ಟೆ ರೋಡ್ನಲ್ಲಿ ಇರುವ ಗೀತಾ ಶ್ರೀ ಫ್ಯಾಷನ್ ಸ್ಟುಡಿಯೋದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ)ಕರ್ನಾಟಕ ದ ವತಿಯಿಂದ ಆಚರಿಸಲಾಯಿತು. ಟ್ರಸ್ಟ್ ನ ವತಿಯಿಂದ ಸಂಸ್ಥಾಪಕ ಅಧ್ಯಕ್ಷರು ಆದ ಹೆಚ್. ಎಸ್. ಪ್ರತಿಮಾ ಹಾಸನ್ ರವರು ಗೀತಾ ಶ್ರೀ ಫ್ಯಾಷನ್ ಸ್ಟುಡಿಯೋದ ಮಾಲೀಕರದಂತಹ ಗೀತಾ ರವರನ್ನು ಸನ್ಮಾನಿಸಿ ಗೌರವಿಸಿದರು . ಹೆಣ್ಣು ಮನುಕುಲದ ಕಣ್ಣಾಗಿ ಜಗದಲ್ಲಿ ಶ್ರಮಿಸುತ್ತ ಜೀವನದಲ್ಲಿ ಸಾತ್ವಿಕ ಹಠ, ಛಲದಲ್ಲಿ ಬೆಳೆಯುತ್ತಿದ್ದಾರೆ. ಎಂಬುದನ್ನು ಅರಿತು ಕೊಳ್ಳಬೇಕಿದೆ.

ಪ್ರಸ್ತುತ ಉದಾರಣೆ ಎಂದರೆ ಟೈಲರಿಂಗ್ ತರಬೇತಿಯನ್ನು ಹಲವಾರು ಹೆಣ್ಣುಮಕ್ಕಳಿಗೆ ನೀಡುತ್ತಾ ನೂರಾರು ಹೆಣ್ಣು ಮಕ್ಕಳು ತರಬೇತಿಗಳನ್ನು ಪೂರೈಸಿ ಹೋಗಿರುವ ಈ ಗೀತಾ ಫ್ಯಾಶನ್ ಸ್ಟುಡಿಯೋನಲ್ಲಿ ಗೀತಾ ರವರ ಶ್ರಮ ಕಾಣುತ್ತದೆ. ಟೈಲರಿಂಗ್ ಹಾಗೂ ಎಂಬ್ರೈಡರಿ ಹೇಳಿಕೊಡುತ್ತಾ ಹತ್ತು ವರ್ಷವನ್ನು ಪೂರೈಸಿರುವ ಇವರ ಶ್ರಮ ಬಹಳವಾಗಿದೆ. ಹಾಗೆಯೇ 2025 ರಿಂದ ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ಸಾರಥ್ಯದೊಂದಿಗೆ ಗೀತಾ ಫ್ಯಾಶನ್ ಸ್ಟುಡಿಯೋವು ಮಹಿಳೆಯರಿಗೆ ಟೈಲರಿಂಗ್ ಹಾಗೂ ಎಂಬ್ರಾಯ್ಡರಿ ತರಬೇತಿಗಳನ್ನು ನೀಡಿ ಯಶಸ್ವಿಯಾಗಿದ್ದು ಮುಂದೆಯೂ ಹೀಗೆ ಕಾರ್ಯನಿರ್ವಹಿಸಿಕೊಂಡು ಹೋಗಲೆಂದು ಆಶಿಸುತ್ತ ಗೀತಾರವರನ್ನು ಟ್ರಸ್ಟ್ ನ ವತಿಯಿಂದ ಗೌರವಿಸಿ ಸನ್ಮಾನಿಸಲಾಗಿದೆ ಎಂದು ಟ್ರಸ್ಟ್ ನ ಸಂಸ್ಥಾಪಕ ಅಧ್ಯಕ್ಷರು ಹೆಚ್. ಎಸ್. ಪ್ರತಿಮಾ ಹಾಸನ್ ಹೇಳಿದರು



ಉದಯವಾಹಿನಿ ಚಿತ್ರ

**ಹೆಣ್ಣು ಮನುಕುಲದ ಕಣ್ಣು**

ನಂತರ ಮಹಿಳೆಯರು ಆರ್ಥಿಕವಾಗಿ ಎಷ್ಟೇ ಪ್ರಬಲರಾಗಿದ್ದರು ಸಹ ತನ್ನ ಆರ್ಥಿಕ ಅಸ್ತಿತ್ವವನ್ನು ತನ್ನ ದುಡಿಮೆಯಿಂದಲೇ ಪ್ರಬಲಗೊಳಿಸಬೇಕೆಂದು, ಗೀತಾ ರವರು ಹೀಗೆ ಕಾರ್ಯಗಳನ್ನು ಮಹಿಳೆಯರಿಗೆ ಹೆಚ್ಚೆಚ್ಚು ಸ್ವಾವಲಂಬಿ ಜೀವನಕ್ಕೆ ಸಹಕಾರಿಯಾಗಿ ತರಬೇತಿಗಳನ್ನು ನೀಡಲೆಂದು ಆಶಿಸುತ್ತೇನೆ ಎಂದು ಮಾನಸ ವಕೀಲರು ತಿಳಿಸಿದರು.

ನಂತರ ಮಾತನಾಡುತ್ತಾ ನನ್ನನ್ನು ಗುರುತಿಸಿ ಸನ್ಮಾನಿಸಿದ ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟಿಗೆ ಧನ್ಯವಾದಗಳು ತಿಳಿಸುತ್ತೇನೆ ಎಂದು ಸನ್ಮಾನಿತರದ ಗೀತಾ ರವರು ತಿಳಿಸಿದರು. ತರಬೇತಿ ಪಡೆದ ಕೆಲವರಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಂತ ರುಕ್ಮಿಣಿ, ಹೇಮಾ, ಇನ್ನು ಹಲವರು ಉಪತರಿದ್ದರು.

## ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿ

• ಉದಯವಾಹಿನಿ ವಿಜಯಪುರ

ಒತ್ತಡದ ಬದುಕಿನಲ್ಲಿ ನಿಮಗಾಗಿ ಸಮಯ ಕೊಡಿ. ನಿಮ್ಮ ಸಂಘದಿಂದ ಪ್ರತಿ ತಿಂಗಳಿನ ಒಂದು ದಿನ ಕಾರ್ಯಾಗಾರ ಆಯೋಜಿಸಿ ನಿಮ್ಮ ಮಕ್ಕಳನ್ನು ಎಲ್ಲಾ ದೃಷ್ಟಿಯಿಂದ ಸಂಸ್ಕಾರವಂತರನ್ನಾಗಿ ಮಾಡಿ ಎಂದು ಕರ್ನಾಟಕ ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘ (ರಿ) ರಾಜ್ಯಾಧ್ಯಕ್ಷೆ ಲತಾ ಬಿರಾದಾರ ಅವರು ಹೇಳಿದರು. ನಗರದ ಸಾಯಿ ರೆಸಿಡೆನ್ಸಿಯಲ್ಲಿ ಶ್ರೀ ಮಹಾಲಕ್ಷ್ಮಿ ಸ್ವಸಹಾಯ ಸಂಘ ಹಾಗೂ ಶ್ರೀ ಸರಸ್ವತಿ ಸ್ವಸಹಾಯ ಸಂಘಗಳ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ಉಪನ್ಯಾಸಕರಾಗಿ ಕವಿತಾ ಕಲ್ಲಾಣಪ್ಪಗೋಳ ಆಗಮಿಸಿದ್ದರು. ಅವಳಿ ಸಂಘಗಳ ಅಧ್ಯಕ್ಷೆ ಲಕ್ಷ್ಮಿ ಜಮಖಂಡಿ, ಆಶಾ ಒಡೆಯರ ಅಧ್ಯಕ್ಷತೆ ವಹಿಸಿದ್ದರು. ಶಮಿತಾ ಶೆಟ್ಟಿ ಅವರು ಅತಿಥಿಗಳಾಗಿ ಆಗಮಿಸಿದ್ದರು. ಮಂಜುಳಾ ಸಾರವಾಡ ನಿರೂಪಿಸಿದರು.

## ಮೇವಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಈಗಾಗಲೇ ಬೇಸಿಗೆ ಪ್ರಾರಂಭವಾಗಿದ್ದು ಕೊಳವೆಭಾವಿಗಳು ಸ್ವಲ್ಪ ನೀರು ಕಡಿಮೆಯಾಗಿರುತ್ತವೆ. ಮಳೆಗಾಲ ಪ್ರಾರಂಭವಾಗುವುದು ದೂರವಿದ್ದು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆಯಾಗದಂತೆ ಮುಂಜಾಗ್ರತೆ ಕ್ರಮವಹಿಸಬೇಕೆಂದು ಶಾಸಕ ಬಾಬಾಸಾಹೇಬ ಪಾಟೀಲ ಅಧಿಕಾರಿಗಳಿಗೆ ಖಡಕ್ಕಾಗಿ ಎಚ್ಚರಿಕೆ ನೀಡಿದರು.

ಸ್ಥಳೀಯ ತಾ.ಪಂ ಯಲ್ಲಿ ಮತ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಿಗೆ ಬೇಸಿಗೆ ಸಮಯದಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮವಹಿಸಲು ಏರ್ಪಡಿಸಿದ್ದ ಸಭೆಯಲ್ಲಿ ಅಧ್ಯಕ್ಷಸ್ಥಾನ ವಹಿಸಿ ಮಾತನಾಡಿ ಗ್ರಾಮಗಳಲ್ಲಿ ನೀರು ವ್ಯರ್ಥವಾಗಿ ಹರಿಯದಂತೆ ವಾಟರ್‌ಮನ್‌ಗಳ ಜವಾಬ್ದಾರಿಯಾಗಿದ್ದು ಸಾರ್ವಜನಿಕರಿಗೆ ಈ ಕುರಿತು ಜಾಗೃತಿ ಮೂಡಿಸಿ ನೀರು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು. ಅಧಿಕಾರಿಗಳು ಕುಡಿಯುವ ನೀರಿನ ಮತ್ತು ಮೇವಿನ ವ್ಯವಸ್ಥೆ ನೋಡಿಕೊಳ್ಳಬೇಕು. ನೀರಿನ ಲಭ್ಯತೆ ಬಗ್ಗೆ ನಿಖರ ಮಾಹಿತಿ ನೀಡಬೇಕು. ನೀರು ಮತ್ತು ಮೇವಿನ ಅಭಾವ ಇರುವ ಕಡೆಗಳಲ್ಲಿ ಬೋರವೆಲ್‌ಗಳಿಂದ ನೀರು ಪಡೆದು ಟ್ಯಾಂಕರ್ ಮೂಲಕ ಸಾರ್ವಜನಿಕರಿಗೆ, ಜಾನುವಾರುಗಳಿಗೆ ಮೇವು ಸಹ ಕೊರತೆಯಾಗದಂತೆ ಕ್ರಮಕ್ಕೈಗೊಳ್ಳಬೇಕೆಂದರು. ಸಭೆಯಲ್ಲಿ ಅಥಿತಿಗಳಾಗಿ ಇಓ ನಿಂಗಪ್ಪ ಮಸಳಿ, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಸ್ಮಿತಾ ಚಂದರಗಿ, ಮಂಜುನಾಥ ಕುಠಾಳೆ, ಸುಬಾಸ್ ದಾನಪ್ಪನವರ, ರಾಧಾ, ಈಶ್ವರ ಹಡಪದ, ಅಧಿಕಾರಿಗಳಿದ್ದರು.

## ಜಾತಿ ನಿಂದನೆ: ಆರೋಪಿಗೆ ಶಿಕ್ಷೆ, ದಂಡ

• ಉದಯವಾಹಿನಿ ಹಾವೇರಿ

ಕ್ಷುಲ್ಲಕ ಕಾರಣಕ್ಕೆ ಜಗಳ ಮಾಡಿಕೊಂಡು ಜಾತಿ ನಿಂದನೆ ಮಾಡಿ. ಮಿಠಾಯಿ ಅಂಗಡಿ ಸುಟ್ಟು ಹಾಕಿದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಹಾನಗಲ್ಲ ತಾಲ್ಲೂಕಿನ ಹೊಂಕಣ ಗ್ರಾಮದ ಆರೋಪಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ ರೂ.35 ಸಾವಿರ ದಂಡ ವಿಧಿಸಿ ನ್ಯಾಯಾಧೀಶ ಎನ್.ಎಂ.ರಮೇಶ ತೀರ್ಪು ನೀಡಿದ್ದಾರೆ. ಹಾನಗಲ್ಲ ತಾಲ್ಲೂಕು ಹೊಂಕಣ ಗ್ರಾಮದ ಶಿವಕುಮಾರ ಶಿವಬಸಪ್ಪ ದಳವಾಯಿ ಅಪರಾಧಿ. ಇದೇ ಗ್ರಾಮದ ಕೃಷ್ಣಪ್ಪ ಅಂಗಡಿ ಮನೆಯ ಪಕ್ಕದಲ್ಲಿ ಮಿಠಾಯಿ ಅಂಗಡಿ ನಡೆಸುತ್ತಿದ್ದರು. ಅಂಗಡಿ ಸಾಮಾನು ಸಾಗಿಸುತ್ತಿದ್ದ ವಾಹನ ಚಾಲಕ ಶಿವಕುಮಾರ ಜೊತೆಗೆ ಕ್ಷುಲ್ಲಕ ಕಾರಣಕ್ಕೆ ಜಗಳವಾಗಿತ್ತು. ಶಿವಕುಮಾರ ಕೃಷ್ಣಪ್ಪನಿಗೆ ಸಾರ್ವಜನಿಕ ಸ್ಥಳದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜಾತಿ ನಿಂದನೆ ಮಾಡಿ, ಜೀವ ಬೆದರಿಕೆ ಹಾಕಿದ್ದಲ್ಲದೇ, ಮಿಠಾಯಿ ಅಂಗಡಿಗೆ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದ. ಅಂಗಡಿಯಲ್ಲಿದ್ದ ಸುಮಾರು ರೂ. 15 ಸಾವಿರ ಮೌಲ್ಯದ ಸಾಮಗ್ರಿ ಸುಟ್ಟು ಹೋಗಿತ್ತು. ಸರ್ಕಾರಿ ಅಭಿಯೋಜಕಿ (ಪಿಪಿ) ಸರೋಜಾ ಕೂಡಲಗಿಮಠ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

# ಡಿಜಿಟಲ್ ಜನಗಣತಿ ಕಾರ್ಯ: ನಿಖರ ಮಾಹಿತಿ ದಾಖಲಿಸಿ

### • ತರಬೇತಿ ಕಾರ್ಯಾಗಾರದಲ್ಲಿ ಉಪವಿಭಾಗಾಧಿಕಾರಿ ಕೆ.ಜೆ. ಕಾಂತರಾಜ್ ಸೂಚನೆ

• ಉದಯವಾಹಿನಿ ಚಿತ್ರದುರ್ಗ

ದೇಶದ ಅಭಿವೃದ್ಧಿ ದೃಷ್ಟಿಯಿಂದ ಜನಗಣತಿ ಅತ್ಯಂತ ಮಹತ್ವದ್ದಾಗಿದ್ದು, ಈ ಬಾರಿ ತಂತ್ರಾಂಶದ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತಿರುವುದರಿಂದ ಕ್ಷೇತ್ರಮಟ್ಟದ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಉಪವಿಭಾಗಾಧಿಕಾರಿ ಕೆ.ಜೆ.ಕಾಂತರಾಜ್ ತಿಳಿಸಿದರು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಭಾರತದ ಜನಗಣತಿ-2027ರ ಸಂಬಂಧ ಕ್ಷೇತ್ರಮಟ್ಟದ ತರಬೇತುದಾರರಿಗಾಗಿ ಆಯೋಜಿಸಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷೇತ್ರಮಟ್ಟದ ತರಬೇತುದಾರರು ಗಣತಿದಾರಿಗೆ ಸರಿಯಾದ ರೀತಿಯಲ್ಲಿ ತರಬೇತಿ ನೀಡಿದರೆ ಜನಗಣತಿ ಕಾರ್ಯ ಯಶಸ್ವಿಯಾಗಲಿದೆ ಎಂದು ತಿಳಿಸಿದ ಅವರು, ಈ ಹಿಂದೆ ಮ್ಯಾನುಯಲ್ ಆಗಿ ಜನಗಣತಿ ಮಾಡಲಾಗುತ್ತಿತ್ತು, ಆದರೆ ಈ ಬಾರಿ ಹೊಸದಾಗಿ ಆಪ್ ಮೂಲಕ ಡಿಜಿಟಲ್ ರೂಪದಲ್ಲಿ ಮಾಹಿತಿ ದಾಖಲಿಸಲಾಗುತ್ತಿದೆ. ಇದರಿಂದ ಮಾಹಿತಿಯಲ್ಲಿನ ತಪ್ಪುಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಸಾರ್ವಜನಿಕರು ತಾವಾಗಿಯೇ ಮಾಹಿತಿ ದಾಖಲಿಸಲು ಸ್ವಯಂ ಗಣತಿ ಆಯ್ಕೆ ನೀಡಲಾಗಿದ್ದು, ಗಣತಿದಾರರು ಇದರ ಬಗ್ಗೆ ಅರಿವು ಮೂಡಿಸಬೇಕು. ಈ ಹಿಂದೆ ನಡೆದ ಸಾಮಾಜಿಕ ಮತ್ತು ಆರ್ಥಿಕ ಗಣತಿಯಲ್ಲಿ ಆದ ಲೋಪದೋಷಗಳು ಈ ಬಾರಿ ಮರುಕಳಿಸಬಾರದು. ಗಣತಿದಾರರು ಕಡ್ಡಾಯವಾಗಿ ಮನೆ ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ಪಡೆಯಬೇಕು ಎಂದು ನಿರ್ದೇಶನ ನೀಡಿದರು.



ಉದಯವಾಹಿನಿ ಚಿತ್ರ

**ತಂತ್ರಾಂಶದ ಮೂಲಕ ಮಾಹಿತಿ ಸಂಗ್ರಹ**

ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಸಿ.ಎಸ್.ಗಾಯತ್ರಿ ಮಾತನಾಡಿ, ಭಾರತದ 16ನೇ ಜನಗಣತಿಯು ಈ ಬಾರಿ ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯುತ್ತಿದ್ದು, ಇದು ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಅರಿತು ಉತ್ತಮ ಜನಪರ ಯೋಜನೆಗಳನ್ನು ರೂಪಿಸಲು ಭದ್ರ ಬುನಾದಿಯಾಗಲಿದೆ ಎಂದು ತಿಳಿಸಿದರು. ಭಾರತದಲ್ಲಿ 1872ರಿಂದ ಪ್ರತಿ 10 ವರ್ಷಕ್ಕೊಮ್ಮೆ ಜನಗಣತಿ ನಡೆಸಲಾಗುತ್ತಿದ್ದು, 2021ರಲ್ಲಿ ನಡೆಯಬೇಕಿದ್ದ 16ನೇ ಜನಗಣತಿಯು ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ವಿಳಂಬವಾಗಿತ್ತು. ಈ ಬಾರಿಯ ಗಣತಿಯು ಡಿಜಿಟಲ್ ಆಗಿರುವುದರಿಂದ ಮಾಹಿತಿ ಸಂಗ್ರಹಣೆ ಪ್ರಕ್ರಿಯೆಯು ಈ ಹಿಂದೆಗಿಂತಲೂ ಸರಳ ಮತ್ತು ವ್ಯವಸ್ಥಿತವಾಗಿರಲಿದೆ ಎಂದು ಹೇಳಿದರು.

ಏಪ್ರಿಲ್ 1 ರಿಂದ 15 ರವರೆಗೆ ಸ್ವಯಂ ಗಣತಿ ಪ್ರಕ್ರಿಯೆ ನಡೆಯಲಿದ್ದು, ಏಪ್ರಿಲ್ 15 ರಿಂದ ಮೇ 15 ರವರೆಗೆ ಮನೆಗಳ ಪಟ್ಟಿ ತಯಾರಿಕೆ ಕಾರ್ಯ ನಡೆಯಲಿದೆ. ತದನಂತರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಜನಸಂಖ್ಯೆ ಗಣತಿ ಕಾರ್ಯ ನಡೆಯಲಿದ್ದು, ಈ ಸಂಪೂರ್ಣ ಪ್ರಕ್ರಿಯೆಯು ಹಂತ ಹಂತವಾಗಿ 2027ರವರೆಗೆ ಮುಂದುವರಿಯಲಿದೆ ಎಂದು ವಿವರಿಸಿದರು. ಗಣತಿದಾರರು ಮತ್ತು ಮೇಲ್ವಿಚಾರಕರು ಒಟ್ಟು 33 ಪ್ರಶ್ನೆಗಳಿರುವ ಪ್ರಶ್ನಾವಳಿಯನ್ನು ಬಳಸಲಿದ್ದು, ಸಾರ್ವಜನಿಕರಿಂದ ನಿಖರ ಮಾಹಿತಿ ಪಡೆಯಲು ಈ ತರಬೇತಿಯನ್ನು ಗಂಭೀರವಾಗಿ ಪಡೆಯಬೇಕು ಎಂದು ಸೂಚಿಸಿದರು.

**ಭಾರತದಲ್ಲಿ 1872ರಲ್ಲಿ ಮೊದಲ ಜನಗಣತಿ ಆರಂಭವಾಯಿತು. ಸ್ವಾತಂತ್ರ್ಯಾನಂತರ 1951 ರಿಂದ ಪ್ರತಿ 10 ವರ್ಷಕ್ಕೊಮ್ಮೆ ನಡೆಸಲಾಗುತ್ತಿದ್ದು, ಇದು ಸ್ವಾತಂತ್ರ್ಯದ ನಂತರದ 8ನೇ ಜನಗಣತಿಯಾಗಿದೆ. 2021ರಲ್ಲಿ ನಡೆಯಬೇಕಿದ್ದ ಪ್ರಕ್ರಿಯೆಯು ಕೋವಿಡ್ ಕಾರಣದಿಂದ ವಿಳಂಬವಾಗಿ ಈಗ ನಡೆಯುತ್ತಿದೆ. ಜನಗಣತಿಯಲ್ಲಿ ಸಂಗ್ರಹವಾಗುವ ಆರ್ಥಿಕ, ಸಾಮಾಜಿಕ ಹಾಗೂ ಕೌಟುಂಬಿಕ, ಶೈಕ್ಷಣಿಕ ಸ್ಥಿತಿಗತಿಗಳ ಮಾಹಿತಿಯು ಸರ್ಕಾರಕ್ಕೆ ಮುಂದಿನ ಯೋಜನೆ ಹಾಗೂ ನೀತಿಗಳನ್ನು ರೂಪಿಸಲು ದಿಕ್ಸೂಚಿಯಾಗಲಿದೆ -ಕೆ.ಜೆ. ಕಾಂತರಾಜ್**

ಕಾರ್ಯಾಗಾರದಲ್ಲಿ ಚುನಾವಣಾ ತಹಶೀಲ್ದಾರ್ ಬೀಬಿ ಫಾತಿಮಾ, ಶಿರಸ್ತೆದಾರ್ ಮಲ್ಲಿಕಾರ್ಜುನ ನಾಯಕ, ಮಾಸ್ಟರ್ ಟ್ರೈನರ್‌ಗಳಾದ ರಾಮಚಂದ್ರಪ್ಪ, ರೇವಣ್ಣ ಹಾಗೂ ಕ್ಷೇತ್ರಮಟ್ಟದ ತರಬೇತುದಾರರು ಇದ್ದರು.

# ‘ಸೇಫ್‌ಸೀ ವಿಷ್ಣು’ ತೈಲ ಟ್ಯಾಂಕರ್ ಮೇಲೆ ಇರಾನ್ ದಾಳಿ: ಒಬ್ಬ ಭಾರತೀಯನ ಸಾವು



**ನ್ಯೂಯಾರ್ಕ್:** ಇರಾಕ್ ಬಳಿ ಸ್ಫೋಟಕಗಳನ್ನು ತುಂಬಿದ ದೋಣಿಯನ್ನು ಅಮೆರಿಕದ ಮಾಲೀಕತ್ವ ಹೊಂದಿರುವ ತೈಲ ಟ್ಯಾಂಕರ್‌ಗೆ ಡಿಕ್ಕಿ ಹೊಡೆಸಿದ ಘಟನೆಯಲ್ಲಿ ಭಾರತೀಯ ಮೂಲದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಬುಧವಾರ ಇರಾಕ್‌ನ ಖೋರ್ ಅಲ್ ಜುಬೈರ್ ಬಂದರಿನ ಬಳಿ ಅಮೆರಿಕ ಒಡೆತನದ ಮತ್ತು ಮಾರ್ಷಲ್ ಐಲ್ಯಾಂಡ್ ಧ್ವಜ ಹೊಂದಿರುವ ‘ಸೇಫ್‌ಸೀ ವಿಷ್ಣು’ ತೈಲ ಟ್ಯಾಂಕರ್ ಮೇಲೆ ಇರಾನ್ ‘ಆತ್ಮಾಹುತಿ’ ದಾಳಿ ನಡೆಸಿದೆ. ಘಟನೆಯಲ್ಲಿ ಒಬ್ಬ ಭಾರತೀಯ ಪ್ರಜೆ ಮೃತಪಟ್ಟಿದ್ದು, ಇತರೆ 27 ಸಿಬ್ಬಂದಿಯನ್ನು ರಕ್ಷಿಸಿ ಬಸ್ರಾಕ್ಕೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ. ಸದ್ಯ ಮೃತನ ಹೆಸರನ್ನು ಗೋಪ್ಯವಾಗಿಡಲಾಗಿದೆ. 228.6 ಮೀಟರ್ ಉದ್ದ, 32.57 ಮೀಟರ್ ಅಗಲವಿರುವ ‘ಸೇಫ್‌ಸೀ ವಿಷ್ಣು’ 2007ರಲ್ಲಿ ನಿರ್ಮಿಸಲಾದ ಕಚ್ಚಾ ತೈಲ ಟ್ಯಾಂಕರ್ ಆಗಿದ್ದು, ಪ್ರಸ್ತುತ ಮಾರ್ಷಲ್ ಐಲ್ಯಾಂಡ್ ಧ್ವಜದ ಅಡಿಯಲ್ಲಿ ಸಂಚರಿಸುತ್ತಿದೆ.

**ದಾಳಿ ಖಂಡಿಸಿದ ಕಂಪನಿ:** ಈ ಘಟನೆಯಿಂದ ಆಘಾತಕ್ಕೊಳಗಾಗಿರುವುದಾಗಿ ‘ಸೇಫ್‌ಸೀ’ ಕಂಪನಿಯ ಆಪ್ತ ಮೂಲಗಳು ತಿಳಿಸಿವೆ. ‘ಭಾರತ ಸರ್ಕಾರವು ಈ ದಾಳಿಯನ್ನು ಖಂಡಿಸಬೇಕು ಮತ್ತು ಈ ಪ್ರದೇಶದಲ್ಲಿ ಸಾಗುವ ಹಡಗುಗಳಲ್ಲಿರುವ ಸಿಬ್ಬಂದಿಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತುರ್ತು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದೆ.

**ಅಪಾಯದಲ್ಲಿ ಭಾರತೀಯರು:** ವರದಿಯೊಂದರ ಪ್ರಕಾರ, ಜಾಗತಿಕ ಮಟ್ಟದಲ್ಲಿ ಸಮುದ್ರಯಾನದಲ್ಲಿ ಭಾರತೀಯರ ಪಾಲು ಶೇ 15ರಷ್ಟಿದೆ. ಇರಾನ್ ಅಥವಾ ಅಮೆರಿಕ ಯಾವುದೇ ಹಡಗನ್ನು ಗುರಿಯಾಗಿಸಿಕೊಂಡರೂ, ಭಾರತೀಯರಿಗೆ ಅದರಿಂದ ತೊಂದರೆ ತಪ್ಪಿದ್ದಲ್ಲ ಎಂದು ಹೇಳಿದೆ.

# ಇರಾನ್‌ನ ಟೆಹ್ರಾನ್ ಸೇರಿ ಹಲವು ನಗರಗಳಲ್ಲಿ ಕಪ್ಪು ಮಳೆ

## ದಶಕಗಳ ಕಾಲ ಕಾಡುವ ಭೀಕರ ಪರಿಸರ ನಾಶಕ್ಕೆ ನಾಂದಿ ಹಾಡಿದೆ ಎಂದು ತಜ್ಞರು ಎಚ್ಚರಿಕೆ

**ಟೆಹ್ರಾನ್:** ಇರಾನ್‌ನ ತೈಲ ದಾಸ್ತಾನು ಕೇಂದ್ರಗಳು ಮತ್ತು ಸಂಸ್ಕರಣಾಗಾರಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಯ ಪರಿಣಾಮವಾಗಿ ಇರಾನ್ ರಾಜಧಾನಿ ಟೆಹ್ರಾನ್ ಸೇರಿ ಹಲವೆಡೆ ಕಪ್ಪು ಮಳೆ ಆಗುತ್ತಿದೆ. ಯುದ್ಧದಿಂದ ಅಲ್ಲಿ ಯಾವ ಮಟ್ಟಿಗೆ ಪರಿಸರ ಮಾಲಿನ್ಯ ಉಂಟಾಗಿದೆ ಎಂಬುದಕ್ಕೆ ಇದುವೇ ಸಾಕ್ಷಿ ಎನ್ನಲಾಗಿದೆ. ಅಮೆರಿಕ ಇಸ್ರೇಲ್‌ನಿಂದ ಇರಾನ್‌ನ ಮೇಲೆ ಭೀಕರ ದಾಳಿಯು ಕೇವಲ ಯುದ್ಧದ ಸಾವು – ನೋವುಗಳಿಗೆ ಸೀಮಿತವಾಗದೆ, ದಶಕಗಳ ಕಾಲ ಕಾಡುವ ಭೀಕರ ಪರಿಸರ ನಾಶಕ್ಕೆ ನಾಂದಿ ಹಾಡಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಮಾರ್ಚ್ 7 ರಂದು ಇರಾನಿನ ಪ್ರಮುಖ ತೈಲ ಸಂಸ್ಕರಣಾ ಘಟಕಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಯ ನಂತರ ಈ ಕಪ್ಪು ಮಳೆ ಸುರಿಯಿತು. ದಾಳಿಯ ಸಮಯದಲ್ಲಿ ಹಲವಾರು ತೈಲ ಡಿಪೋಗಳು ಮತ್ತು ಸಂಸ್ಕರಣಾಗಾರಗಳನ್ನು ಗುರಿಯಾಗಿಸಲಾಗಿತ್ತು. ಟೆಹ್ರಾನ್ ಸಂಸ್ಕರಣಾಗಾರವು ದಿನಕ್ಕೆ ಸುಮಾರು 225,000 ಬ್ಯಾರೆಲ್ ಕಚ್ಚಾ ತೈಲವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿತ್ತು. ಇದರ ಮೇಲಿನ ದಾಳಿಯಿಂದ ಭಾರೀ ಪ್ರಮಾಣದ ಬೆಂಕಿ, ಹೊಗೆ ಹೊರಹೊಮ್ಮಿದೆ. ಹಲವಾರು ದಿನಗಳವರೆಗೆ ಬೆಂಕಿ ಉರಿಯುತ್ತಲೇ ಇದ್ದು, ಈ ಬೆಂಕಿಯಿಂದ ಬಿಡುಗಡೆಯಾದ ಹೊಗೆಯು ಹೈಡ್ರೋಕಾರ್ಬನ್‌ಗಳು, ಸಲ್ಫರ್ ಸಂಯುಕ್ತಗಳು ಮತ್ತು ಇತರ ಮಾಲಿನ್ಯಕಾರಕಗಳನ್ನು ವಾತಾವರಣ ಸೃಷ್ಟಿಸಿವೆ. 10 ಮಿಲಿಯನ್ ನಿವಾಸಿಗಳನ್ನು



ಹೊಂದಿರುವ ಟೆಹ್ರಾನ್ ನಗರವು ದಹನ ಸೌಲಭ್ಯಗಳಿಂದ ದಟ್ಟವಾದ ಹೊಗೆಯಿಂದ ಆವೃತವಾಗಿತ್ತು. ಮಳೆಯ ನಂತರ ಕಾರುಗಳು, ಛಾವಣಿಗಳು, ಬೀದಿಗಳ ಮೇಲೆ ಜಿಗುಟಾದ, ಎಣ್ಣೆಯುಕ್ತ ಪದರ ಇತ್ತು ಎಂದು ಅಲ್ಲಿನ ನಿವಾಸಿಗಳು ಹೇಳಿದ್ದಾರೆ.

**ಏನಿದು ಕಪ್ಪು ಮಳೆ ?:** ತೈಲ ಕೇಂದ್ರಗಳು ಹೊತ್ತಿ ಉರಿಯುತ್ತಿರುವುದರಿಂದ ಹೊರಹೊಮ್ಮುತ್ತಿರುವ ಸಲ್ಫರ್ ಡೈಆಕ್ಸೈಡ್, ನೈಟ್ರೋಜನ್ ಆಕ್ಸೈಡ್, ಪಿಎಂ 2.5 ನಂತಹ ಸೂಕ್ಷ್ಮ ಕಣಗಳು ವಾತಾವರಣದ ತೇವಾಂಶದೊಂದಿಗೆ ಬೆರೆತು ಆಮ್ಲ ಮಳೆಯಾಗಿ ಭೂಮಿಗೆ ಸುರಿಯುತ್ತಿವೆ. ಈ ಮಳೆಯ ಪಿಎಚ್ ಮಟ್ಟ 5.6 ಕ್ಕಿಂತ ಕಡಿಮೆಯಿದ್ದು, ಇದು ಮಣ್ಣಿನ ಸಾರವನ್ನು ನಾಶಪಡಿಸಿ ಕಾಡುಗಳನ್ನು ಬಂಜರು ಮಾಡುತ್ತಿದೆ. 1991ರ ಕುವೈತ್ ತೈಲ ಬಾವಿಗಳ ಬೆಂಕಿಯ ದುರಂತದಂತೆ, ಇರಾನ್‌ನ ಸಾವಿರಾರು ಹೆಕ್ಟೇರ್ ಭೂಮಿ ಈಗ ಬರಡಾಗುವ ಭೀತಿಯಲ್ಲಿದೆ.

**ಸಾರ್ವಜನಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ**

ಸುಮಾರು 90 ಲಕ್ಷ ಜನಸಂಖ್ಯೆ ಹೊಂದಿರುವ ಟೆಹ್ರಾನ್ ನಗರ ಈಗಾಗಲೇ ವಾಯುಮಾಲಿನ್ಯದಿಂದ ಕಂಗಾಲಾಗಿದೆ. ಈಗಿನ ವಿಷಕಾರಿ ಹೊಗೆಯಿಂದಾಗಿ ಜನರಲ್ಲಿ ಅಸ್ತಮಾ, ಬ್ರಾಂಕೈಟಿಸ್, ಹೃದಯಾಘಾತದ ಅಪಾಯ ದುಪ್ಪಟ್ಟಾಗಲಿದೆ. ಅಷ್ಟೇ ಅಲ್ಲದೆ, ಗರ್ಭಿಣಿಯರಲ್ಲಿ ಕಡಿಮೆ ತೂಕದ ಮಕ್ಕಳ ಜನನ ಮತ್ತು ಶ್ವಾಸಕೋಶದ ಕ್ಯಾನ್ಸರ್‌ನಂತಹ ದೀರ್ಘಕಾಲದ ಕಾಯಿಲೆಗಳು ಸಾಂಕ್ರಾಮಿಕ ರೋಗದಂತೆ ಹರಡಬಹುದು ಎಂದು ವರದಿಗಳು ಹೇಳುತ್ತಿವೆ.

**ಭಾರತಕ್ಕೂ ಹರಡುವ ಸಾಧ್ಯತೆ**

**ಯುದ್ಧದಿಂದ ಪರಿಸರ ಮೇಲೆ ಭಾರೀ ಪರಿಣಾಮವು ಇಸ್ರೇಲ್‌ನ ಹಲವು ನಗರಗಳ ಮೇಲೆ ಉಂಟಾಗಿದೆ. ಇದರಿಂದಾಗಿ ಕಪ್ಪು ಮೋಡಗಳು, ಕಪ್ಪು ಮಳೆಯಾಗುತ್ತಿದೆ. ತೈಲ ಕೇಂದ್ರಗಳ ಮೇಲೆಯಿಂದ ಸಲ್ಫರ್, ನೈಟ್ರೋಜನ್ ಆಕ್ಸೈಡ್, ಪಿಎಂ 2.5 ನಂತಹ ಸೂಕ್ಷ್ಮ ಕಣಗಳು ಗಾಳಿಯ ಮೂಲಕ ಹರಡಿವೆ. ಮೋಡಗಳಲ್ಲಿ ಸೇರಿದ್ದು, ಇದರಿಂದ ಕಪ್ಪು ಮಳೆಯಾಗುತ್ತಿದೆ ಎಂದು ಅಲ್ಲಿನ ತಜ್ಞರು ಹೇಳಿದ್ದಾರೆ. ಮುಂದುವರೆದು, ಈ ಪರಿಸರ ಮಾಲಿನ್ಯವು ಗಾಳಿ ಮೂಲಕ ಭಾರತಕ್ಕೂ ಹರಡುವ ಸಾಧ್ಯತೆ ಇದೆ ಎನ್ನಲಾಗಿದೆ.**

**ಭಾರತಕ್ಕೆ ಏನಾದರೂ ಅಪಾಯ?**

**ಗಾಳಿಗೆ ಗಡಿಗಳ ಹಂಗಿಲ್ಲವಾದ್ದರಿಂದ. ಇರಾನ್‌ನಲ್ಲಿ ಉಂಟಾಗಿರುವ ಈ ವಿಷಕಾರಿ ಕಣಗಳು ಗಾಳಿಯ ಮೂಲಕ ಸಾವಿರಾರು ಕಿಲೋಮೀಟರ್ ಚಲಿಸಬಲ್ಲವು. ಪಾಕಿಸ್ತಾನದ ಬಲೂಚಿಸ್ತಾನ, ಅಫ್ಘಾನಿಸ್ತಾನ ಮತ್ತು ತುರ್ಕಮೆನಿಸ್ತಾನ್ ಮೀರಿ, ಈ ಮಾಲಿನ್ಯದ ಕಣಗಳು ಭಾರತದ ಗುಜರಾತ್, ರಾಜಸ್ಥಾನ ಮತ್ತು ಪಂಜಾಬ್ ರಾಜ್ಯಗಳಿಗೂ ತಲುಪುವ ಸಾಧ್ಯತೆಯಿದೆ. ಭಾರತವು ತನ್ನ ಗಡಿ ಭಾಗಗಳಲ್ಲಿ ತೀವ್ರ ನಿಗಾ ವಹಿಸಬೇಕು ಮತ್ತು ಮುಂಗಾರು ಪೂರ್ವದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್‌ನ ಕ್ಲಿನಿಕಲ್ ಅಸೋಸಿಯೇಟ್ ಪ್ರೊಫೆಸರ್ ಅವರು ಸಲಹೆ ನೀಡಿದ್ದಾರೆ.**

## ಮಿನಿ ನ್ಯೂಸ್

### ಮಹಾರಾಷ್ಟ್ರ ವಿಧಾನ ಭವನ ಸ್ಫೋಟಿಸುವುದಾಗಿ ಬೆದರಿಕೆ

**ಮುಂಬೈ:** ಬಜೆಟ್ ಅಧಿವೇಶನ ನಡೆಯುತ್ತಿರುವಾಗಲೇ ಮುಂಬೈನ ಮಹಾರಾಷ್ಟ್ರ ವಿಧಾನ ಭವನಕ್ಕೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ. ವಿಧಾನ ಭವನವನ್ನು ಸ್ಫೋಟಿಸುವ ಬೆದರಿಕೆ ಬಂದಿದೆ ಎನ್ನುವುದನ್ನು ಮಹಾರಾಷ್ಟ್ರ ಪೊಲೀಸರು ಖಚಿತಪಡಿಸಿದ್ದಾರೆ. ಬೆದರಿಕೆ ಮೇಲ್ ಬಂದ ತಕ್ಷಣವೇ ಆವರಣದಲ್ಲಿ ಭದ್ರತಾ ಪ್ರೋಟೋಕಾಲ್‌ಗಳನ್ನು ತಕ್ಷಣವೇ ಪ್ರಾರಂಭಿಸಲಾಯಿತು. ದಕ್ಷಿಣ ಮುಂಬೈನಲ್ಲಿರುವ ಶಾಸಕಾಂಗ ಸಂಕೀರ್ಣ ಕಟ್ಟಡದಿಂದ ನೌಕರರು, ಇತರ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು ಎಂದು ಪೊಲೀಸ್ ಅಧಿಕಾರಿ ಒಬ್ಬರು ತಿಳಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ, ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಆವರಣದ ಹೊರಗೆ ಜಮಾಯಿಸಿದ್ದರು, ಭದ್ರತಾ ಸಂಸ್ಥೆಗಳು ಅಗತ್ಯ ತಪಾಸಣೆ ನಡೆಸುತ್ತಿದ್ದವು. ಬಾಂಬ್ ಪತ್ತೆ ತಂಡಗಳು ಸ್ಥಳದಲ್ಲಿದ್ದವು ಮತ್ತು ಶೋಧ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿ ಹೇಳಿದರು.

### ಉಗ್ರರಿಗೆ ಹಣಕಾಸು ನೆರವು ಪ್ರಕರಣ ಶಬೀರ್‌ಗೆ ಜಾಮೀನು

**ನವದೆಹಲಿ:** ಉಗ್ರರಿಗೆ ಹಣಕಾಸಿನ ನೆರವು ನೀಡಿದ ಪ್ರಕರಣದಲ್ಲಿ ಬಂಧಿಸಲಾಗಿರುವ ಕಾಶ್ಮೀರದ ಪ್ರತ್ಯೇಕತಾವಾದಿ ಶಬೀರ್ ಅಹ್ಮದ್ ಶಾಗೆ ಸುಪ್ರೀಂ ಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿದೆ. ಈ ಪ್ರಕರಣದಲ್ಲಿ ಶಬೀರ್ ಅಹ್ಮದ್‌ನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 2019ರ ಜೂನ್ 4ರಂದು ಬಂಧಿಸಿತ್ತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠ, ಕೆಲ ಕಟ್ಟುನಿಟ್ಟಿನ ಷರತ್ತುಗಳೊಂದಿಗೆ ಜಾಮೀನು ನೀಡಿದ್ದು, ಈ ಕುರಿತು ವಿವರವಾದ ಆದೇಶವನ್ನು ನಂತರ ಪ್ರಕಟಿಸುವುದಾಗಿ ತಿಳಿಸಿದೆ. ಶಬೀರ್ ಅಹ್ಮದ್ ಪರವಾಗಿ ಹಿರಿಯ ವಕೀಲ ಕೊಲಿನ್ ಗೊನ್ಸಾಲ್ವಿನ್ ವಾದ ಮಂಡಿಸಿದದ್ದರು. ಎನ್‌ಐಎ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ ಪ್ರತಿವಾದ ಮಂಡಿಸಿದ್ದರು. ಶಬೀರ್ ಅಹ್ಮದ್‌ಗೆ ಜಾಮೀನು ನೀಡಿದರೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವ ಸಾಧ್ಯತೆ ಇದ್ದು, ಸಾಕ್ಷಿಗಳ ಮೇಲೆ ಪ್ರಭಾವ ಬೀರುವ, ನಾಶಪಡಿಸುವ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಅಭಿಪ್ರಾಯಪಟ್ಟು ಜಾಮೀನು ನೀಡಲು ನಿರಾಕರಿಸಿತ್ತು.

ಜಮ್ಮು, ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಚಳವಳಿ ಉತ್ತೇಜಿಸಲು ಶಬೀರ್ ಅಹ್ಮದ್ ಮಹತ್ವದ ಪಾತ್ರ ವಹಿಸಿದ್ದಾನೆ ಎಂದು ಆರೋಪಿಸಲಾಗಿದೆ. ಪ್ರತ್ಯೇಕತೆ ಬೆಂಬಲಿಸುವ ಘೋಷಣೆಗಳನ್ನು ಜನರಿಂದ ಕೂಗಿಸುವುದು, ಮೃತ ಉಗ್ರರ ಕುಟುಂಬಗಳಿಗೆ ತೆರಳಿ ಶ್ರದ್ಧಾಂಜಲಿ ಸಲ್ಲಿಸಿ ಅವರನ್ನು ಕೊಂಡಾಡುವುದು. ಹವಾಲಾ ವ್ಯವಹಾರಗಳ ಮೂಲಕ ಹಣ ಸ್ವೀಕರಿಸುವುದು, ವಿದೇಶಗಳ ಮೂಲಕ ನಿಧಿ ಸಂಗ್ರಹಿಸುವ ಆರೋಪ ಶಬೀರ್ ಅಹ್ಮದ್ ಮೇಲಿದೆ. ಈ ಹಣವನ್ನು ಶಬೀರ್ ಅಹ್ಮದ್ ರಾಷ್ಟ್ರ ವಿರೋಧಿ ಮತ್ತು ಉಗ್ರ ಚಟುವಟಿಕೆಗಳಿಗೆ ಬಳಸುತ್ತಾನೆ ಎಂದು ಎನ್‌ಐಎ ಆರೋಪ ಮಾಡಿದೆ.

### ಸಮಾಜಕ್ಕೆ ಹೆದರಿ ಮಗಳ ಅಪಹರಣದ ಸುದ್ದಿಯನ್ನೇ ಮುಚ್ಚಿಟ್ಟ ತಂದೆ




**ಭದೋಹಿ:** 16 ವರ್ಷದ ಅಪ್ರಾಪ್ತೆಯನ್ನು ಟ್ರಕ್ ಡ್ರೈವರ್ ಒಬ್ಬ ಅಪಹರಣ ಮಾಡಿದ್ದಾನೆ. ಆದರೆ, ಸಾಮಾಜಿಕ ಕಳಂಕಕ್ಕೆ ಹೆದರಿದ ಆ ಹುಡುಗಿಯ ತಂದೆಯು ಮೂರು ತಿಂಗಳ ಕಾಲ ಪೊಲೀಸ್‌ಠಾಣೆಯಲ್ಲಿ ಪ್ರಕರಣ ದಾಖಲಿಸಲು ಮುಂದಾಗದೇ ಇರುವ ಘಟನೆಯು ಉತ್ತರ ಪ್ರದೇಶದಲ್ಲಿ ನಡೆದಿದೆ. ಕಾಣೆಯಾದ ಹುಡುಗಿಯ ತಂದೆಯು ಚೌರಿ ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮವೊಂದರ ಮುಖ್ಯಸ್ಥರಾಗಿದ್ದಾರೆ. ಅವರು ತಿಂಗಳುಗಟ್ಟಲೇ ಹುಡುಕಿದ ನಂತರ, ಪ್ರಕರಣ ದಾಖಲಿಸಿದ್ದಾರೆ ಸಮಾಜಕ್ಕೆ ಹೆದರಿ ಅವರು ಇಷ್ಟು ದಿನ ಪ್ರಕರಣ ದಾಖಲಿಸಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. 2025ರ ನವೆಂಬರ್‌ನಲ್ಲಿ 26ರಂದು ಕಾಲೇಜಿಗೆ ಹೊರಟಿದ್ದ 11ನೇ ತರಗತಿಯ ವಿದ್ಯಾರ್ಥಿನಿಯು ಮನೆಗೆ ಬಾರದೇ ಇದ್ದಾಗ ಆತಂಕಕ್ಕೆ ಒಳಗಾದ ಪೋಷಕರು ಅವಳ ಬಗ್ಗೆ ವಿಚಾರಿಸಿದಾಗ, ಅಂದು ತರಗತಿಗೆ ತೆರಳದೇ ಇರುವುದು ತಿಳಿದಿದೆ. ಅನುಮಾನದ ಮೇಲೆ ಟ್ರಕ್ ಡ್ರೈವರ್ ಆಗಿ ಕೆಲಸ ಮಾಡುತ್ತಿರುವ ಜಿತೇಂದ್ರ ಕುಮಾರ್(35) ಎನ್ನುವವರ ವಿರುದ್ಧ ದೂರು ನೀಡಿದ್ದಾರೆ ಎಂದು ಹೇಳಿದ್ದಾರೆ.

ನಾವು ತನಿಖೆ ಆರಂಭಿಸಿದ್ದು, ಆರೋಪಿಯ ಮನೆಯಲ್ಲಿ ಅವನ ವಯಸ್ಸಾದ ತಾಯಿಯನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಮಗನ ಬಗ್ಗೆ ಅವರಿಗೆ ಯಾವ ಮಾಹಿತಿಯೂ ತಿಳಿದಿಲ್ಲ. ಆರೋಪಿಯು ಸಾರಿಗೆ ಕಂಪನಿಯೊಂದರಲ್ಲಿ ಟ್ರಕ್ ಡ್ರೈವರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಎನ್ನುವ ಮಾಹಿತಿಯಿದೆ. ಅಲ್ಲಿ ವಿಚಾರಣೆ ಮಾಡಿದ ಬಳಿಕ ಮತ್ತಷ್ಟು ಮಾಹಿತಿ ಲಭಿಸಲಿದೆ ಎಂದು ಪೊಲೀಸರು ಹೇಳಿದ್ದಾರೆ.

# ತೈಲ ಬಿಕ್ಕಟ್ಟು ಶಮನಕ್ಕೆ ಸಹಕಾರ ನೀಡಲು ಮುಂದಾದ ಇಂಧನ ಸಂಸ್ಥೆ

**ಪ್ಯಾರಿಸ್:** ಮಧ್ಯಪ್ರಾಚ್ಯ ಯುದ್ಧದಿಂದ ಉದ್ಭವಿಸಿರುವ ತೈಲ ಬಿಕ್ಕಟ್ಟು ಎದುರಿಸಲು ಅಂತಾರಾಷ್ಟ್ರೀಯ ಇಂಧನ ಸಂಸ್ಥೆಯ 32 ಸದಸ್ಯ ರಾಷ್ಟ್ರಗಳು ತೈಲ ಬಿಡುಗಡೆ ಮಾಡಲು ಒಪ್ಪಿಗೆ ಸೂಚಿಸಿವೆ ತುರ್ತು ಸಂದರ್ಭದಲ್ಲಿ ಬಳಕೆಗಾಗಿ ದಾಸ್ತಾನು ಮಾಡಿರುವ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಗ್ಗೆ ಈ ದೇಶಗಳ ನಡುವೆ ಒಮ್ಮತ ಮೂಡಿಲ್ಲ ಎಂದು ಎರಡು ದಿನಗಳ ಹಿಂದೆ ವರದಿಯಾಗಿತ್ತು.ಈಗ ಐಇಎ ಕರೆದ ಮಹತ್ವದ ಸಭೆಯಲ್ಲಿ ಈ ದೇಶಗಳು 400 ಮಿಲಿಯನ್ ಬ್ಯಾರೆಲ್ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಸರ್ವಾನುಮತದಿಂದ ಒಪ್ಪಿಕೊಂಡಿವೆ ಎಂದು ತಿಳಿದುಬಂದಿದೆ. ಐಇಎ ಇತಿಹಾಸದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ದಾಸ್ತಾನು ಇರಿಸಿದ ತೈಲವನ್ನು ಬಿಡುಗಡೆ ಮಾಡುತ್ತಿರುವುದು ಇದೇ ಮೊದಲು. ಐಇಎ ಸದಸ್ಯ ದೇಶಗಳು 1.2 ಶತಕೋಟಿ ಬ್ಯಾರೆಲ್‌ಗಳಿಗಿಂತ ಹೆಚ್ಚಿನ ತುರ್ತು ದಾಸ್ತಾನುಗಳನ್ನು ಹೊಂದಿದ್ದು ಇನ್ನೂ 600 ಮಿಲಿಯನ್ ಬ್ಯಾರೆಲ್ ತೈಲವನ್ನು ಕೈಗಾರಿಕಾ ದಾಸ್ತಾನುಗಳನ್ನು ಇರಿಸಲಾಗಿದೆ. ಈ ಹಿಂದೆ




1991, 2005, 2011, 2022ರಲ್ಲಿ ಎರಡು ಬಾರಿ ತೈಲ ಬಿಡುಗಡೆ ಮಾಡುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿತ್ತು.2025 ರಲ್ಲಿ ದಿನಕ್ಕೆ ಸರಾಸರಿ 20 ಮಿಲಿಯನ್ ಬ್ಯಾರೆಲ್‌ಗಳಷ್ಟು ಕಚ್ಚಾ ತೈಲ, ತೈಲ ಉತ್ಪನ್ನಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಿಸಲ್ಪಟ್ಟಿದ್ದವು. ಆದರೆ ಈಗ ಈ ಜಲಸಂಧಿಯನ್ನು ಇರಾನ್ ಬಂದ್ ಮಾಡಿದ್ದರಿಂದ ಕಚ್ಚಾ ತೈಲಗಳು ಸಂಸ್ಕರಣಾಗಾರವನ್ನು ತಲುಪುತ್ತಿಲ್ಲ. ಪರಿಣಾಮ ವಿಶ್ವಾದ್ಯಂತ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಭಾರೀ ಏರಿಕೆ ಕಾಣತೊಡಗಿದೆ. ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು ಪ್ಯಾರಿಸ್ ಮೂಲದ ಒಂದು ಸ್ವಾಯತ್ತ ಅಂತರ ಸರ್ಕಾರಿ ಸಂಸ್ಥೆಯಾಗಿದ್ದು, ಇದನ್ನು 1974ರಲ್ಲಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯ ಚೌಕಟ್ಟಿನಲ್ಲಿ ಸ್ಥಾಪಿಸಲಾಗಿತ್ತು. 1973–1974ರ ತೈಲ ಬಿಕ್ಕಟ್ಟಿನ ಸಮಯದಲ್ಲಿ, ತನ್ನ ಸದಸ್ಯ ರಾಷ್ಟ್ರಗಳಿಗೆ ತೈಲ ಪೂರೈಕೆಯಲ್ಲಿ ಉಂಟಾಗುವ ಅಡಚಣೆಗಳನ್ನು ಎದುರಿಸಲು ಸಹಾಯ ಮಾಡುವ ಉದ್ದೇಶದಿಂದ ಇದನ್ನು ಸ್ಥಾಪಿಸಲಾಗಿದೆ. 90 ದಿನಗಳ ಆಮದುಗಳಿಗೆ ಸಮಾನವಾದ ತುರ್ತು ತೈಲ ದಾಸ್ತಾನುಗಳನ್ನು ಹೊಂದಿರುವ ದೇಶಗಳಿಗೆ ಈ ಮಂಡಳಿಯಲ್ಲಿ ಸದಸ್ಯ ಸ್ಥಾನವನ್ನು ನೀಡಲಾಗುತ್ತದೆ.

ಸದಸ್ಯ ರಾಷ್ಟ್ರಗಳು ಯಾವುದು ಯುರೋಪ್ ಆಸ್ಟ್ರಿಯಾ, ಬೆಲ್ಜಿಯಂ, ಜೆಕಿಯಾ, ಡೆನ್ಮಾರ್ಕ್, ಎಸ್ಟೋನಿಯಾ, ಫಿನ್‌ಲ್ಯಾಂಡ್ , ಫ್ರಾನ್ಸ್, ಜರ್ಮನಿ, ಗ್ರೀಸ್, ಹಂಗೇರಿ, ಐರ್ಲೆಂಡ್, ಇಟಲಿ, ಲಾಟ್ವಿಯಾ, ಲಿಥುವೇನಿಯಾ, ಲಕ್ಸೆಂಬರ್ಗ್, ನಾರ್ವೆ, ಪೋಲೆಂಡ್, ಪೋರ್ಚುಗಲ್, ಸ್ಲೋವಾಕ್ ಗಣರಾಜ್ಯ, ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್, ನೆದರ್ಲ್ಯಾಂಡ್ಸ್, ಯುನೈಟೆಡ್ ಕಿಂಗ್‌ಡಮ್ ದೇಶಗಳಿವೆ.

# ಬದರಿನಾಥ, ಕೇದಾರನಾಥ ಸೇರಿ 47 ದೇವಾಲಯಗಳಲ್ಲಿ ಹಿಂದೂಯೇತರರಿಗೆ ಪ್ರವೇಶ ನಿರ್ಬಂಧ

**ಡೆಹ್ರಾಡೂನ್:** ಬದರಿನಾಥ, ಕೇದಾರನಾಥದ ಸೇರಿದಂತೆ 47 ದೇವಾಲಯಗಳಿಗೆ ಹಿಂದೂಯೇತರರ ಪ್ರವೇಶವನ್ನು ನಿಷೇಧಿಸಲಾಗಿದೆ. 2026ರ ಚಾರ್‌ಧಾಮ್ ಯಾತ್ರೆಗೆ ಮುಂಚಿತವಾಗಿ ಬದರಿನಾಥ–ಕೇದಾರನಾಥ ದೇವಾಲಯ ಸಮಿತಿ (ಬಿಕೆಟಿಸಿ)ಯು ತನ್ನ ವ್ಯಾಪ್ತಿಯಲ್ಲಿರುವ 47 ದೇವಾಲಯಗಳಿಗೆ ಹಿಂದೂಯೇತರರ ಪ್ರವೇಶವನ್ನು ನಿಷೇಧಿಸಿದೆ. ಡೆಹ್ರಾಡೂನ್‌ನಲ್ಲಿರುವ ತನ್ನ ಶಿಬಿರ ಕಚೇರಿಯಲ್ಲಿ ನಡೆದ ಸಮಿತಿಯ ಬಜೆಟ್ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದ್ದು, ನಿರ್ಬಂಧದ ಬೇಡಿಕೆ ಬಹಳ ಹಿಂದಿನಿಂದಲೂ ಇದೆ ಎಂದು ಅಧ್ಯಕ್ಷ ದ್ವಿವೇದಿ ತಿಳಿಸಿದ್ದಾರೆ.

ಸನಾತನ ಧರ್ಮವನ್ನು ಅನುಸರಿಸುವವರು, ಬಾಬಾ ಕೇದಾರನಾಥ, ಬದರಿ ವಿಶಾಲ್‌ನಲ್ಲಿ ನಂಬಿಕೆ ಇಡುವವರು ಮಾತ್ರ ಸ್ವಾಗತಾರ್ಹರು ಎಂದು ಹೇಳಿದರು. 47 ದೇವಾಲಯಗಳ ಗರ್ಭಗುಡಿ, ಆವರಣಗಳಿಗೆ ಹಿಂದೂಯೇತರರ ಪ್ರವೇಶವನ್ನು ಈಗ ಅಧಿಕೃತವಾಗಿ ನಿಷೇಧಿಸಲಾಗಿದೆ ಎಂದು ಅವರು ದೃಢಪಡಿಸಿದ್ದಾರೆ.

**ಯಾತ್ರೆಗೆ ನೋಂದಣಿ ಆರಂಭ:** ಉತ್ತರಾಖಂಡ ಸರ್ಕಾರವು ಚಾರ್‌ಧಾಮ್ ಯಾತ್ರೆಗೆ ಆನ್‌ಲೈನ್‌ನೋಂದಣಿ ಪೋರ್ಟಲ್ ಅನ್ನು ಪ್ರಾರಂಭಿಸಿದ್ದು, ಭಕ್ತರು ವಾರ್ಷಿಕ ಹಿಮಾಲಯನ್ ಯಾತ್ರೆಗೆ ಸೈನ್ ಅಪ್ ಮಾಡಲು ಅವಕಾಶ ಮಾಡಿಕೊಟ್ಟಿದೆ.



ಪ್ರತಿ ವರ್ಷ ದೇವಾಲಯಗಳಿಗೆ ಭೇಟಿ ನೀಡುವ ಯಾತ್ರಾರ್ಥಿಗಳ ದೊಡ್ಡ ಒಳಹರಿವನ್ನು ನಿರ್ವಹಿಸಲು ಸಹಾಯ ಮಾಡಲು ಬಹು ವೇದಿಕೆಗಳಲ್ಲಿ ಕಡ್ಡಾಯ ಡಿಜಿಟಲ್ ನೋಂದಣಿಯನ್ನು ಪರಿಚಯಿಸಲಾಗಿದೆ. ದೇವಾಲಯಗಳಿಗೆ ಭೇಟಿ ನೀಡಲು ಯೋಜಿಸುವ ಎಲ್ಲಾ ಯಾತ್ರಿಕರಿಗೆ ಇದು ಕಡ್ಡಾಯವಾಗಿದೆ. ಏಪ್ರಿಲ್ 19ರಂದು ಯಮುನೋತ್ರಿ ಮತ್ತು ಗಂಗೋತ್ರಿ ದೇವಾಲಯಗಳ ದ್ವಾರಗಳನ್ನು ತೆರೆಯುವುದರೊಂದಿಗೆ ತೀರ್ಥಯಾತ್ರೆ ಪ್ರಾರಂಭವಾಗುತ್ತದೆ. ಕೇದಾರನಾಥ ದೇವಾಲಯವು ಏಪ್ರಿಲ್ 22ರಂದು ತೆರೆಯಲಿದ್ದು, ಬದರಿನಾಥ ದೇವಾಲಯವು ಏಪ್ರಿಲ್ 23 ರಿಂದ ಭಕ್ತರನ್ನು ಸ್ವಾಗತಿಸಲಿದೆ.

# ಪ್ರಧಾನಿ ಮೋದಿ ಗುಣಗಾನ ಮಾಡಿದ ಮೋಹನ್‌ಲಾಲ್

**ಕೊಚ್ಚಿ:** ಕೇರಳದ ಸೂಪರ್‌ಸ್ಟಾರ್‌ಮೋಹನ್ ಲಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದ್ದಾರೆ, ಅವರನ್ನು ಕಲಾವಿದರು ಮತ್ತು ಸೃಷ್ಟಿಕರ್ತರನ್ನು ಆಳವಾಗಿ ಗೌರವಿಸುವ ನಿಜವಾದ ರಾಜನೀತಿಜ್ಞ ಮತ್ತು ದಾರ್ಶನಿಕ ನಾಯಕ ಎಂದು ಬಣ್ಣಿಸಿದ್ದಾರೆ.

ಕೇಂದ್ರ ಸರ್ಕಾರದ ನಾಗರಿಕ ಸಂವಹನ ವೇದಿಕೆಯಲ್ಲಿ ಪಾಡ್‌ಕ್ಯಾಸ್ಟ್‌ನಲ್ಲಿ ಮಾತನಾಡುತ್ತಾ ನಟ ಈ ಹೇಳಿಕೆ ನೀಡಿದ್ದಾರೆ. ಮೋದಿ ಅವರೊಂದಿಗೆ ಹಲವಾರು ಸಭೆಗಳನ್ನು ನಡೆಸಲು, ಪ್ರತಿ ಬಾರಿ ನಿಜವಾದ ರಾಜನೀತಿಜ್ಞ, ದೃಢ ಮತ್ತು ದಾರ್ಶನಿಕ ನಾಯಕನನ್ನು ಭೇಟಿಯಾಗುವ ಅನುಭವ ಅನುಭವಿಸಲು ತಾನು ಅತ್ಯಂತ ಅದೃಷ್ಟಶಾಲಿ ಎಂದು ಮೋಹನ್ ಲಾಲ್ ಹೇಳಿದರು. ನಮ್ಮ ರಾಷ್ಟ್ರಕ್ಕೆ ಅವರ ಸಮರ್ಪಣೆ ನಿಜವಾಗಿಯೂ ಸ್ಫೂರ್ತಿದಾಯಕ ವಾಗಿದೆ. ನಾನು ಯಾವಾಗಲೂ



ಅವರ ಶಕ್ತಿ ಮತ್ತು ದೃಷ್ಟಿಕೋನದ ಸ್ಪಷ್ಟತೆಯನ್ನು ಮೆಚ್ಚಿದ್ದೇನೆ. ಭಾರತವನ್ನು ಮುನ್ನಡೆಸುವಲ್ಲಿ ಅವರ ಬುದ್ಧಿವಂತಿಕೆ ಮತ್ತು ಅನುಗ್ರಹ ಶ್ಲಾಘನೀಯ ಎಂದು ನಟ ಹೇಳಿದರು.

ಮೋದಿ ಬಿಕ್ಕಟ್ಟನ್ನು ನಿವಾರಿಸುವ ಮತ್ತು ಎಲ್ಲಾ ಪ್ರತಿಕೂಲಗಳ ವಿರುದ್ಧ ದೇಶವನ್ನು ಬದುಕಲು ಮುನ್ನಡೆಸುವ ವಿಧಾನವು ಪ್ರತಿಯೊಬ್ಬ ವ್ಯಕ್ತಿಯು ಕಲಿಯ ಬೇಕಾದ ಮತ್ತು ಹೊಂದಿಕೊಳ್ಳಬೇಕಾದ ವಿಷಯ ಎಂದು ಮೋಹನ್ ಲಾಲ್ ಹೇಳಿದರು. ಪ್ರಧಾನಿ ನಿವಾಸದಲ್ಲಿ ಆತಿಥ್ಯ ವಹಿಸಿದ್ದಕ್ಕೆ ನನಗೆ ಹೆಮ್ಮೆಯಾಗುತ್ತದೆ ಮತ್ತು ಕಲಾವಿದರು, ಸೃಷ್ಟಿಕರ್ತರಿಗೆ ಅವರು ತೋರಿಸುವ ಉತ್ಸಾಹ, ಕಾಳಜಿ, ಗೌರವವನ್ನು ವೈಯಕ್ತಿಕವಾಗಿ ಅನುಭವಿಸಿದ್ದೇನೆ ಎಂದು ಅವರು ಹೇಳಿದರು.

# ಭಾರತ ತೈಲ ಖರೀದಿಸುವುದರಿಂದ ರಷ್ಯಾಗೆ ಲಾಭವಾಗುವುದಿಲ್ಲ ; ಅಮೆರಿಕ



**ನ್ಯೂಯಾರ್ಕ್:** ಇರಾನ್‌ನೊಂದಿಗಿನ ಸಂಘರ್ಷದ ಮಧ್ಯೆ ಇಂಧನ ಪೂರೈಕೆ ಖಚಿತಪಡಿಸಿಕೊಳ್ಳಲು ಅಮೆರಿಕವು ಭಾರತಕ್ಕೆ ಈಗಾಗಲೇ ಸಮುದ್ರದಲ್ಲಿರುವ ಹಡಗುಗಳಲ್ಲಿ ರಷ್ಯಾದ ತೈಲವನ್ನು ಸ್ವೀಕರಿಸಲು ತಾತ್ಕಾಲಿಕವಾಗಿ ಅನುಮತಿ ನೀಡಿದೆ ಮತ್ತು ಅಲ್ಪಾವಧಿಯ ಕ್ರಮವು ಮಾಸ್ಕೋಗೆ ಗಮನಾರ್ಹ ಆರ್ಥಿಕ ಪ್ರಯೋಜನವನ್ನು ನೀಡುವುದಿಲ್ಲ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಮತ್ತು ಇಡೀ ರಾಷ್ಟ್ರೀಯ ಭದ್ರತಾ ತಂಡವು ಭಾರತದಲ್ಲಿರುವ ನಮ್ಮ ಮಿತ್ರರಾಷ್ಟ್ರಗಳು ಉತ್ತಮ ನಟರಾಗಿರುವುದರಿಂದ ಮತ್ತು ಈ ಹಿಂದೆ ಅನುಮೋದಿತ ರಷ್ಯಾದ ತೈಲವನ್ನು ಖರೀದಿಸುವುದನ್ನು ನಿಲ್ಲಿಸಿರುವುದರಿಂದ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಲೀವಿಟ್ ಶ್ವೇತಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಇರಾನಿಯನ್ನರ ಕಾರಣದಿಂದಾಗಿ ಪ್ರಪಂಚದಾದ್ಯಂತ ತೈಲ ಪೂರೈಕೆಯಲ್ಲಿನ ಈ ತಾತ್ಕಾಲಿಕ ಅಂತರವನ್ನು ನೀಗಿಸಲು ನಾವು ಕೆಲಸ ಮಾಡುತ್ತಿರುವಾಗ, ಆ ರಷ್ಯಾದ ತೈಲವನ್ನು ಸ್ವೀಕರಿಸಲು ನಾವು ಅವರಿಗೆ ತಾತ್ಕಾಲಿಕವಾಗಿ ಅನುಮತಿ ನೀಡಿದ್ದೇವೆ.

ಈ ರಷ್ಯಾದ ತೈಲವು ಈಗಾಗಲೇ ಸಮುದ್ರದಲ್ಲಿತ್ತು. ಅದು ಈಗಾಗಲೇ ನೀರಿನ ಮೇಲೆ ಇತ್ತು ಆದ್ದರಿಂದ ಈ ಅಲ್ಪಾವಧಿಯ ಕ್ರಮವು, ಈ ಸಮಯದಲ್ಲಿ ರಷ್ಯಾದ ಸರ್ಕಾರಕ್ಕೆ ಗಮನಾರ್ಹ ಆರ್ಥಿಕ ಪ್ರಯೋಜನವನ್ನು ನೀಡುತ್ತದೆ ಎಂದು ನಾವು ನಂಬುವುದಿಲ್ಲ ಎಂದು ಅವರು ಹೇಳಿದರು.

ಪಶ್ಚಿಮ ಏಷ್ಯಾ ಸಂಘರ್ಷ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಷ್ಯಾ ತೈಲ ಖರೀದಿಗೆ ಭಾರತಕ್ಕೆ ಅಮೆರಿಕ 30 ದಿನಗಳ ವಿನಾಯಿತಿ ನೀಡಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಲೀವಿಟ್ ಉತ್ತರಿಸುತ್ತಿದ್ದರು.ಇರಾನ್ ಜೊತೆಗಿನ ಸಂಘರ್ಷದ ಮಧ್ಯೆ, ಭಾರತೀಯ ಸಂಸ್ಕರಣಾಗಾರಗಳು ರಷ್ಯಾದ ತೈಲವನ್ನು ಖರೀದಿಸಲು ಅವಕಾಶ ನೀಡಲು ತಾತ್ಕಾಲಿಕ 30 ದಿನಗಳ ವಿನಾಯಿತಿ ನೀಡುತ್ತಿರುವುದಾಗಿ ಅಮೆರಿಕ ಕಳೆದ ವಾರ ಹೇಳಿದೆ.

ಅಧ್ಯಕ್ಷ ಟ್ರಂಪ್ ಅವರ ಇಂಧನ ಕಾರ್ಯಸೂಚಿಯು ತೈಲ ಮತ್ತು ಅನಿಲ ಉತ್ಪಾದನೆಯು ಇದುವರೆಗೆ ದಾಖಲಾದ ಅತ್ಯುನ್ನತ ಮಟ್ಟವನ್ನು ತಲುಪಲು ಕಾರಣವಾಗಿದೆ. ಜಾಗತಿಕ ಮಾರುಕಟ್ಟೆಗೆ ತೈಲ ಹರಿಯುವಂತೆ ಮಾಡಲು, ಖಜಾನೆ ಇಲಾಖೆ ಭಾರತೀಯ ಸಂಸ್ಕರಣಾಗಾರಗಳು ರಷ್ಯಾದ ತೈಲವನ್ನು ಖರೀದಿಸಲು ಅವಕಾಶ ನೀಡಲು ತಾತ್ಕಾಲಿಕ 30 ದಿನಗಳ ವಿನಾಯಿತಿ ನೀಡುತ್ತಿದೆ ಎಂದು ಬೆಸೆಂಟ್ ಹೇಳಿದ್ದರು. ಈ ಉದ್ದೇಶಪೂರ್ವಕವಾಗಿ ಅಲ್ಪಾವಧಿಯ ಕ್ರಮವು ರಷ್ಯಾ ಸರ್ಕಾರಕ್ಕೆ ಗಮನಾರ್ಹ ಆರ್ಥಿಕ ಪ್ರಯೋಜನವನ್ನು ನೀಡುವುದಿಲ್ಲ ಏಕೆಂದರೆ ಅದು ಈಗಾಗಲೇ ಸಮುದ್ರದಲ್ಲಿ ಸಿಲುಕಿರುವ ತೈಲವನ್ನು ಒಳಗೊಂಡ ವಹಿವಾಟುಗಳನ್ನು ಮಾತ್ರ ಅಧಿಕೃತಗೊಳಿಸುತ್ತದೆ ಎಂದು ಅವರು ಹೇಳಿದ್ದರು.

# ಆಂಧ್ರ ಪ್ರದೇಶ : ಕಲಬೆರಕೆ ಹಾಲು ಸೇವಿಸಿ 13 ಸಾವು

**ರಾಜಮಹೇಂದ್ರವರಂ:** ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಶಂಕಿತ ಹಾಲು ಕಲಬೆರಕೆ ಪ್ರಕರಣದಲ್ಲಿ ಸಾವನ್ನಪ್ಪಿದವರ ಸಂಖ್ಯೆ 13 ಕ್ಕೆ ಏರಿದ್ದು, ಏಳು ಜನರು ರಾಜಮಹೇಂದ್ರವರಂನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಫೆಬ್ರವರಿ 22 ರಂದು ಹಲವಾರು ವೃದ್ಧ ನಿವಾಸಿಗಳು ಅನುರಿಯಾ, ವಾಂತಿ, ಹೊಟ್ಟೆನೋವು ಮತ್ತು ಡಯಾಲಿಸಿಸ್ ಅಗತ್ಯವಿರುವ ತೀವ್ರ ಮೂತ್ರಪಿಂಡದ ಅಸಾಮಾನ್ಯ ಕ್ರಿಯೆಯಂತಹ ರೋಗಲಕ್ಷಣಗಳೊಂದಿಗೆ ಆಸ್ಪತ್ರೆಗಳಿಗೆ ದಾಖಲಾದ ನಂತರ ಪ್ರಕರಣಗಳ ಗುಂಪನ್ನು ಮೊದಲು ಗಮನಿಸಲಾಯಿತು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಲಾಲಚೆರುವಿನ ಚೌಡೇಶ್ವರನಗರ ಮತ್ತು ಸ್ವರೂಪನಗರ ಪ್ರದೇಶಗಳ ನಿವಾಸಿಗಳು ಕಲಬೆರಕೆ ಮತ್ತು ಪ್ರದೇಶದಲ್ಲಿ ಸರಬರಾಜು



ಮಾಡಲಾದ ಶಂಕಿತ ಹಾಲು ಸೇವಿಸಿದ ನಂತರ ಅಸ್ವಸ್ಥರಾಗಿದ್ದಾರೆ ಎಂದು ವರದಿಯಾಗಿದೆ. ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಶಂಕಿತ ಹಾಲು ಕಲಬೆರಕೆ ಪ್ರಕರಣದಲ್ಲಿ ಸಾವಿನ ಸಂಖ್ಯೆ 13ಕ್ಕೆ ತಲುಪಿದೆ, ಆದರೆ ಏಳು ಜನರು ರಾಜಮಹೇಂದ್ರವರಂನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿ ಹೇಳಿದರು. ಬಲವಾದ ಸಾಂಕ್ರಾಮಿಕ ರೋಗಶಾಸ್ತ್ರೀಯ ಸೂಚಕಗಳು ಹಾಲು ಕಲಬೆರಕೆಗೆ ಸಂಭವನೀಯ ಕಾರಣವೆಂದು ಸೂಚಿಸುತ್ತವೆ ಮತ್ತು ಬಹು ಇಲಾಖೆಗಳು ಸಂಘಟಿತ ಕ್ರಮವನ್ನು ಪ್ರಾರಂಭಿಸಿವೆ ಎಂದು ಅಧಿಕಾರಿಗಳು ಗಮನಿಸಿದ್ದಾರೆ.

ವೈದ್ಯಕೀಯ ಪರೀಕ್ಷೆಗಳಲ್ಲಿ ಪೀಡಿತ ವ್ಯಕ್ತಿಗಳಲ್ಲಿ ರಕ್ತದ ಯೂರಿಯಾ, ಸೀರಮ್ ಕ್ರಿಯೇಟಿನೈನ್ ಮಟ್ಟಗಳು ಹೆಚ್ಚಾಗಿದ್ದು, ವಿಷಕಾರಿ ಅಂಶ ಹೆಚ್ಚಾಗಿರುವುದನ್ನು ಸೂಚಿಸಲಾಗಿದೆ ಎಂದು ಅವರು ಹೇಳಿದರು.ಪ್ರಾಥಮಿಕ ತನಿಖೆಗಳಲ್ಲಿ ಹಾಲಿನ ಸೇವನೆಯು ವಿಷಕ್ಕೆ ಪ್ರಮುಖ ಕಾರಣ ಎಂದು ತಿಳಿದುಬಂದಿದೆ. ಕೊರುಕೊಂಡ ಮಂಡಲದ ನರಸಪುರಂ ಗ್ರಾಮದ ವರಲಕ್ಷ್ಮಿ ಮಿಲ್ಕ್ ಡೈರಿಯಿಂದ ಸುಮಾರು 106 ಕುಟುಂಬಗಳಿಗೆಹಾಲು ಸರಬರಾಜು ಮಾಡಲಾಗಿತ್ತು ಎಂದು ವರದಿಯಾಗಿದೆ, ನಂತರ ಪೂರೈಕೆಯನ್ನು ತಕ್ಷಣವೇ ಸ್ಥಗಿತಗೊಳಿಸಲಾಯಿತು. ಪೀಡಿತ ಪ್ರದೇಶಗಳಲ್ಲಿ ತುರ್ತು ವೈದ್ಯಕೀಯ ಶಿಬಿರಗಳನ್ನು ಸ್ಥಾಪಿಸಲಾಗಿದ್ದು, ವೈದ್ಯರು ಮತ್ತು ಆಂಬ್ಯುಲೆನ್ಸ್ ಸೇವೆಗಳನ್ನು 24/7 ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಸ್ಥಿತಿಯನ್ನು ನಿಭಾಯಿಸಲು ಜಿಲ್ಲಾ ಕಣ್ಗಾವಲು ಅಧಿಕಾರಿ, ವೈದ್ಯರು, ಸೂಕ್ಷ್ಮ ಜೀವಶಾಸ್ತ್ರಜ್ಞರು, ಮಕ್ಕಳ ವೈದ್ಯರು, ವಿಧಿವಿಜ್ಞಾನ ತಜ್ಞರು, ಸಾಂಕ್ರಾಮಿಕ ರೋಗಶಾಸ್ತ್ರಜ್ಞರು ಮತ್ತು ಮೂತ್ರಪಿಂಡಶಾಸ್ತ್ರಜ್ಞರನ್ನು ಒಳಗೊಂಡ ಕ್ಷಿಪ್ರ ಪ್ರತಿಕ್ರಿಯೆ ತಂಡಗಳನ್ನು ರಚಿಸಲಾಗಿದೆ. ಈ ಮಧ್ಯೆ, ಆಹಾರ ಸುರಕ್ಷತಾ ಇಲಾಖೆಯು ಪೂರೈಕೆಗೆ ಸಂಬಂಧಿಸಿದ ಡೈರಿ ಘಟಕವನ್ನು ಪರಿಶೀಲಿಸಿತು ಮತ್ತು ಕಣ್ಗಾವಲು ಮತ್ತು ಜಾರಿಗಾಗಿ ಹಾಲು, ಪನೀರ್, ತುಪ್ಪ, ಕುಡಿಯುವ ನೀರು ಮತ್ತು ವಿನೆಗರ್ ಮಾದರಿಗಳನ್ನು ಸಂಗ್ರಹಿಸಿತು.ಮಾದರಿಗಳನ್ನು ಸೂಕ್ಷ್ಮಜೀವಿಯ, ಭೌತ–ರಾಸಾಯನಿಕ ಮತ್ತು ವಿಷಕಾರಿ ಕಲಬೆರಕೆ ವಿಶ್ಲೇಷಣೆಗಾಗಿ ಜೆಎನ್‌ಟಿಯು ಕಾಕಿನಾಡ ಮತ್ತು ಹೈದರಾಬಾದ್‌ನ ವಿಐಎಂಟಿಎ ಲ್ಯಾಬ್‌ಗಳು ಸೇರಿದಂತೆ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ.


# ಸಚಿವ ಜೈಶಂಕರ್ ಮಾತುಕತೆಗೆ ಸಂದ ಫಲ

## ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ತೈಲ ಟ್ಯಾಂಕರ್ ಗಳ ಸಂಚಾರಕ್ಕೆ ಇರಾನ್ ಗ್ರೀನ್ ಸಿಗ್ನಲ್

**ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗುತ್ತಿದ್ದು, ಈ ಬೆನ್ನಲ್ಲೇ, ಜಾಗತಿಕ ತೈಲ ಸರಬರಾಜಿನಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುವ ಹೊರ್ಮುಜ್ ಜಲಸಂಧಿಯನ್ನು ಇರಾನ್ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದು, ಇದರಿಂದಾಗಿ ಸಾವಿರಾರು ಸಂಖ್ಯೆಯ ಹಡಗುಗಳು ಈ ಪ್ರದೇಶದಲ್ಲೇ ಸ್ಥಗಿತಗೊಳ್ಳುವ ಪರಿಸ್ಥಿತಿ ಎದುರಾಗಿದ್ದು, ಜಾಗತಿಕ ಇಂಧನ ಪೂರೈಕೆಯಲ್ಲಿ ಅನಿಶ್ಚಿತತೆ ಎದುರಾಗಿದೆ. ಅದರಲ್ಲೂ ಪ್ರಮುಖವಾಗಿ ಭಾರತಕ್ಕೆ ಇರದ ಎಫೆಕ್ಟ್ ಜೋರಾಗಿದ್ದು, ಎಲ್ ಪಿಜಿ ಗ್ಯಾಸ್ ಪೂರೈಕೆಯಲ್ಲಿ ಸ್ಥಗಿತವಾಗುವ ಆತಂಕದಿಂದ ಬೆಲೆ ಏರಿಕೆಯಾಗಿದೆ.

**ಭಾರತಕ್ಕೆ ಎಫೆಕ್ಟ್ ಜೋರು**

**ಭಾರತದ ತೈಲ ಟ್ಯಾಂಕರ್ ಹೊರ್ಮುಜ್ ಜಲಸಂಧಿ ದಾಟಲು ಇರಾನ್ ಒಪ್ಪಿಗೆ:** ಈ ಹಿನ್ನಲೆಯಲ್ಲಿ ಭಾರತದ ವಿದೇಶಾಂಗ ಸಚಿವ ಡಾ.ಎಸ್ ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿಯೊಂದಿಗೆ ತಡರಾತ್ರಿ ರಾಜತಾಂತ್ರಿಕ ಮಾತುಕತೆ ನಡೆಸಿದ್ದಾರೆ. ಈ ಬೆನ್ನಲ್ಲೇ, ಹೊರ್ಮುಜ್ ಜಲಸಂಧಿಯಲ್ಲಿ ಸ್ಥಗಿತವಾಗಿರುವ ಹಡಗುಗಳ ಪೈಕಿ ಭಾರತದ 2 ತೈಲ ಟ್ಯಾಂಕರ್ ಗಳನ್ನು ಜಲಸಂಧಿ ಮೂಲಕ ಸುರಕ್ಷಿತವಾಗಿ ಹಾದುಹೋಗಲು ಅನುವು ಮಾಡಿಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಜಾಗತಿಕವಾಗಿ ಇಂಧನ ವಲಯದಲ್ಲಿ ಕಂಡು ಬರುತ್ತಿರುವ ಅನಿಶ್ಚಿತತೆಗಳ ಹೊರತಾಗಿಯೂ ಭಾರತದದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ವೃದ್ಧಿಸಿಕೊಳ್ಳಲು ಇರಾನ್ ಆಸಕ್ತಿ ತೋರುತ್ತಿದೆ. ಇದೀಗ ಮಾತುಕತೆಗಳ ಫಲವಾಗಿ ಭಾರತ ಧ್ವಜವಿರುವ ತೈಲ ಟ್ಯಾಂಕರ್‌ಗಳಾದ ಪುಷ್ಪಕ್, ಪರಿಮಳ್ ಎಂಬ ಟ್ಯಾಂಕರ್‌ಗಳನ್ನು ಸುರಕ್ಷಿತವಾಗಿ ಜಲಸಂಧಿ ಮೂಲಕ ಹಾದು ಭಾರತವನ್ನು ತಲುಪಲು ಅನುಮತಿ ನೀಡಿದೆ. ಈ ಮೂಲಕ ಭಾರತ ಹೊರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲ, ನೈಸರ್ಗಿಕ ಅನಿಲ ಸಾಗಣೆಯ ಸುರಕ್ಷಿತ ಚಲನೆಯನ್ನು ಖಚಿತಪಡಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನಕ್ಕೆ ಫಲ ದೊರಕಿದೆ.



**ಇಂಧನ ಭದ್ರತೆ ಹೆಚ್ಚಳಕ್ಕೆ ರಷ್ಯಾ ಸೇರಿ ವಿವಿಧ ದೇಶಗಳೊಂದಿಗೆ ಭಾರತ ಮಾತುಕತೆ:**



ಇನ್ನು, ಭಾರತ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಕೇವಲ ಪಶ್ಚಿಮ ಏಷ್ಯಾದ ರಾಷ್ಟ್ರಗಳು ಮಾತ್ರವಲ್ಲದೆ, ಜಾಗತಿಕವಾಗಿ ಹಲವು ಪಾಲುದಾರರೊಂದಿಗೆ ನಿಕಟ ಸಂದಂಭವನ್ನು ಹೊಂದುವ ಮೂಲಕ ಕೆಲಸ ಮಾಡುತ್ತಿದ್ದು, ಇರಾನ್ ಜೊತೆಗಿನ ಮಾತುಕತೆ ಬಳಿಕ ಡಾ.ಜೈಶಂಕರ್ ಅವರು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್, ಫ್ರೆಂಚ್ ವಿದೇಶಾಂಗ ಸಚಿವ ಜೀನ್ –ನೊಯೆಲ್ ಬ್ಯಾರಟ್ ಮತ್ತು ಯುರೋಪಿಯನ್ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ ಕಾಜಾ ಕಲ್ಲಾಸ್ ಸೇರಿದಂತೆ ಹಲವಾರು ನಾಯಕರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿ, ಜಾಗತಿಕ ಭದ್ರತೆ, ಇಂಧನ ಮಾರುಕಟ್ಟೆಗಳ ಮೇಲೆ ಬಿಕ್ಕಟ್ಟಿನ ಪರಿಣಾಮದ ಕುರಿತು ಚರ್ಚೆ ನಡೆಸಿರುವುದಾಗಿ ವರದಿಯಾಗಿದೆ. ಅಷ್ಟೇ ಅಲ್ಲದೆ, ಈಗಾಗಲೇ ಇರಾನ್ ತೈಲ ಟ್ಯಾಂಕರ್‌ಗಳ ಮೇಲೆ ನಡೆಸಿರುವ ದಾಳಿಗಳನ್ನು 3 ಭಾರತೀಯರು ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಈ ಬೆನ್ನಲ್ಲೇ, ಭಾರತ ಇರಾನ್ ನೊಂದಿಗೆ ಮಾತುಕತೆ ನಡೆಸಿ ತೈಲ ಟ್ಯಾಂಕರ್‌ಗಳನ್ನು ಭಾರತಕ್ಕೆ ಸಾಗಿಸಲು ಅನುಮತಿ ಪಡೆದಿದ್ದು, ತೈಲ ಟ್ಯಾಂಕರ್‌ಗಳು ಹಾಗೂ ಗ್ರಾಹಕರಿಗೆ ಕೊಂಚ ನಿರಾಳವನ್ನುಂಟು ಮಾಡಲಿದೆ.

**ಭಾರತಕ್ಕೆ ಇಂಧನ ವಲಯಕ್ಕೆ ತಟ್ಟಿದ ಇರಾನ್ ಯುದ್ಧದ ಬಿಸಿ**

**ಈಗಾಗಲೇ ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಭಾರತದಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯ ಕಂಡು ಬರುತ್ತಿದ್ದು, ಪ್ರಮುಖ ನಗರಗಳಾದ ಬೆಂಗಳೂರು, ಚೆನ್ನೈ ಮತ್ತು ಮುಂಬೈಗಳಲ್ಲಿ ಗೃಹಬಳಕೆ ಹಾಗೂ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರಗಳ ವಿತರಣೆ ಎರಡರಲ್ಲೂ ಅನಿಶ್ಚಿತತೆ ಉಂಟಾಗಿದೆ. ಇದರಿಂದಾಗಿ ಸಿಲಿಂಡರ್ ಬೆಲೆಯಲ್ಲಿ ಭಾರಿ ಹೆಚ್ಚಳ ಕಂಡು ಬರುತ್ತಿದ್ದು, ಹೊಟೇಲ್ ಉದ್ಯಮಕ್ಕೆ ಭಾರಿ ಹೊಡೆತ ಬಿದ್ದಿದೆ.**

